SAPTHAGIRI(KANNADA)
ILLUSTRATED MONTHLY
Volume:01,Issue:08,Pages:56
March-2022,Price Rs.5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮಾರ್ಚ್ 2022

ಬೆಲೆ ರೂ. 5/-

## ನಾಗುಲಾಪುರಂ
## ಶ್ರೀ ವೇದನಾರಾಯಣ ಸ್ವಾಮಿಯವರ
## ತೆಪ್ಪೋತ್ಸವಗಳು
## 24-03-2022 ರಿಂದ 28-03-2022 ರ ವರೆಗೆ





## ತಿರುಮಲ ತಿರುಪತಿ ದೇವಸ್ಥಾನಗಳು

# ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 2022 ಏಪ್ರಿಲ್ 10 ರಿಂದ 18 ರ ವರೆಗೆ

**10-04-2022**
ಭಾನುವಾರ
ಹಗಲು : ಧ್ವಜಾರೋಹಣ
ರಾತ್ರಿ : ಶೇಷವಾಹನ

**11-04-2022**
ಸೋಮವಾರ
ಹಗಲು : ವೇಣುಗಾನಾಲಂಕಾರ
ರಾತ್ರಿ : ಹಂಸವಾಹನ

**12-04-2022**
ಮಂಗಳವಾರ
ಹಗಲು : ವಟಪತ್ರಶಾಯಿ ಅಲಂಕಾರ
ರಾತ್ರಿ : ಸಿಂಹವಾಹನ

**13-04-2022**
ಬುಧವಾರ
ಹಗಲು : ನವನೀತಕೃಷ್ಣಾಲಂಕಾರ
ರಾತ್ರಿ : ಹನುಮತ್ಸೇವೆ

**14-04-2022**
ಗುರುವಾರ
ಹಗಲು : ಮೋಹಿನಿಸೇವೆ
ರಾತ್ರಿ : ಗರುಡಸೇವೆ

**15-04-2022**
ಶುಕ್ರವಾರ
ಹಗಲು : ಶಿವಧನುರ್ಬಾಣಾಲಂಕಾರ
ರಾತ್ರಿ : ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ

**16-04-2022**
ಶನಿವಾರ
ಹಗಲು : ರಥೋತ್ಸವ

**17-04-2022**
ಭಾನುವಾರ
ಹಗಲು : ಕಾಳೀಯಮರ್ಧನಾಲಂಕಾರ
ರಾತ್ರಿ : ಅಶ್ವವಾಹನ

**18-04-2022**
ಸೋಮವಾರ
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

# ಭಗವದ್ಗೀತೆ



**ನಿಹತ್ಯ ಧಾರ್ತ ರಾಷ್ಟ್ರಾನ್ನಃ ಕಾಪ್ರೀತಿಃ ಸ್ಯಾಜ್ಜನಾರ್ದನ ।**
**ಪಾಪಮೇವಾಽಶ್ರಯೇದಸ್ಮಾನ್ ಹತ್ವೈ ತಾನಾತ ತಾಯಿನಃ ॥**

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -35)

**ಕೃಷ್ಣ, ಕೌರವರನ್ನು ಕೊಂದು ನಮಗೇನು ತೃಪ್ತಿ ಈ ಕೇಡಿಗರನ್ನು ಕೊಲ್ಲುವುದರಿಂದ ನಮಗೆ ಪಾಪವೇ ಗಂಟು ಬಿದ್ದೀತು.**



ಶಂಭೋ ಮಹಾದೇವ । ಶಂಕರ ಗಿರಿಜಾ ರಮಣ
ಶಂಭೋ ಮಹಾದೇವ  ಶರಣಾಗತ ಜನ ರಕ್ಷಕ
ಅಂಭೋರುಹಲೋಚನ । ಪದಾಂಬುಜಭಕ್ತಿಂ ದೇಹಿ


ಪರಮದಯಾಕರ ಮೃಗಧರ । ಹರಗಂಗಾಧರ ಧರಣೀ
ಧರ ಭೂಷಣ ತ್ಯಾಗರಾಜ ವರ ಹೃದಯ ನಿವಾಸ॥
ಸುರಬೃಂದ ಕಿರೀಟ ಮಣಿವರ ನೀರಾಜಿತ ಪದ ॥ ಗೋ
ಪುರವಾಸ ಸುಂದರೇಶ ಗಿರೀಶ ಪರಾತ್ಪರ ಭವಹರ

ಶಂಭೋ ಮಹಾದೇವ ಚಂದ್ರಚೂಡ
ಶಂಕರ ಸಾಂಬಸದಾಶಿವ ॥ ಗಂಗಾಧರ ಕೈಲಾಸವಾಸ
ಪಾಹಿ ಮಾಮ್ ಪಾರ್ವತೀ ರಮಣ॥

- ಶ್ರೀ ತ್ಯಾಗರಾಜರು

(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ತ್ವಯಾ ದೃಷ್ಟಸ್ತುಷ್ಟಿಂ ಭಜತಿ ಪರಮೇಷ್ಠೀ ನಿಜಪದೇ ವಹನ್ಮೂರ್ತೀರಷ್ಟೌ ವಿಹರತಿ ಮೃಡಾನೀಪರಿಬೃಢಃ।

ಬಿಭರ್ತಿ ಸ್ವಾರಾಜ್ಯಂ ವೃಷಶಿಖರಿಶೃಂಗಾರಿಕರುಣೇ ಶುನಾಸೀರೋ ದೇವಾಸುರಸಮರನಾಸೀರಸುಭಟಃ॥ ೬೬॥

ಹಿಂದಿನ ಪದ್ಯದಲ್ಲಿ ಅತ್ಯಲ್ಪರಾದ ಭಾಗವತರ ವಿಷಯದಲ್ಲಿ ದಯಾಪ್ರವಾಹದ ಹಿರಿಮೆಯು ವರ್ಣಿಸಲ್ಪಟ್ಟಿತು.ಇಲ್ಲಿ ಅತ್ಯಂತ ಶ್ರೇಷ್ಠರೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಬ್ರಹ್ಮ, ರುದ್ರ, ಇಂದ್ರಾದಿಗಳ ವಿಷಯದಲ್ಲಿ ದಯಾದೇವಿಯ ಕಾರ್ಯವು ವರ್ಣಿಸಲ್ಪಡುವುದು. ಹಿಂದಿನ ಪದ್ಯದಲ್ಲಿ ದಯಾಗುಣದ ರೂಪಾಂತರವಾದ ಸೌಶೀಲ್ಯಗುಣವು ಪ್ರಸ್ತಾಪಿಸಲ್ಪಟ್ಟಿತು. ಹಾಗೆಯೇ ಇಲ್ಲಿ ದಯೆಗೆ ಅಂತರಂಗವಾದ ಔದರ್ಯ ವೆಂಬ ಗುಣವು ನಿರೂಪಿಸಲ್ಪಡುವುದು.

ಬ್ರಹ್ಮ, ರುದ್ರ, ಇಂದ್ರನೆಂಬ ಈ ಮೂವರೂ ಭಗವಂತನಿಗೆ ಅತ್ಯಂತ ಅಂತರಂಗರೆನ್ನುವುದರಲ್ಲಿ ಸಂದೇಹ ವಿಲ್ಲ. ಅವರು ತಮ್ಮ ತಮ್ಮ ಪದವಿಯಲ್ಲಿ ಸುಖವಾಗಿ ಬಾಳುತ್ತಿರುವುದು ಕೂಡ ದಯಾದೇವಿಯ ಕಟಾಕ್ಷ ದಿಂದಲೇ. ಇವಳ ಕಟಾಕ್ಷವಿಲ್ಲದಿದ್ದರೆ ಅವರು ಆ ಪದವಿಗಳಲ್ಲಿ ಒಂದು ಕ್ಷಣವಾದರೂ ಇರಲು ಸಾಧ್ಯವಿಲ್ಲ. ಇವರಿಗೆ ಆಗಾಗ ಉಂಟಾಗುವ ತೊಂದರೆಗಳೂ, ಅವುಗಳನ್ನು ಭಗವಂತನು ಪರಮ ದಯೆಯಿಂದ ಹೋಗ ಲಾಡಿಸಿ ಕಾಪಾಡುವುದೂ ಪುರಾಣಗಳಲ್ಲಿ ಪ್ರಸಿದ್ಧವಾದುದು. ಇಲ್ಲಿ ದಯೆಯು ಔದಾರ್ಯವೆಂಬ ಗುಣದಿಂದ ಇಂತಹ ಹಿರಿಯ ಪದವಿಗಳಲ್ಲಿ ಅವರನ್ನು ಸ್ಥಾಪಿಸುವಳೆಂಬುದೂ, ಶ್ರೀನಿವಾಸನೆಂಬ ಶ್ರೀಮನ್ನಾರಾಯಣನೇ ಸರ್ವದೇವತಾ ಸಾರ್ವಭೌಮನೆಂಬುದೂ, ಅವನ ದಯೆಯಿಂದಲೇ ಇತರ ಸರ್ವ ದೇವತೆಗಳೂ ಉತ್ತಮ ಸ್ಥಾನವನ್ನು ಪಡೆದು ಬಾಳುವರೆಂಬ ಶಾಸ್ತ್ರಾರ್ಥವು ತಿಳಿಯಲ್ಪಡಬಹುದಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಪ್ಲವನಾಮ ಸಂವತ್ಸರ ಮಾಘ-ಫಾಲ್ಗುಣ ಮಾಸ ಸಂಚಿಕೆ

ಸಂಪುಟ - 01 ಮಾರ್ಚ್ 2022 ಸಂಚಿಕೆ -08




## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಕನ್ನಡ ಶಾಸನಗಳಲ್ಲಿ ಶಿವ ಸ್ತುತಿಗಳು | -ಡಾ॥ ಎಸ್. ನಂಜುಂಡಸ್ವಾಮಿ | 7 |
| ಹರಿಕಥಾಮೃತಸಾರಮಹಿಮೆಬಲುಅಪಾರ | -ಶ್ರೀಮತಿ. ಪ್ರಿಯಾಪ್ರಾಣೇಶ ಹರಿದಾಸ ಕಾಖಂಡಕಿ | 11 |
| ಭಾವಿಸಮೀರಶ್ರೀವಾದಿರಾಜರು | -ಶ್ರೀಧರ ರಾಯಸಂ | 12 |
| ಶುಂಠಿಯಿಂದಆರೋಗ್ಯಧೃಡಕಾಯ | -ಡಿ.ಎಸ್.ಬದ್ರಿನಾಥ್ | 15 |
| ಹೋಳಿ.. ಬಣ್ಣದೋಕುಳಿ... | -ಹನುಮಂತ ಮ. ದೇಶಕುಲಕರ್ಣಿ | 17 |
| ಧರೆಯಕಾಮಧೇನು ಕಲ್ಪವೃಕ್ಷ ಶ್ರೀಗುರುರಾಘವೇಂದ್ರ | - ಪ್ರಿಯಕೃಷ್ಣ | 19 |
| ಪುಸ್ತಕ ಪರಿಚಯ - ಸಾಗರದಾಚೆ ಹರಡಿರುವ ಭಾರತೀಯ ಸಂಸ್ಕೃತಿ | - ಬಿ.ಎಸ್. ರಾಮಮೂರ್ತಿ | 21 |
| ಹೊಂಗನೂರಿನ ಶ್ರೀ ವೇಣುಗೋಪಾಲ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀವೆಂಕಟೇಶ್ವರಸ್ವಾಮಿಆಲಯ | -ದಿ॥ ಬಿ.ಎನ್.ಶ್ರೀನಿವಾಸನ್ | 24 |
| ಪದಬಂಧ | -ಪಿ. ಜಿ. ಶ್ರೀನಿವಾಸನ್ | 26 |
| ಕಪಿಲತೀರ್ಥ | - | 31 |
| ಲಕ್ಷ್ಮೀಬಾರಮ್ಮ...ಬಾರಮ್ಮ! | -ಶ್ರೀಮತಿ. ಕೆ.ವಿ. ಪದ್ಮಾವತಿ | 32 |
| 108 ವೈಷ್ಣವ ದಿವ್ಯ ಕ್ಷೇತ್ರಗಳು | -ಸೂರ್ಯವಂಶಿ | 34 |
| ಚಕ್ರವರ್ತಿಯರಾಜಗುರುಶ್ರೀವ್ಯಾಸರಾಜ ಗುರುಸಾರ್ವಭೌಮರು | -ಶ್ರೀಮತಿ. ಆರ್. ಗೀತ | 38 |
| ಸಂಸ್ಕೃತ ಕಲಿಯೋಣ | -ಮಹಾಮಹೋಪಾಧ್ಯಾಯಸಮುದ್ರಾಲಲಕ್ಷ್ಮಣಯ್ಯ | 41 |
| ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ | -ಡಾ॥ ಸುಭಾಸ ಕಾಖಂಡಕಿ | 42 |
| ಆಯುರ್ವೇದಮತ್ತುನಾವು | -ಡಾ॥ ಪ್ರದೀಪ್‌ಕುಮಾರ್ ಹೆಬ್ರಿ | 43 |
| ತಿರುಮಲೆ-ಕಾಲಮಾನಾಚರಣೆಗಳು | - ಶ್ರೀಮತಿ | 44 |
| ಆಳ್ವಾರುಗಳುಕಂಡತಿರುವೇಂಗಡ | - ಎಂ. ಆರ್. ನರಸಿಂಹನ್ | 46 |
| ಶ್ರೀಮದ್ಭಗವದ್ಗೀತೆ | - ಶ್ರೀಮತಿ. ಬಿ. ಪದ್ಮಜ | 48 |
| ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರ | - ಆರ್. ಶ್ರೀನಿಧಿ | 49 |
| ನೀತಿ ಕಥೆ - ಪರಮ ಭಕ್ತ ಪರೀಕ್ಷಿತ್ ರಾಜ | -ಶ್ರೀಮತಿ. ಎ. ಗೀತಾ ವೀರ ರಾಘವನ್ | 51 |
| ಚಿತ್ರ ಕಥೆ -ಶಿವನಿಂದ ಮುಕ್ತಿ ಪಡೆದ ಮೂಕ ಪ್ರಾಣಿಗಳು | - ಡಿ. ಶ್ರೀನಿವಾಸದೀಕ್ಷಿತರು | 52 |
| ಕ್ವಿಜ್ | | 54 |


ಮುಖಚಿತ್ರ - ಶ್ರೀವೇದನಾರಾಯಣಸ್ವಾಮಿ, ನಾಗುಲಾಪುರಂ

ಹಿಂಬದಿಚಿತ್ರ - ಶ್ರೀಲಕ್ಷ್ಮೀನರಸಿಂಹಸ್ವಾಮಿ, ತರಿಗೊಂಡ


**ಗೌರವ ಸಂಪಾದಕರು**

ಡಾ॥ ಕೆ. ಎಸ್. ಜವಹರ್ ರೆಡ್ಡಿ, ಐ.ಎ.ಎಸ್

ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**

ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ .ಪಿ. ರಾಮರಾಜು ,ಎಮ್.ಎ.

ವಿಶೇಷಾಧಿಕಾರಿ,

ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ

ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್.ಶೇಖರ್,

ಛಾಯಗ್ರಹಣ,ತಿ.ತಿ.ದೇ.

ಶ್ರೀ ಬಿ.ವೆಂಕಟರಮಣ,

ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು www.tirumala.org ಮೂಲಕ ವೀಕ್ಷಿಸಬಹುದು.


| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |



ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ವೇದಗಳ ಕಾಲದಲ್ಲಿ ಮಹಿಳೆಯರ ಪಾತ್ರ

ಸಾಮಾನ್ಯವಾಗಿ ಕ್ರಿ.ಪೂ. ೧೫೦೦ ರಿಂದ ಕ್ರಿ.ಪೂ. ೫೦೦ರ ವರೆಗೂ ವೇದಗಳ ಕಾಲವೆಂದೇ ಹೇಳುತ್ತಾರೆ. ಈ ವೇದಗಳ ಕಾಲದಲ್ಲಿ ನಾಲಕ್ಕೂ ವೇದಗಳಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳೆಂಬ ವೇದಗಳು ಪ್ರಚಾರದಲ್ಲಿದ್ದವು.

ಈ ವೇದಗಳನ್ನು ಆಯಾ ಶಾಖೆಗೆ ಸಂಬಂಧಿಸಿದ ಋಷಿಗಳು ಅವರ ಪತ್ನಿಯರೂ ಸಹಾ ಪಠಿಸುತ್ತಿದ್ದರು. ಹಾಗೆಯೇ ಆ ಋಷಿಪತ್ನಿಗಳು ಮಹಾನ್ ತಪಸ್ವಿಗಳಾಗಿದ್ದರು. ಉದಾಹರಣೆಗೆ ಮೈತ್ರೇಯಿ ಮಹಾನ್ ತಪಸ್ವಿನಿ.

ವೇದಗಳ ಕಾಲದಲ್ಲಿ ಈ ಮಹಾನ್ ತಪಸ್ವಿ ಸ್ತ್ರೀಯರು ಹೋಮ ಹವನದಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರೇ ಸ್ವತಾಹಾ ಯಾಗಗಳನ್ನು ನಿರ್ವಹಿಸುತ್ತಿದ್ದರು. ಆ ವೇದ ಕಾಲದಲ್ಲೇ ದೇವತೆಗಳಾದ ಮಹಾಲಕ್ಷ್ಮಿ, ಸರಸ್ವತಿ, ದುರ್ಗಾ, ಕಾಳಿ ರೂಪಗಳನ್ನು ಆರಾಧಿಸುವುದಕ್ಕೆ ಪ್ರಾರಂಭವಾಯಿತೆಂದು ಹೇಳುತ್ತಾರೆ.

ಕಾಳೀಸ್ವರೂಪವು ಲಯಕಾರಕವಾದರೆ ಮಹಾಲಕ್ಷ್ಮೀದೇವಿ ಸಾತ್ವಿಕ ಗುಣಗಳಿಗೆ, ಸರಸ್ವತಿ ವಿದ್ಯೆಗಳಿಗೆ ಕಲೆಗಳಿಗೆ,ದುರ್ಗಾರೂಪ ಶಕ್ತಿಯುಕ್ತವಾದ ಗುಣಗಳಿಗೆ ಸಾಕಾರ ಮೂರ್ತಿಗಳಾಗಿ ಈಗಲೂ ಆರಾಧಿಸಲ್ಪಡುತ್ತಿದ್ದಾರೆ. ನಾವೂ ಸಹ ಹಣವನ್ನು ಲಕ್ಷ್ಮೀದೇವಿಗೆ, ವಿದ್ಯೆಗಳನ್ನು ಸರಸ್ವತೀದೇವಿಗೆ, ಆಯುಧಗಳನ್ನು ದುರ್ಗಾದೇವಿಗೆ ಅನ್ವಯಿಸಿ ಪೂಜಿಸುತ್ತೇವೆ. ಸಾಮವೇದಕ್ಕೆ ಮುಖ್ಯಾಧಿಕಾರಿಣಿಯಾದ ಮನಸಾದೇವಿ ಎಲ್ಲರಿಗೂ ತಿಳಿದಿರುವಂತಹಾ ಧೀರಮಹಿಳೆ ಎಂದೇ ಗುರುತಿಸಲ್ಪಡುತ್ತಾಳೆ. ಕಶ್ಯಪ ಪ್ರಜಾಪತಿಯ ಮಗಳಾಗಿ ಆಕೆ ಸಾಮವೇದವನ್ನು ಗಾನ ಮಾಡಿ ತಾನೇ ಒಂದು ಆಶ್ರಮವನ್ನು ಸೃಷ್ಟಿಸಿಕೊಂಡು ಅನೇಕ ಮಂದಿಗೆ ಬೋಧಿಸಿರುವುದನ್ನು ಪುರಾಣಗಳಿಂದ ತಿಳಿಯಬಹುದಾಗಿದೆ.

ಆ ಕಾಲದಲ್ಲೇ ಗೃಹಿಣಿ, ಸಾಮ್ರಾಜ್ಞೆ ಪದವಿಗಳನ್ನು ಸ್ತ್ರೀಯರಿಗೆ ನೀಡಿ ಅವರ ಬಗೆಗೆ ಗೌರವಾದರಗಳನ್ನು ತೋರಿಸುತ್ತಿದ್ದರಂತೆ, ಮಹಿಳೆಯರಿಗೆ ಆ ಕಾಲದಲ್ಲಿ ಅವರ ವಿವಾಹ ವಿಚ್ಛೇದನೆ,ಪುನರ್ವಿವಾಹ ಮೊದಲಾದ ಕಾರ್ಯಗಳಲ್ಲಿ ಸ್ವಂತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ನೀಡಿದ್ದರು. ವಿಧವಾ ನಿಯಮಗಳನ್ನು ಬಲವಂತವಾಗಿ ಅವರ ಮೇಲೆ ಹೊರೆಸುತ್ತಿರಲಿಲ್ಲ.

ನಮ್ಮ ಭಾರತದಂತಹ ಪುಣ್ಯ ಭೂಮಿಯಲ್ಲಿ ಸ್ತ್ರೀಯರನ್ನು ವಿಶ್ವಶಕ್ತಿ ಎಂದು ನಂಬಿ, ದೇಶವನ್ನು ಒಬ್ಬ ಮಾತೆಗೆ ಹೋಲಿಸುತ್ತೇವೆ. ಸ್ತ್ರೀಯರನ್ನು ಗೌರವಿಸುವುದು ದೈವದತ್ತವಾಗಿ ಬಂದಿರುವ ವಿಷಯವಾಗಿದೆ.

ಉದಾಹರಣೆಗೆ ಚತುರ್ಮುಖ ಬ್ರಹ್ಮ ಸರಸ್ವತಿದೇವಿಯನ್ನು ತನ್ನ ನಾಲಿಗೆಯ ಮೇಲೆ ಇರಿಸಿಕೊಂಡಿದ್ದಾನೆ. ಆಕೆ ಸಕಲ ವೇದಗಳಿಂದ ಪ್ರತಿಪಾದಿತಳಾಗಿದ್ದಾಳೆ. ಮಹಾವಿಷ್ಣುವು ಮಹಾಲಕ್ಷ್ಮೀಯನ್ನು ತನ್ನ ವಕ್ಷಃಸ್ಥಳದಲ್ಲೇ ಇರಿಸಿಕೊಂಡ ಹೃದಯೇಶ್ವರೀ ಎಂದಿದ್ದಾನೆ. ಇನ್ನು ಶಿವನು ತನ್ನ ದೇಹದ ಅರ್ಧಭಾಗವನ್ನು ಆಕೆಗೆ ನೀಡಿ ಶಿವೆ ಎಂದು ಕರೆದಿದ್ದಾನೆ.

ತ್ರಿಮೂರ್ತಿಗಳನ್ನು ಆರಾಧಿಸುವ ನಮ್ಮ ಸಮಾಜದಲ್ಲಿ ಅವರುಗಳು ಸ್ತ್ರೀಯರಿಗೆ ನೀಡಿದ ಆದರ, ಗೌರವಗಳನ್ನು ಆದರ್ಶವಾಗಿಟ್ಟುಕೊಂಡು ಸಮಾಜದಲ್ಲಿ ಸ್ತ್ರೀಯರಿಗೆ ಮಾನ್ಯತೆಯನ್ನು ನೀಡಿ ಆ ತ್ರಿಮೂರ್ತಿಗಳ, ತ್ರಿದೇವತೆಗಳ (ಲಕ್ಷ್ಮೀ, ಸರಸ್ವತೀ, ಪಾರ್ವತಿ) ಕೃಪೆಗೆ ಪಾತ್ರರಾಗಿ ತನ್ಮೂಲಕ ಕಲಿಯುಗದ ದೈವ ಶ್ರೀವೆಂಕಟೇಶ್ವರನ ಆಶೀರ್ವಾದ ಪಡೆಯುವುದನ್ನು ನಮ್ಮೆಲ್ಲರ ಅಂತಿಮ ಗುರಿಯಾಗಲಿ ಮನುಸ್ಮೃತಿಯಲ್ಲಿ ನಮ್ಮೆಲ್ಲರ ಅಂತಿಮ ಗುರಿಯಾಗಲಿ.

ಮನುಸ್ಮೃತಿಯಲ್ಲಿ ಶ್ಲೋಕದಂತೆ ಜೀವಿಸೋಣ,

ಯತ್ರ ನಾರ್ಯಾಸ್ತು ಪೂಜ್ಯಂತೇ ರಮಂತೇ ತತ್ರ ದೇವತಾ

# ಕನ್ನಡ ಶಾಸನಗಳಲ್ಲಿ ಶಿವ ಸ್ತುತಿಗಳು

-ಡಾ|| ಎಸ್. ನಂಜುಂಡಸ್ವಾಮಿ

78990 11310



ಶೈವ ಧರ್ಮವು ನಮ್ಮ ದೇಶದ ಪ್ರಧಾನ ಧರ್ಮವಾಗಿದೆ. ಸರಸ್ವತಿ ನದಿ ಅಥವಾ ಸಿಂಧೂಬಯಲಿನ ಸಂಸ್ಕೃತಿಯ ಕಾಲದಿಂದಲೂ ಶಿವನ ಆರಾಧನೆ ನಡೆಯುತ್ತಿದ್ದುದಕ್ಕೆ ಆಧಾರಗಳಿವೆ. ಈ ಸಂಸ್ಕೃತಿಯಲ್ಲಿ ದೊರೆತ ಮುದ್ರೆಗಳ ಮೇಲೆ ಕೊಂಬುಗಳುಳ್ಳ ಮೂರುಮುಖದ ವ್ಯಕ್ತಿಯ ಸುತ್ತಲೂ ಕಾಡಿನ ಮತ್ತು ಸಾಕಿದ ಪ್ರಾಣಿಗಳು ಸುತ್ತುವರೆದಿದ್ದು, ಇದು ಪಶುಪತಿಯಾದ ಶಿವನಶಿಲ್ಪವೆಂದು ವಿದ್ವಾಂಸರು ಊಹಿಸಿದ್ದಾರೆ. ಇನ್ನು ಕೆಲವು ಮುದ್ರೆಗಳ ಮೇಲೆ ಶೈವ ಪಂಥದ ಚಿಹ್ನೆಯಾದ ಲಿಂಗ ಮತ್ತು ನಂದಿಯ ಶಿಲ್ಪವಿದೆ. ಶೈವ ಮತದಲ್ಲಿ ಶಿವನು ಪ್ರಧಾನ ದೇವತೆ, ನಂತರ ಅವನ ಪರಿವಾರ ದೇವತೆಗಳು. ಶಿವಪುರಾಣವು ಶಿವನ ಪಂಚ ವಿಂಶತಿ ಲೀಲೆಯ ಕಥೆಗಳನ್ನು ಮತ್ತು ಅವನ ಗಣಗಳ ಮಹಿಮೆಯನ್ನು ಸಾರಿ ಹೇಳುತ್ತದೆ. ಶೈವ ದೇವಾಲಯಗಳಲ್ಲಿ ಮುಖ್ಯವಾಗಿ ಲಿಂಗರೂಪಿ ಶಿವ, ಗರ್ಭಗೃಹದಲ್ಲಿ ಅಥವಾ ಭಿತ್ತಿಯ ಮೇಲೆ ನಂದಿವಾಹನವನ್ನೇರಿದ ಶಿವ, ಶಿವಪಾರ್ವತಿಯರ ವಿಗ್ರಹಗಳು, ಶಿವನ ತೊಡೆಯ ಮೇಲೆ ಕುಳಿತಿರುವ ಪಾರ್ವತಿಯ ಮತ್ತು ಉಮಾಮಹೇಶ್ವರ ಮೂರ್ತಿಗಳು,ಶಿವನ ಪಂಚ ವಿಂಶತಿ ಲೀಲೆಗಳ ವಿಗ್ರಹಗಳು, ಶಿವ ಪರಿವಾರದ ಗಣಪತಿ, ವೀರ ಭದ್ರ, ನಂದಿ, ದುರ್ಗೆ ಮೊದಲಾದ ದೇವತೆಗಳ ಶಿಲ್ಪಗಳಿರುವುದು ಸಾಮಾನ್ಯ. ಸುಮಾರು 6 ನೇ ಶತಮಾನದಿಂದ 15 ನೇ ಶತಮಾನದವರೆಗೆ ಶೈವಧರ್ಮವು ಇಡೀ ಭಾರತದ ಉದ್ದಗಲಕ್ಕೂ ಪ್ರಜ್ವಲಿಸಿಕೊಂಡು ಪಸರಿಸಿತ್ತು. ಶೈವಯತಿಗಳ ಪರಂಪರೆಯೂ ಕೂಡಾ ದೇಶದ ಉದ್ದಗಲಕ್ಕೂ ಹರಡಿಕೊಂಡಿದ್ದು, ವೈದಿಕ ಮತ್ತು ಜೈನ ಧರ್ಮದವರಿಂದಲೂ ಪೂಜ್ಯತೆಯನ್ನು ಗಳಿಸಿತ್ತು. ಶಿವನ ಮಹಿಮೆಯನ್ನು ಸಾರುವ ಹನ್ನೆರಡು ಜ್ಯೋತಿರ್ಲಿಂಗಗಳು ದೇಶದ ಉದ್ದಗಲಕ್ಕೂ ಸ್ಥಾಪಿತವಾದವು. ಶಿವನ ದೇವಾಲಯವಿಲ್ಲದ ಊರೇ ಇಲ್ಲ ಎಂದು ಹೇಳಬಹುದಾಗಿತ್ತು 16ನೇ ಶತಮಾನದ ನಂತರ ಶೈವ ದರ್ಶನವು ಶಿಥಿಲವಾಯಿತು. ಆದರೂ ಇಂದಿಗೂ ಈ ಶಿವನ ದೇವಾಲಯಗಳು, ವೈದಿಕರಿಂದ, ವೀರಶೈವ ಅಥವಾ ಲಿಂಗಾಯಿತರಿಂದ ಅಥವಾ ಹಿಂದೂ ಧರ್ಮದ ಇತರ ವರ್ಗಗಳ ಅರ್ಚಕರಿಂದ ಪೂಜಿಸಲ್ಪಡುತ್ತಿವೆ. ದಿನವೂ ಸಹಸ್ರಾರು ಜನರು ಈ ದೇವಾಲಯಗಳಿಗೆ ಹೋಗಿ ಶಿವನನ್ನು ಪೂಜಿಸುತ್ತಾರೆ. ಶಿವನು ಇಂದಿಗೂ ನಮ್ಮ ದೇಶದ ಪ್ರಮುಖ ಆರಾಧ್ಯ ದೇವತೆ ಎನಿಸಿದ್ದಾನೆ.

ಹತ್ತನೆಯ ಶತಮಾನದಿಂದ ಮುಂದಕ್ಕೆ ಹರಿಹರರಲ್ಲಿ ಭೇದ ವೆಣಿಸದ ಭಾಗವತ ಪಂಥವು ಪ್ರಬಲವಾಯಿತು. ಹರಿಹರೇಶ್ವರ ದೇವಾಲಯಗಳು ಬಹು ಸಂಖ್ಯೆಯಲ್ಲಿ ನಿರ್ಮಿತವಾದವು. ಕೆಲವು ಕಡೆ ಹರಿಹರರ ದೇವಾಲಯಗಳು ಅಕ್ಕ ಪಕ್ಕದಲ್ಲಿ ನಿರ್ಮಿತವಾದವು. ಇನ್ನು ಅನೇಕ ಶೈವ ದೇವಾಲಯಗಳಲ್ಲಿ ಗರ್ಭಗುಡಿಯಲ್ಲಿ ಶಿವ ಲಿಂಗ ಅಥವಾ ಶಿವನ ಪ್ರತಿಮೆಯೂ, ದೇವಾಲಯದ ನವರಂಗದೊಳಗೆ ಇರುವ ದೇವ ಕೋಷ್ಠಗಳಲ್ಲಿ ವಿಷ್ಣುವಿನ ಮೂರ್ತಿಯನ್ನೂ ಸ್ಥಾಪಿಸಲಾಯಿತು.ನವರಂಗದ ದೇವಕೋಷ್ಠಗಳಲ್ಲಿ ಅಥವಾ ಬಿಡಿಯಾಗಿ ವಿಷ್ಣುವಿನ ಮೂರ್ತಿಯ ಜೊತೆಗೆ. ಶಿವನ ಪರಿವಾರ ದೇವತೆಗಳು ಅಥವಾ ಶಿವಪಂಚಾಯತನದ ಮೂರ್ತಿಗಳಾದ, ಗಣಪತಿ, ಕುಮಾರಸ್ವಾಮಿ, ನಂದಿ, ದುರ್ಗಾ,ವೀರಭದ್ರ ಮೊದಲಾದ ದೇವತೆಗಳ ಸುಂದರ ಬಿಡಿ ವಿಗ್ರಹಗಳಿರುವುದನ್ನು ನೋಡಬಹುದು.







ನಮ್ಮ ದೇಶವನ್ನು ಆಳಿದ ಬಹುತೇಕ ರಾಜವಂಶಗಳವರು ದೊಡ್ಡ ದೊಡ್ಡ ಶಿವಾಲಯಗಳನ್ನು,ಅಧಿಕಾರಿಗಳು ಮತ್ತು ಪ್ರಮುಖ ಜನರು ಚಿಕ್ಕ ಚಿಕ್ಕ ಶಿವಾಲಯಗಳನ್ನು ನಿರ್ಮಿಸಿ ಆ ದೇವಾಲಯಗಳ ನಿರ್ವಹಣೆಗೆ, ಅಲ್ಲಿನ ಸ್ಥಾನಪತಿಗಳಾಗಿದ್ದ ಶೈವಯತಿಗಳಿಗೆ (ಪ್ರಧಾನ ಅರ್ಚಕರು) ಭೂಮಿಯನ್ನು, ಧನ, ಕನಕ ವಸ್ತುಗಳನ್ನು ದತ್ತಿಯಾಗಿ ಬಿಡುತ್ತಿದ್ದರು. ಈ ರೀತಿಯಾಗಿ ಶಿವಾಲಯವನ್ನು ನಿರ್ಮಿಸಿ ದತ್ತಿಯನ್ನು ಬಿಡುವಾಗ ಅದನ್ನು ದಾಖಲಿಸಿ ಜನ ಸಾಮಾನ್ಯರ ಗಮನಕ್ಕೆ ತರಲು, ದೇವಾಲಯದ ಮುಂದೆ ಅಥವಾ ದೇವಾಲಯದ ಗೋಡೆಗಳ ಮೇಲೆ, ಕಂಬಗಳ ಮೇಲೆ, ದೊಡ್ಡ ದೊಡ್ಡ ಅಥವಾ ಚಿಕ್ಕಶಿಲಾ ಶಾಸನಗಳನ್ನು ಹಾಕಿಸುತ್ತಿದ್ದರು. ಇವುಗಳನ್ನು ಶೈವ ಶಾಸನಗಳು ಎನ್ನುತ್ತಾರೆ. ಶೈವ ಶಾಸನಗಳ ಮೇಲ್ಭಾಗದಲ್ಲಿ ಶಿವಲಿಂಗ ಅದರ ಮುಂದೆ ಕುಳಿತಿರುವ ನಂದಿ, ಶಿವಲಿಂಗಕ್ಕೆ ಆರತಿಯನ್ನು ಬೆಳಗುತ್ತಿರುವ ಶೈವ ಯತಿಯ ಉಬ್ಬು ಶಿಲ್ಪವಿರುತ್ತದೆ. ಶಿವಲಿಂಗಕ್ಕೆ ಬದಲಾಗಿ ಶಿವಪಾರ್ವತಿಯರ ಉಬ್ಬು ಶಿಲ್ಪಗಳಿರುವುದನ್ನೂ ನೋಡಬಹುದು.

ಕರ್ನಾಟಕ, ಆಂಧ್ರ ತಮಿಳುನಾಡು ಮಹಾರಾಷ್ಟ್ರ ರಾಜ್ಯಗಳಲ್ಲಿ ಈ ಶೈವದೇವಾಲಯಗಳು ಹಾಗೂ ಶೈವ ಶಿಲಾ ಶಾಸನಗಳ ಸಂಖ್ಯೆ ಹೆಚ್ಚಾಗಿದೆ. ಈ ಎಲ್ಲ ಶೈವ ಶಾಸನಗಳ ಆರಂಭದಲ್ಲಿ ಶಿವನ ಪ್ರಾರ್ಥನೆ ಇರುತ್ತದೆ. ಸಾಮಾನ್ಯವಾಗಿ ಈ ಪ್ರಾರ್ಥನೆಗಳು ಸಂಸ್ಕೃತ ಭಾಷೆಯಲ್ಲಿದ್ದು ಸಾಹಿತ್ಯ ಹಾಗೂ ವರ್ಣನೆಯ ದೃಷ್ಟಿಯಿಂದ ಮನೋಹರವಾಗಿದೆ. ಕರ್ನಾಟಕದಲ್ಲಿ ಸಾಮಾನ್ಯವಾಗಿ ಶೈವ ಶಿಲಾಶಾಸನಗಳ ಸಂಖ್ಯೆ ಹೆಚ್ಚು, ಸುಮಾರು ಹತ್ತುಸಾವಿರಕ್ಕೂ ಹೆಚ್ಚು ಶೈವ ಶಿಲಾಶಾಸನಗಳಿವೆ ಎಂದು ಅಂದಾಜು ಮಾಡಲಾಗಿದೆ. ಎಲ್ಲ ಶೈವಶಾಸನಗಳು ಶಿವನನ್ನು ಸ್ತುತಿಸುವ ಸಂಸ್ಕೃತ ಶ್ಲೋಕದೊಡನೆ ಆರಂಭವಾಗುತ್ತವೆ. ದೊಡ್ಡ ದೊಡ್ಡ ಶೈವಶಾಸನಗಳಲ್ಲಿ ಶಿವನನ್ನು ವರ್ಣಿಸುವ ಎರಡು ಅಥವಾ ಮೂರು ಶ್ಲೋಕಗಳು ಇರುತ್ತವೆ. ಕನ್ನಡ ಭಾಷೆಯ ಕಂದ ಪದ್ಯಗಳು ಅಥವಾ ವೃತ್ತಗಳಿರುತ್ತವೆ. ಸುಮಾರು 16 ನೇ ಶತಮಾನದ ವರೆಗಿನ ಶಾಸನಗಳಲ್ಲಿ ಶಿವಸ್ತುತಿಯ ಶ್ಲೋಕಗಳು ಕಂಡು ಬರುತ್ತವೆ. ಅಲ್ಲಿಂದ ಮುಂದಕ್ಕೆ ಶಾಸನಗಳು ಚಿಕ್ಕದಾದಂತೆಲ್ಲ "ಓಂ ನಮಃ ಶಿವಾಯ"ಎಂದು ಆರಂಭವಾಗಿ ನೇರವಾಗಿ ವಿಷಯಕ್ಕೆ ಬರುತ್ತದೆ.

### ಕನ್ನಡ ಶಾಸನಗಳಲ್ಲಿ ಶಿವಸುತ್ತಿಗಳು:

ಕರ್ನಾಟಕ ಬಹುತೇಕ ಶೈವ ಶಾಸನಗಳಲ್ಲಿ ಸಾಮಾನ್ಯವಾಗಿ "ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ! ತ್ರೈಲೋಕ್ಯ ನಗರಾರಂಭ ಮೂಲಸ್ಥಂಭಾಯ ಶಂಭವೇಃ" ಎಂಬ ಬಹಳ ಸುಂದರವಾದ ಶಿವಸ್ತುತಿ ಇದ್ದೇ ಇರುತ್ತದೆ. ಉತ್ತುಂಗವಾದ ಶಿರ ಅಂದರೆ ಜಟಾಜೂಟದ ತುದಿಯನ್ನು ಚುಂಬಿಸುತ್ತಿರುವ, ಚಾಮರ ದೋಪಾದಿಯಲ್ಲಿ ಕಾಣುವ

ಚಂದ್ರನಿಂದ ಬಹಳ ಸುಂದರವಾಗಿ ಶೋಭಿಸುತ್ತಿರುವ ಮೂರು ಲೋಕಗಳ ಸೃಷ್ಟಿಗೂ ಕಾರಣನಾದ ಶಿವನಿಗೆ ನಮನಗಳು ಎಂಬುದು ಈ ಶ್ಲೋಕದ ಅರ್ಥ.ಇದನ್ನು ಕನ್ನಡ ಶಾಸನ ಕವಿಗಳು ಸಂಸ್ಕೃತದ ಖ್ಯಾತ ಕವಿ ಬಾಣಭಟ್ಟದ ಹರ್ಷ ಚರಿತೆ ಯಿಂದ ತೆಗೆದುಕೊಂಡಿದ್ದಾರೆ.ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಬೆಳ್ಳೂರಿನ ಮಂಡಲ ಸ್ವಾಮಿಯ 12 ನೇ ಶತ ಮಾನದ ಶಾಸನದಲ್ಲಿ ದುರ್ಗಾಸಪ್ತಶತಿಯ ಕೀಲಕ ಮಂತ್ರದಲ್ಲಿ ಬರುವ "ವಿಶುದ್ಧ ಜ್ಞಾನ ದೇಹಾಯ ತ್ರಿವೇದಿ ದಿವ್ಯ ಚಕ್ಷುಷೇ ಶ್ರೇಯಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧ ಧಾರಿಣೇ" ಎಂಬ ಸ್ತುತಿ ಇದೆ.ಶುದ್ಧಜ್ಞಾನವನ್ನೇ ದೇಹವನ್ನಾಗಿ ಉಳ್ಳ, ಮೂರು ವೇದಗಳನ್ನೇ ಮೂರು ದಿವ್ಯವಾದ ಕಣ್ಣುಗಳನ್ನಾಗಿ ಹೊಂದಿರುವ,ಶ್ರೇಯಸ್ಸನ್ನು ಪಡೆಯಲು ಉಪಾಯರೂಪನಾದ ಅರ್ಧಚಂದ್ರನನ್ನು ಧರಿಸಿರುವ ಶಿವನಿಗೆ ನಮಸ್ಕಾರಗಳು, ಎಂಬುದು ಈ ಶ್ಲೋಕದ ಅರ್ಥ. ಇಂತಹ ಅಪರೂಪದ ಶಿವ ಸ್ತುತಿ ಇನ್ನೂ ಕೆಲವು ಶಾಸನಗಳಲ್ಲಿದೆ. ಕಲ್ಯಾಣದ ಚಾಲುಕ್ಯರ ಕಾಲದ ಶಿಕಾರಿಪುರ ತಾಲ್ಲೂಕಿನ ಬೇಗೂರಿನ ಹನ್ನೊಂದನೆಯ ಶತಮಾನದ ಒಂದು ಶಾಸನದಲ್ಲಿ ಬಹಳ ಅಪರೂಪದ ಶಿವ ಸ್ತುತಿ ಕಂಡು ಬರುತ್ತದೆ."ಪ್ರತ್ಯಕ್ಷ ವಸ್ತು ವಿಷಯಾಯ ಜಗ ದ್ಧಿತಾಯ ವಿಶ್ವಸ್ಥಿತಿ ಪ್ರಳಯ ಸಂಭವ ಕಾರಣಾಯ। ಸರ್ವಾ ತ್ಮನೇ ವಿಜಿತಕೋಪ ಮನೋಭವಾಯ ತುಭ್ಯಂ ನಮಃ ತ್ರಿಭು ವನ ಪ್ರಭವೇ ಶಿವಾಯಃ" ಅದ್ವೈತ ತತ್ವದ ಪ್ರಕಾರ ಶಿವನು ಪ್ರತ್ಯಕ್ಷ ವಸ್ತುವಾಗಿದ್ದು, ಪ್ರಪಂಚದ ಸೃಷ್ಟಿ, ಸ್ಥಿತಿ,ಲಯಕ್ಕೆ ಕಾರಣ ನಾಗಿದ್ದಾನೆ, ಎಲ್ಲ ಆತ್ಮಗಳ ಸ್ವರೂಪನಾದವನು. ಕೋಪವನ್ನು ಜಯಿಸಿದ ಮನೋಭವನೂ, ತ್ರಿಭುವನಕ್ಕೆ ಒಡೆಯನೂ ಆದ ಶಿವನೇ ನಿನಗೆ ನಮಸ್ಕಾರ ಎಂಬುದು ಇದರ ಅರ್ಥವೆಂದು ಹೇಳಬಹುದು.ಇದೇ ಕಾಲದ ಧಾರವಾಡ ಜಿಲ್ಲೆ ಹಳ್ಳಿಹಾಳ ಶಾಸನದಲ್ಲಿ "ನಮಃಶ್ಶಕ್ತಿಯುತ ಶಿವಾಯ ಶಿವಲಬ್ಧಯೇ ಗಣೇ ಶಾಯ ನಮಸ್ಸರ್ವೇ ಶರ್ವಕರ್ಮಣಿ ಸಿದ್ಧಯೇ॥"ಎಂಬ ಶ್ಲೋಕವಿದೆ. ಶಿವನು ಶಕ್ತಿ ಸಮೇತನು, ಮಂಗಳಕಾರಕನು, ಗಣಗಳಿಗೆ ಒಡೆಯನು, ಶರ್ವನು, ಕರ್ಮಸಿದ್ಧಿದಾಯಕನು ಆಗಿ ದ್ದಾನೆ ಎಂಬುದು ಇದರ ಅರ್ಥ. ಇದೇ ಕಾಲದ ಬಳ್ಳಾರಿ ಜಿಲ್ಲೆಯ, ಹಡಗಲಿ ತಾಲ್ಲೂಕಿನ ಕುರುವತ್ತಿ ಗ್ರಾಮದ ಕಲ್ಲೇಶ್ವರ ದೇವಾಲಯದ ಶಾಸನದಲ್ಲಿ ನಮಸ್ತುಂಗ ಶಿರಶ್ಚುಂಬಿ ಶ್ಲೋಕದ ನಂತರ ಅದೇ ಧಾಟಿಯಲ್ಲಿ" ನಮಸ್ತಾವುಜಟಾ ಜಾಳ ಬಾಳ ಪಲ್ಲವಶಾಳಿನೇ ತ್ರೈಲೋಕ್ಯ ನಗರಾಂಭ ಪೂರ್ಣಕುಂಭಾಯ ಶಂಭವೇ॥" ಎಂದು ಶಿವನನ್ನು ವರ್ಣಿಸಲಾಗಿದೆ.

ಹೊಯ್ಸಳರ ಕಾಲದ ಶಾಸನಗಳಲ್ಲಿ ಶಿವಸ್ತುತಿಯು ವೈವಿಧ್ಯಮಯವಾಗಿ ಗಮನ ಸೆಳೆಯುತ್ತದೆ.ಹೊಯ್ಸಳರ ಕಾಲದ ಬೃಹತ್ ಶಿವಾಲಯಗಳ ಮುಂದಿರುವ ಶಾಸನಗಳಲ್ಲಿ ಶಿವನನ್ನು ವರ್ಣಿಸುವ ಸಂಸ್ಕೃತ ಶ್ಲೋಕಗಳು,ಪದ್ಯಗಳು ಸುಂದರವಾಗಿವೆ. ಶಿವ ವಿಷ್ಣುವಿನಲ್ಲಿ ಅಭೇದವನ್ನು ಕಲ್ಪಿಸುವ ಶ್ಲೋಕಗಳು ಹೊಯ್ಸ ಳರ ಶೈವ ಮತ್ತು ವೈಷ್ಣವ ಶಾಸನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಅವುಗಳಲ್ಲಿ ಮುಖ್ಯವಾದುದು ಎಂದರೆ "ಶ್ರೀಮತ್ರೈಲೋಕ್ಯ ಪೂಜ್ಯಾಯ ಸರ್ವಕರ್ಮ ಸುಸಾಕ್ಷಿಣೇ ಫಲದಾಯ ನಮೋ ನಿತ್ಯ ಕೇಶವಾಯ ಶಿವಾಯಚ"ತ್ರೈಲೋಕ್ಯ ಪೂಜ್ಯನಾದ ಸರ್ವಕರ್ಮಗಳಿಗೆ ಸಾಕ್ಷೀಭೂತನಾಗಿರುವ, ಇಷ್ಟಾರ್ಥಸಿದ್ಧಿದಾಯಕನಾದ ಕೇಶವ ಮತ್ತು ಶಿವಸ್ವರೂಪ ನಾದ ದೇವನಿಗೆ ನಮಸ್ಕಾರಗಳು ಎಂಬುದು ಈ ಶ್ಲೋಕದ ಅರ್ಥ.ಅರಸೀಕೆರೆಯ, ಗಂಡಸಿ ಶಾಸನದಲ್ಲಿ ಶಿವಮಹಿಮ್ನ ಸ್ತೋತ್ರದ ಪದ್ಯವೊಂದನ್ನು ಉಲ್ಲೇಖಿಸಲಾಗಿದೆ. "ಶ್ರೀ ಅಸಿತಗಿರಿ ಸಮಸ್ಯಾತ್ ಕಜ್ಜಲಮ್ ಸಿಂಧು ಪಾತ್ರೇ ಸುರ ತರುವರಶಾಖಾ ಲೇಖನೀ ಪತ್ರಮುರ್ವೀಂ ಯದಿ ಲಿಖತಿ ಗೃಹೀತ್ವಾ ಶಾರದಾ ಸಾರ್ವಕಾಲಂ ತದಪಿ ತವ ಗುಣಾ ನಾಮೀಶ ಪಾರಂ ನಯಾತಿ" ಕೈಲಾಸ ಪರ್ವತವನ್ನೇ ಮಸಿಯಾಗಿ, ಸಾಗರವನ್ನೇ ಪಾತ್ರೆಯನ್ನಾಗಿ, ಕಲ್ಪವೃಕ್ಷದ ಶಾಖೆಯನ್ನೇ ಲೇಖನಿಯನ್ನಾಗಿ, ಈ ಭೂಮಿಯನ್ನೇ ಪತ್ರವನ್ನಾಗಿ ಮಾಡಿ,ಸಾಕ್ಷಾತ್ ಶಾರದೆಯೇ ಸದಾಕಾಲ ಬರೆದರೂ ಶಿವನ ಮಹಿಮೆಯನ್ನು ವರ್ಣಿಸಲು ಸಾಧ್ಯವಿಲ್ಲ ಎಂದು ಇದರ ಅರ್ಥ ಅರಸೀಕೆರೆ ತಾಲ್ಲೂಕು, ತಳಲೂರಿನ ಶಂಕರೇಶ್ವರ ದೇವಾಲಯದ ಮುಂದಿನ 1191 ರ ಬೃಹತ್ ಶಾಸನದಲ್ಲಿ ಶಿವನನ್ನು ಒಂದು ಸರಳವಾದ ವೃತ್ತದಲ್ಲಿ ಸ್ತುತಿಸಲಾಗಿದೆ. "ಶ್ರೀಶೈಲಾ ವಸಥಂ ಚತುರ್ದ್ದಶ ಜಗನ್ನಿರ್ಮ್ಮಾ ಪಕಂ ನಿರ್ಜ್ಜರಾಧೀಶ ಬ್ರಹ್ಮ ಮುಕುಂದ ವಂದಿತ ಪದಂ ಕುಂದೇಂದು ಕರ್ಪೂರ ಸಂಕಾ ಶಾಂಗಪ್ರಭನ್ ಆದ್ರಿರಾಜ ತನಯಾ ಚಿತ್ತೇಶ್ವರಂ, ಭಕ್ತಚಿತ್ತಾಶಾ ಶ್ರೇಣಿಗೆ ಚನ್ನಶಂಕರನ್ ಅಲಂಪಿಂ ಮಾಳ್ಕೆ ಸಂಪೂರ್ತಿಯಂ" ಶ್ರೀಶೈಲವನ್ನೇ (ಕೈಲಾಸ ಪರ್ವತ) ಮನೆಯನ್ನಾಗಿಸಿಕೊಂಡವನು, ಹದಿನಾಲ್ಕು ಲೋಕ ಗಳ ಸೃಷ್ಟಿಕರ್ತನು, ದೇವತೆಗಳಿಗೆ ಒಡೆಯನು, ಬ್ರಹ್ಮ, ವಿಷ್ಣು ಗಳಿಂದ ವಂದಿತವಾದ ಪಾದವುಳ್ಳವನು, ಬಿಳುಪಾದ ಕರ್ಪೂರ ದಂತಹ ಪ್ರಭೆಯನ್ನುಳ್ಳವನು, ಪರ್ವತರಾಜನ ಮಗಳಾದ ಪಾರ್ವತಿಯ ಮನಸ್ಸಿಗೆ ಒಡೆಯನೂ ಆದ ಚನ್ನಶಂಕರ ದೇವನು ಭಕ್ತಸಮೂಹದ ಮನಸ್ಸಿಗೆ ಇಷ್ಟಾರ್ಥ ಸಿದ್ದಿಯನ್ನು ಮಾಡಲಿ, ಎಂಬುದು ಇದರ ಅರ್ಥ, ಈ ಸ್ತುತಿಯಲ್ಲಿ ಶ್ರೀಶೈಲ

ಎಂದು ಉದ್ದೇಶಪೂರ್ವಕವಾಗಿ ಬಳಸಲಾಗಿದೆ. ಕಾರಣ ಕರ್ನಾಟಕದ ಶಿವ ದೇವಾಲಯಗಳಲ್ಲಿ ಅನೇಕ ಕಡೆ ಶ್ರೀಶೈಲದಿಂದ ಶಿವಲಿಂಗವನ್ನು ತಂದು ಸ್ಥಾಪಿಸಿದ ಉದಾಹರಣೆಗಳಿವೆ, ಮತ್ತು ಶ್ರೀಶೈಲದ ಶೈವಯತಿ ಪರಂಪರೆಯು ಕರ್ನಾಟಕದ ಶಿವಾಲಯಗಳಲ್ಲಿ ಇದ್ದಿತು. ಬಳ್ಳಾರಿ ಜಿಲ್ಲೆ ಕುರುವತ್ತಿಯ ಊರಿನ ಮಲ್ಲಿಕಾರ್ಜುನ ದೇವಾಲಯದ ಹೊಯ್ಸಳರ ಕಾಲದ ಶಾಸನದಲ್ಲಿ "ಓಂ ನಮಃಶಿವಾಯ ಜಯತ್ಯಾಹವ ಮಲ್ಲೇಶಃಶೇಖರೀಕೃತ ಚಂದ್ರಮಾಃ ಯತ್ಪಾದ ಪಂಕಜೇನಿತ್ಯಮ ಮರ್ತ್ಯೈ ಭ್ರಮರಾಯಿತಂ" ಎಂಬ ಶ್ಲೋಕವಿದ್ದು,ಶಿರದಲ್ಲಿ ಚಂದ್ರನನ್ನು ಧರಿಸಿದ ಯುದ್ಧ ದೇವನಾದ ಮಲ್ಲೇಶ,ನಿನ್ನ ಪಾದ ಕಮಲಗಳಲ್ಲಿ ನಿತ್ಯವೂ ದೇವತೆಗಳು ದುಂಬಿಯಂತೆ ನಮಸ್ಕರಿಸುತ್ತಿದ್ದಾರೆ ಎಂಬ ಸುಂದರ ವರ್ಣನೆಯಿದೆ. ಹಗರಿ ಬೊಮ್ಮನ ಹಳ್ಳಿ ತಾಲ್ಲೂಕು, ಯೇಣಗಿಯ ಆಂಜನೇಯನ ಗುಡಿಯಲ್ಲಿರುವ ಹೊಯ್ಸಳರ ಕಾಲದ ಶಾಸನದಲ್ಲಿ "ಶ್ರೀವನಿತಾ ಪ್ರಿಯ ನುತನಗಜಾವಲ್ಲಭ ನಿಂದು ಶೇಖರಂ ಕುಸುಮೇಶಂ ಪೂವಿನ ಪಡಂಗಿಲೆಯ ವಿಪ್ರಾವಳಿಗೀಗಭೀಮತಾರ್ಥ ಸಂಕುಳಮಂ॥ ಎಂಬ ಕನ್ನಡ ಕಂದ ಪದ್ಯವಿದ್ದು, ವಿಷ್ಣುವಿನಿಂದ ನಮಸ್ಕೃತನೂ, ಅಗಜಾ ವಲ್ಲಭನು, ಚಂದ್ರ ಶೇಖರನೂ, ಕುಸುಮೇಶನೂ ಆದ ಶಿವನು ಪೂವಿನ ಪಡಂಗಿಲೆ ಅಗ್ರಹಾರದ ವಿಪ್ರರಿಗೆ ಇಷ್ಟ ಸಿದ್ಧಿಯನ್ನು ನೀಡಲಿ ಎಂದು ಸ್ತುತಿಸಲಾಗಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಲಾಳನಕೆರೆ ಶಾಸನವು "ಶ್ರೀ ಮಹಾದೇವಾಯನಮಃ" ಎಂದು ಆರಂಭ ವಾಗಿ "ನಮಸ್ತುಂಗ ಶಿರಶ್ಚುಂಬಿ" ಶ್ಲೋಕದ ನಂತರ "ಪತ್ತಿರೆ ಗಂಗೆಯ ಪನಿಗಳ್। ಮುತ್ತಿನ ಬಾಸಿಗಮಿದೆನಿಸಿ ವಾಸುಗಿ ಸುಖದಿಂ। ಸುತ್ತಿರ್ದ್ದ ಜೂಟಾದ ದೇವೋತ್ತಮ ನಮಗೊಸೆದು ಕೊಡುಗೆ ಸುಖ ಸಂಪದಮಂ" ಎಂಬ ಸುಂದರ ಕಂದ ಪದ್ಯದಿಂದ ಕೂಡಿದೆ. ಶಿವನ ಜಟಾಜೂಟದಿಂದ ಹೊರ ಬರುತ್ತಿರುವ ಗಂಗೆಯ ಹನಿಗಳು ಅಲ್ಲಿ ಸುತ್ತಿಕೊಂಡಿರುವ ವಾಸುಕಿ ಅಂದರೆ ಹಾವಿನ ಶರೀರದ ಮೇಲೆ ಬಿದ್ದು ಅವು ಮುತ್ತಿನ ಹನಿಗಳಂತೆ ಶೋಭಿಸುತ್ತಾ ಇರುವ ದೇವೋತ್ತಮನಾದ ಶಿವನು ನಮಗೆ ಸುಖ ಸಂಪದವನ್ನು ನೀಡಲಿ ಎಂಬುದು ಈ ಕಂದಪದ್ಯದ ಅರ್ಥ. ಶಾಂತಿನಾಥ ಕವಿ ವಿರಚಿತ ಲಾಳನಕೆರೆಯ ಇನ್ನೊಂದು ಶಾಸನವು,"ನಮಸ್ತುಂಗ" ಶ್ಲೋಕದ ನಂತರ ಸುಂದರವಾದ ಹರಿಹರಬ್ರಹ್ಮರ ಅಭೇದ ತತ್ವವನ್ನು ವಿವರಿಸುವ ಕಂದಪದ್ಯವನ್ನು ಒಳಗೊಂಡಿದೆ "ಭೇದಂ ಮೂರ್ತಿಯೊಳಲ್ಲದೆಭೇದಂ ಪರಮಾರ್ಥ ತತ್ವದೊಳು ಸಲ್ಲದೆನಲ್। ಮೂದೇವರಾದಭೇದದ ಮಾದೇವಂ।ದೇವನೀಗೆ ಸುಖ ಸಂಪದಮಂ। ಮೂರ್ತಿಗಳಲ್ಲಿ ಭೇದವಿದೆಯೇ ಹೊರತು, ಪರಮಾರ್ಥ ತತ್ವದಲ್ಲಿ ಯಾವುದೇ ಭೇದವು ಸಲ್ಲದು ಎನ್ನುವಂತೆ ತ್ರಿಮೂರ್ತಿಗಳನ್ನೂ ಒಳಗೊಂಡಿರುವ ಅಭೇದದ ಮಹಾದೇವನು ನಮಗೆ ಸುಖ ಸಂಪದವನ್ನು ನೀಡಲಿ ಎಂದು ಈ ಕಂದಪದ್ಯ ಶಿವನನ್ನು ಸ್ತುತಿಸಿದೆ. ಈ ಒಂದು ಪದ್ಯದ ಆಶಯ ನಮ್ಮೆಲ್ಲರ ಮನದಲ್ಲಿ ಒಡ ಮೂಡಬೇಕಾದ ಅಗತ್ಯ ಇದೆ ಎಂದು ಹೇಳಬಹುದು.

ಶಾಸನಗಳಲ್ಲಿ ಶಿವಸ್ತುತಿಯ ಬಗ್ಗೆ ಒಂದು ದೊಡ್ಡ ಕೃತಿಯನ್ನೇ ರಚಿಸಬಹುದು.ಈ ಸ್ತುತಿಗಳು ನಮ್ಮ ಪೂರ್ವಜರು ಶಿವನ ಬಗ್ಗೆ ಹೊಂದಿದ್ದ ಅಪಾರ ಭಕ್ತಿ ಭಾವನೆಗಳನ್ನು ಶ್ರುತಪಡಿಸುತ್ತವೆ. ಜೊತೆಗೆ ಅಂದಿನ ಜನರು ಹರಿಹರ ಬ್ರಹ್ಮರಲ್ಲಿ, ಪರಮಾರ್ಥ ತತ್ವದಲ್ಲಿ ಯಾವುದೇ ಭೇದವಿಲ್ಲ, ದೇವನೊಬ್ಬ ನಾಮ ಹಲವು ಕೇಶವ ಶಿವ ಎಲ್ಲರೂ ಒಂದೇ, ಪರಮಾರ್ಥ ತತ್ವ ಒಂದೇ ಎಂಬ ವಿಶಾಲ ಮನೋಭಾವನೆಯನ್ನು ನಂಬಿಕೆಯನ್ನು ಹೊಂದಿದ್ದರು. ಅದು ಇಂದು ನಮ್ಮಲ್ಲಿ ಒಡಮೂಡಲಿ ಎಂದು ಶಿವರಾತ್ರಿಯ ಸಮಯದಲ್ಲಿ ಪ್ರಾರ್ಥಿಸೋಣ.


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**



# ಹರಿಕಥಾಮೃತಸಾರ ಮಹಿಮೆ ಬಲು ಅಪಾರ

-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ
8059436752

**ಶ್ರೀಮದ ಆಚಾರ್ಯರಿಂದ ಬೀಜ ಬಿತ್ತಿದ ದಾಸಸಾಹಿತ್ಯ ಶ್ರೀನರಹರಿತೀರ್ಥರಿಂದ ಮೊಳಕೆಯೊಡೆದು ಶ್ರೀ ಪಾದರಾಜರಿಂದ ಸಾಗಿ ಬಂದಿದೆ. ಅಂತಹ ೧೭ ಶತಮಾನದಲ್ಲಿ ದಾಸ ಶ್ರೇಷ್ಠರಾದ ದಾಸ ಚತುಷ್ಟಯರಲ್ಲಿ ಒಬ್ಬರಾದ ಶ್ರೀಜಗನ್ನಾಥದಾಸರು ರಚಿಸಿರುವ ಅನರ್ಘ್ಯ ರತ್ನವಾದ ಹರಿಕಥಾಮೃತಸಾರ ಸಾರವೆಂಬ ಗ್ರಂಥದ ಗುಣ ಮಹಿಮೆಯ ಮುಂದುವರಿದ ಭಾಗ ಓದಿ.**

ಭಗವಂತ ಮತ್ತು ನಮ್ಮಂತಹ ಪಾಮರರ ನಡುವೆ ದಾಸ ಸಾಹಿತ್ಯವು ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ. ಅಂತಯೇ ಜ್ಞಾನಿಗಳು, ಸಜ್ಜನರು ಇರುವುದರಿಂದಲೇ ಧರ್ಮ ಉಳಿಯುತ್ತದೆ ಮತ್ತು ಬೆಳೆಯುತ್ತದೆ.

ಹೀಗಾಗಿ ವಿಜಯದಾಸರ ಶಿಷ್ಯರಾದ ಗೋಪಾಲದಾಸರ ಮೂಲಕ ಜಗನ್ನಾಥದಾಸರನ್ನು ಅನುಗ್ರಹಿಸಿದರು. ನಂತರ ಜಗನ್ನಾಥದಾಸರು "ಹರಿಕಥಾಮೃತಸಾರ" ವೆಂಬ ಪ್ರಾಕೃತಿಕ ಭಾಷೆಯಾದ ಕನ್ನಡದಲ್ಲಿ ಗ್ರಂಥವನ್ನು ರಚಿಸಿದರು. ಇದು ಭಾಮಿನಿಷಟ್ಪದಿಯಲ್ಲಿದೆ. ಶ್ರೀಮದಾಚಾರ್ಯರು ಸಾಂಖ್ಯಶಾಸ್ತ್ರ ಬಳಸಿದಂತೆ, ಜಗನ್ನಾಥದಾಸರು ಸಾಂಖ್ಯ ಶಾಸ್ತ್ರವನ್ನು ಬಳಸಿ ಜನರಲ್ಲಿ ಜಾಗೃತಿ ಮೂಡಿಸಿದರು. ಪ್ರತಿಯೊಂದರಲ್ಲಿನ ಭಗವಂತನ ಸನ್ನಿಧಾನದ ರೂಪಗಳ ಸಂಖ್ಯೆಯನ್ನು ತೋರಿಸಿಕೊಟ್ಟರು.

ಗುರುಗಳು ಸಕಲ ಶ್ರುತಿ ಸ್ಮೃತಿಗಳಿಗನುಸಾರವಾಗಿ ಬರೆದಿದ್ದಾರೆ. ಈ ಗ್ರಂಥವು ಕೇವಲ ಭಕ್ತಿ ಭಾವದಿಂದ ಹೇಳಿದ್ದಲ್ಲ ಶಾಸ್ತ್ರದ ಅನುಭವದಿಂದ ಮತ್ತು ಅಪರೋಕ್ಷ ಜ್ಞಾನವಾದ ನಂತರ ಬರೆದಿದುದರಿಂದ ಈ ಗ್ರಂಥಕ್ಕೆ "ಅಶ್ರುತ ಆಗಮ" ವೆಂದು ಪ್ರಸಿದ್ಧ ಪಡೆದಿದೆ.ಅನಾದಿ ಕರ್ಮಗಳಿಂದ ತ್ರಿಗುಣಗಳಾದ ಸತ್ವ, ರಜೋ,ತಮ ಬಂಧನಕ್ಕೆ ಒಳಗಾಗುತ್ತಾನೆ.ಆಗ ಪ್ರತಿಯೊಬ್ಬ ಜೀವಿಯು ಪ್ರಾರಬ್ಧ, ಸಂಚಿತ, ಆಗಾಮಿ ಕರ್ಮಗಳಿಗೆ ಸಿಲುಕಿ ಅನೇಕ ಜನ್ಮಗಳಲ್ಲಿ ಹುಟ್ಟುತ್ತಾನೆ.

ಸಂಸಾರ ಬಂಧನದಲ್ಲಿ ಹುಟ್ಟಿ ಇಂದ್ರಿಯಗಳ ಆಸೆಗಳಿಗೆ ಬಲಿಯಾಗಿ ಪಾಪ ಮಾಡಿ ದುಃಖಕ್ಕೆ ಗುರಿಯಾಗುತ್ತಾನೆ. ಆಗ ಇಂತಹ ಬಂಧಕಗಳಿಂದ ಬಿಡಿಸಲು ಮೋಚಕನಾದ ಸರ್ವೋತ್ತಮನಾದ ಸರ್ವಸ್ವತಂತ್ರನಾದ ಸರ್ವ ದೋಷ ವಿದೂರನಾದ ಸರ್ವೇಶ್ವರನಾದ ಪ್ರತಿಯೊಬ್ಬರಲ್ಲಿರುವ ಬಿಂಬ ರೂಪಿಯಾದ ಶ್ರೀಹರಿಯೇ ನಮಗೆ ಗತಿ ಮತ್ತು ಮತಿ.

"ಓಂ ಅಥತೋ ಬ್ರಹ್ಮಜಿಜ್ಞಾಸಾ ಓಂ" ಅಂದರೆ ಪರ ಬ್ರಹ್ಮನ ಗುಣ ಚಿಂತನೆಯಿಂದ ಸುಜ್ಞಾನ ಉಂಟಾಗಿ ಮೋಕ್ಷ ನೀಡುವುದೇ, ಹರಿಕಥಾಮೃತಸಾರದ ಮಹಿಮೆ ಸೃಷ್ಟಿಯ ಪಂಚಭೇದ ತಾರತಮ್ಯದಲ್ಲಿ ಪಂಚರೂಪನಾದ ಅನಿರುದ್ಧ ಪ್ರದ್ಯುಮ್ನ, ಸಂಕರ್ಷಣ, ವಾಸುದೇವ, ನಾರಾಯಣನಿದ್ದು ಸಲುಹುತ್ತಿರುತ್ತಾನೆ.ಸರ್ವೋತ್ತಮನಾದ ಶ್ರೀಹರಿಯು, ವಾಯು ಜೀವೋತ್ತಮರಾದ ಭಾರತಿ ರಮಣರಾದ ವಾಯುದೇವರ ಮೂಲಕ ಸಕಲ ತತ್ವಾಭಿಮಾನಿಗಳ ಮೂಲಕ ಪ್ರತಿ ಜೀವಿಯಲ್ಲೂ ಕಾರ್ಯಕಾರಣನಾಗಿ ಕರ್ಮಗಳನ್ನು ಮಾಡಿಸುತ್ತಾನೆ. ಭಗವಂತನ ಗುಣ ಮಹಿಮೆ ಅರಿತು ಶ್ರವಣ, ಮನನ, ಧ್ಯಾನ , ಮಾಡಿ, ಅನುಸಂಧಾನದಲ್ಲಿ ತಂದರೆ ನಮಗೆ ಅಭಿಷ್ಟೇಗಳು ಈಡೇರುವುದಲ್ಲದೆ,ರೋಮಾಂಚನವಾಗುತ್ತದೆ ಮತ್ತು ಅಖಂಡ ಭಾಗ್ಯ ಹೆಚ್ಚುತ್ತದೆ.

**ಜೀವನದಲ್ಲಿ ಹುಟ್ಟು ಸಾವಿನ ನಡುವೆ**

ನಮ್ಮ ಆತ್ಮ ಸಂಸ್ಕಾರದ ಬೆಳವಣಿಗೆ ಆಗುತ್ತದೆ. ಇಂತಹ ಆಧ್ಯಾತ್ಮ ಜ್ಞಾನ ನಮ್ಮನ್ನು ಜೀವನದಲ್ಲಿ ಸರಿಯಾದ ಮಾರ್ಗದರ್ಶನ ನೀಡುತ್ತದೆ. ಸಾಧನ ಶರೀರ ಬಂದಿರುವುದು ದುರ್ಲಭ ಆದ್ದರಿಂದ ಹರಿಕಥಾಮೃತ ಸಾರದಭಗವಂತನ ಸತ್ ಚಿಂತನೆಯ ಮಹಿಮೆಯನ್ನು ಪಾನ ಮಾಡುತ್ತಾ ಮತ್ತೊಬ್ಬರಿಗೂ ಮಾಡಿಸುತ್ತಾ ನಡೆಯೋಣ.

ಹರಿಕಥಾಮೃತಸಾರದ ಹಿರಿಮೆ ಎಂದರೆ ಸಜ್ಜನರ ಸಂಗ ದೊರೆತು ಜೀವನ ಅಹಂಕಾರ ಭಂಗವಾಗುತ್ತದೆ. ಕಾಮಕ್ರೋಧಗಳು ನಾಶವಾಗುತ್ತದೆ. ಒಳ್ಳೆಯ ಜ್ಞಾನ ಪಡೆಯುವುದರಿಂದ ಜೀವನ ಸಮತೋಲನವಾಗಿರುತ್ತದೆ. ನಿಂದಕರ ಮಾತಿಗೆ ನೋವು ಆಗುವುದಿಲ್ಲ ಮನಸ್ಸಿನ ಹರಿನಾಮಸ್ಮರಣೆಯ ಬಂಧಕವಾಗುತ್ತದೆ.

ವೇದಗಳಂತೆ ಪಾವನವಾದ ಹರಿಕಥಾಮೃತಸಾರವು ನಿತ್ಯ ಜೀವನದಲ್ಲಿ ಕಲೆತು, ಪಠಿಸಿ ಸಾಮಾನ್ಯ ಪಾರಾಯಣ ಕ್ರಮ ಮಾಡಿದರೆ, ಜೀವನದಲ್ಲಿ ಬದಲಾವಣೆಯಂತು ಖಂಡಿತವಾಗುತ್ತದೆ. ಅಮೃತದ ಸವಿಯನ್ನು ಸವಿದಾಗಲೇ ಅದರ ಮಹತ್ವ ಗೊತ್ತಾಗುವುದು. ಹಿಂದಿನಿಂದಲೂ ಹರಿಕಥಾಮೃತಸಾರದ ಚಿಂತನೆ-ಮಂಥನ-ಸಂವಾದ ನಡೆಯುತ್ತಲೇ ಬಂದಿದೆ ಈಗಲೂ ನಡೆಯುತ್ತಿದೆ.

ಜಗನ್ನಾಥದಾಸರ ಅವಿರತ ಶ್ರಮದಫಲವಾಗಿ ನಮ್ಮಂತಹ ಸಾಮಾನ್ಯ ಜನರಿಗೆ ತಿಳಿಯುವಂತಾಗಿದೆ. ಇಷ್ಟಾಗ್ಯೂ ಭಗವಂತನ ಗುಣವರ್ಣನೆ ಎಷ್ಟು ಮಾಡಿದರೂ ತೃಪ್ತಿಯಾಗದು ಮತ್ತು ಅವನ ಅನಂತ ಗುಣ ಮಹಿಮನ ಅನುಗ್ರಹದಿಂದಲೇ ಚರಾಚರ ವಸ್ತುಗಳಲ್ಲಿದ್ದು ಕಾರ್ಯ ಮಾಡಿಸುತ್ತಿದ್ದಾನೆ. ಪ್ರತಿಪಾರಾಯಣದಲ್ಲೂ ಹೊಸ ಹೊಸ ವಿಷಗಳ ಅರಿವು ಮೂಡಿಸುವ ನಿತ್ಯ ನೂತನ ಗ್ರಂಥವಾಗಿದೆ.

(-ಮುಂದುವರೆಯುತ್ತದೆ.)





# ಭಾವಿಸಮೀರ ಶ್ರೀವಾದಿರಾಜರು

-ಶ್ರೀಧರ ರಾಯಸಂ

98453 27129

ಶ್ರೀವಾದಿರಾಜ ಗುರುಸಾರ್ವಭೌಮರು ತಾವು ರಚಿಸಿದ ಸಂಸ್ಕೃತ ಖಂಡ ಕಾವ್ಯ - ತೀರ್ಥ ಪ್ರಬಂಧ'' ದಲ್ಲಿ ಎಲ್ಲಾ ತೀರ್ಥ ಕ್ಷೇತ್ರಗಳ ವರ್ಣನೆ ಮಾಡಿದರೂ ಅತಿ ಹೆಚ್ಚು ಶ್ಲೋಕಗಳಿಂದ ವರ್ಣನೆ ಮಾಡಿರುವ ಮಹಾಕ್ಷೇತ್ರ, ಭೂವೈಕುಂಠ ಶ್ರೀನಿವಾಸ ನೆಲೆಸಿರುವ ತಿರುಪತಿ.

ಶ್ರೀ ವೆಂಕಟಲಸಚ್ಛೈಲವಾಸೀ ದಾಸಿಕೃತಾಮರಃ


ಛಾಯಯಾ ಪಾತು ಮಾಂ ನಿತ್ಯಂ ಶ್ರೀನಿವಾಸಸುರದ್ರುಮಃ

ಶ್ರೀ ವೆಂಕಟವೆಂಬ ಉಜ್ವಲ ಪರ್ವತದಲ್ಲಿ ನೆಲೆಸಿರುವ ದೇವತೆಗಳನ್ನು ದಾಸರನ್ನಾಗಿ ಹೊಂದಿರುವ, ಶ್ರೀನಿವಾಸನೆಂಬ ಕಲ್ಪವೃಕ್ಷವು ತನ್ನ ನೆರಳಿನಿಂದ ಸದಾಕಾಲವೂ ನನ್ನನ್ನು ಸಲಹಲಿ ಎಂದು ಶ್ರೀ ವಾದಿರಾಜರು ಭಕ್ತಿಯಿಂದ ಸ್ತೋತ್ರ ಮಾಡಿದ್ದಾರೆ. ಶ್ರೀನಿವಾಸನು ಸಕಲ ದಿಕ್ಕುಗಳಲ್ಲಿರುವ ತನ್ನ ಭಕ್ತರನ್ನು ನೋಡಿ,ಅವರನ್ನೆಲ್ಲಾ ಕರುಣೆಯಿಂದ ಸಲಹಲೋ ಎಂಬಂತೆ, ಉನ್ನತವಾದ ವೆಂಕಟಪರ್ವತದ ಮೇಲೆ ನಿಂತಿರುವನು ಎಂದು ಮತ್ತೊಂದು ಶ್ಲೋಕದಲ್ಲಿ ಶ್ರೀ ವಾದಿರಾಜರು ಸ್ತೋತ್ರ ಮಾಡಿರುವರು.ಯಾರು ಹೊಳೆಯುವ ಶಂಖ ಚಕ್ರಗಳನ್ನು ಧರಿಸಿ ತನ್ನ ಪಾದವನ್ನು ಪೂಜಿಸುವರೋ, ಅಂತಹವರಿಗೆ ಈ ಭವಸಾಗರವು ಸೊಂಟದಷ್ಟು ಮಾತ್ರ ಆಗುತ್ತದೆಂದು ಶ್ರೀ ವೆಂಕಟೇಶನು ತನ್ನ ಕರಕಮಲಗಳಿಂದ ಸ್ಪಷ್ಟವಾಗಿ ತಿಳಿಸಿರುವನು. ತನ್ನ ಭಕ್ತರ ಮನೆಯಲ್ಲಿ ಬಹಳವಾಗಿ ನೆಲೆಸಿರುವ ಸಂಪತ್ತನ್ನು (ಮಹಾಲಕ್ಷ್ಮಿ) ತನ್ನ ವಶಕ್ಕೆ ತೆಗೆದುಕೊಳ್ಳಲೆಂದು ಅವರ ಕಾಣಿಕೆಗೆ ಪ್ರತಿಯಾಗಿ ಭಕ್ತರಿಗೆ ಪುನಃ ಪುನಃ ಅಭೀಷ್ಟವನ್ನು ನೀಡತೊಡಗುವ ಮೇಘಶ್ಯಾಮ. ದೇವಪ್ರಿಯ ಶ್ರೀ ವೆಂಕಟೇಶನು ಆ ಸಂಪತ್ತು ಭಕ್ತರ ಮನೆಯಲ್ಲಿ ಸಾವಿರ ಪಟ್ಟು ಹೆಚ್ಚಿದ್ದನ್ನು ಕಂಡು ವಿಸ್ಮಯ ಪಡುತ್ತಾ ಅವರ ಗೃಹಗಳಲ್ಲೇ ತಾನು ಸ್ವತಃ ನಿರಂತರ ನೆಲೆಸಿಟ್ಟಿರುವನೆಂದು ವರ್ಣನೆ ಮಾಡುತ್ತಾ ಶ್ರೀವಾದಿರಾಜರು ಸ್ತುತಿಸಿದ್ದಾರೆ. ಗರುಡನ ಹೆಗಲೇರಿ ಶ್ರೀದೇವಿ ಭೂದೇವಿಯವರೊಂದಿಗೆ, ಭಕ್ತರಿಗೆ ಸರ್ವಸ್ವನಾಗಿರುವ ಶ್ರೀವೆಂಕಟೇಶನನ್ನು ಆಶ್ರಯಿಸುವೆ ಎಂದು ಶ್ರೀವಾದಿರಾಜರು ಪ್ರಾರ್ಥಿಸಿದ್ದಾರೆ. ಶ್ರೀನಿವಾಸ ದೇವರು ಆದಿಶೇಷನನ್ನು ಹಾಸಿಗೆ ಮಾಡಿಕೊಂಡು ಬೆಟ್ಟವನ್ನಾಗಿ ಮಾಡಿ ನಿಂತಿರುವನು ಶಿವ, ಸೂರ್ಯ, ಚಂದ್ರ ಮೊದಲಾದವರು ಕಿಂಕರಪದವಿ ಹೊಂದಿರುವರು, ಆದರೆ ಶ್ರೀನಿವಾಸನು ಪುಂಡರೀಕಾಕ್ಷನೂ, ಬ್ರಹ್ಮಾದಿ ಸಕಲ ಜಗತ್ತಿಗೆ ಮಿಗಿಲಾದವನೆಂದು ತಿಳಿಸಿರುವರು. ಉನ್ನತವಾದ ಶ್ರೀವೆಂಕಟಪರ್ವತ ಶ್ರೀನಿವಾಸನ ವಾಸಸ್ಥಾನವಾಗಿದೆ. ಸುರ ಶ್ರೇಷ್ಠ ಪೂಜಿತ ವೇದವೇದ್ಯನಾದ ಶ್ರೀ ವೆಂಕಟೇಶನನ್ನು ಸೇವಿಸುವೆವು,ದೀನರಿಗೆ ಆಸರೆ ಯಾದವನು,ರಮ್ಯ ಸ್ವರೂಪನು, ಸಮಸ್ತ ಮಾನವರ ನೋವನ್ನು ನಿವಾರಿಸುವವನು ಈ ಭೂಮಿಯಲ್ಲಿ ನಿನಗೆ ಸಮನಾದವನು ಯಾರೂ ಇಲ್ಲವೆಂದು ಶ್ರೀ ವಾದಿರಾಜರು ತಿಳಿಸಿದ್ದಾರೆ

ಸಮಸ್ತ ಸುಜನಾಧಾರಂ ದೋಷದೂರಂ ಗುಣಾಕರಮ್

ಶ್ರೀವೆಂಕಟಾಚಲಾವಾಸಂ ಶ್ರೀನಿವಾಸಂ ಭಜೇಽನಿಶಮ್ ॥





ಸಕಲ ಸಜ್ಜನರಿಗೆ ನೆಲೆಯಾದ ದೋಷರಹಿತನಾದ, ಗುಣ ಪೂರ್ಣನಾದ ಶ್ರೀವೆಂಕಟಗಿರಿನಿಲಯನಾದ ಶ್ರೀನಿವಾಸನನ್ನು ಅನವರತವೂ ಸೇವಿಸುವೆನು ಎಂದು ಶ್ರೀವಾದಿರಾಜ ಗುರುಸಾರ್ವಭೌಮರು ನಮಸ್ಕರಿಸುತ್ತಾ ಸ್ತೋತ್ರ ಮಾಡಿದ್ದಾರೆ.

ಶ್ರೀವಾದಿರಾಜರು ಸಂಸ್ಕೃತ, ಕನ್ನಡ, ತುಳು ಭಾಷೆಯಲ್ಲಿ ಅನೇಕ ಕೃತಿಗಳನ್ನು ರಚಿಸಿ, ಹರಿಸರ್ವೋತ್ತಮತ್ವ ಮಧ್ವ ಸಿದ್ಧಾಂತದ ಮಹಿಮೆಯನ್ನು ಭಕ್ತರಿಗೆ ತಿಳಿಸಿದ್ದಾರೆ. ಸಂಸ್ಕೃತದಲ್ಲಿ ಪ್ರಮುಖವಾಗಿ ಸುಧಾ ಟಿಪ್ಪಣಿ,ತಾತ್ಪರ್ಯ ನಿರ್ಣಯ ಟೀಕಾ ಭಾರತಟೀಕಾ (ಲಕ್ಷಾಲಂಕಾರ) ಮುಂತಾದವು, ಕಾವ್ಯ ಗ್ರಂಥಗಳಲ್ಲಿ ರುಕ್ಮಿಣೇಶ ವಿಜಯ, ಸರಸ ಭಾರತಿ ವಿಲಾಸಃ ತೀರ್ಥ ಪ್ರಬಂಧ, ಸ್ವಪ್ನವೃಂದಾವನಾಖ್ಯಾನ, ವಿಮರ್ಶಾಗ್ರಂಥಗಳಲ್ಲಿ ಭೂಗೋಲ, ಖಗೋಲ, ವಿವರಣ, ವಾಯುಸ್ತುತಿ ಮುಂತಾದವು. ಕನ್ನಡದಲ್ಲಿ ವೈಕುಂಠವರ್ಣನೆ, ಗುಂಡಕ್ರಿಯೆ ಲಕ್ಷ್ಮೀಶೋಭಾನೆ, ಸ್ವಪ್ನಪದ, ಭ್ರಮರಗೀತೆ, ಕೇಶವನಾಮ, ಸುಳಾದಿಗಳು, ಅಷ್ಟಕ, ಅನೇಕ ಹಯವದನ ಅಂಕಿತದಿಂದ ದೇವರನಾಮಗಳು, ಕೀರ್ತನೆಗಳು, ಉಗಾಭೋಗಗಳನ್ನು ರಚಿಸಿ ಭಕ್ತರಿಗೆ ದಿನನಿತ್ಯ ಪಾರಾಯಣ ಹಾಡಲು ಸಹಾಯ ಮಾಡಿದ ಗುರುಸಾರ್ವಭೌಮರು.

ಶ್ರೀರುಕ್ಮಿಣೇಶ ವಿಜಯ ಸಂಸ್ಕೃತ ಕಾವ್ಯ 19 ಸರ್ಗಗಳು 1241 ಶ್ಲೋಕಗಳಿಂದ ಕೂಡಿ, ಅತ್ಯಂತ ಶೃಂಗಾರ ಅಲಂಕಾರ, ದಿವ್ಯವಾದ ಕಾವ್ಯ ಶ್ರೀವಾದಿರಾಜರು ರಚಿಸಿದರು.ಪುಣೆಯಲ್ಲಿ ಮಾಘಕಾವ್ಯ ಶಿಶುಪಾಲ ವಧ ಕಾವ್ಯಕ್ಕಿಂತ ಶ್ರೇಷ್ಠ ಈ ಕಾವ್ಯವೆಂದು ಪಂಡಿತರು ಪರಿಗಣಿಸಿದರು. ಶ್ರೀವಾದಿರಾಜರಿಗೆ ನಂತರ ''ಕವಿಕುಲತಿಲಕ'' ಎನ್ನುವ ಮಹಾಪ್ರಶಸ್ತಿ ನೀಡಿ, ಧನ್ಯತೆ ಪಡೆದರು.

ಲಕ್ಷ್ಮೀ ಶೋಭಾನೆ ಎಂಬ ಸರ್ವ ಮಂಗಳಕರವಾದ ಪದವನ್ನು ರಚಿಸಿ, ಶ್ರೀವಾದಿರಾಜರು ಲಕ್ಷ್ಮೀನಾರಾಯಣರ ಮಂಗಳಕರ ಮಹಿಮೆಯನ್ನು ನಿರೂಪಿಸಿದ್ದಾರೆ. ಜಹಗೀರದಾರನ ಮನೆಯಲ್ಲಿ ವರ ಮಹಾಶಯನನ್ನು ಸಾವಿನ ದವಡೆಯಿಂದ ಪಾರು ಮಾಡಿಸಿ, ಲಕ್ಷ್ಮೀಶೋಭಾನೆ ಪದ ರಚಿಸಿ ಅವರ ದುಃಖ ಆಕ್ರಂದನ ನಿಲ್ಲಿಸಿದ ಮಹಾನುಭಾವರು, ಯತಿಶ್ರೇಷ್ಠರು. ಈಗಲೂ ಈ ಪದ ಎಲ್ಲಾ ಮದುವೆ ಮನೆಯಲ್ಲಿ ಹಾಡುವ ಸಂಪ್ರದಾಯವಿದೆ.

ಶ್ರೀವಾದಿರಾಜರು ಮಾನವೀಯ ಮೌಲ್ಯಗಳಿಗೆ ಸ್ಪಂದಿಸಿ ಕಾವ್ಯವನ್ನು ಕರತಲಾಮಲಕ ಮಾಡಿಕೊಂಡು ವ್ಯಾಸ ಸಾಹಿತ್ಯ, ದಾಸ ಸಾಹಿತ್ಯದ ಸೊಬಗನ್ನು ಇಮ್ಮಡಿ ಗೊಳಿಸಿದ ತಪಸ್ವಿಗಳು ಋಜುಗಳು, ಯೋಗಿಗಳು, ಅಪರೋಕ್ಷ ಜ್ಞಾನಿಗಳು.

### ಶ್ರೀ ವಾದಿರಾಜರ ಅವತಾರ

ಶ್ರೀ ಮಧ್ವಾಚಾರ್ಯರ ಸೋದರರಾದ ಶ್ರೀ ವಿಷ್ಣುತೀರ್ಥರ ಪರಂಪರೆಯ (ಸೋದೆ ಮಠ ಉಡುಪಿ ಅಷ್ಟ ಮಠದಲ್ಲೊಂದು ) 20ನೇ ಯತಿಯಾಗಿ ಶ್ರೀವಾದಿರಾಜರು ಉಡುಪಿ ಹತ್ತಿರ ಕುಂಭಾಸಿ ಸಮೀಪ ಹೂವಿನಕೆರೆಯಲ್ಲಿ ಶಾರ್ವರಿ ಸಂವತ್ಸರ ಸ್ವಾತೀ ನಕ್ಷತ್ರ, ಬುಧವಾರ 29-1-1481 ಮಾಘ ಶುದ್ಧ ದ್ವಾದಶಿ ಅವತಾರ ಮಾಡಿದರು. ರಾಮಾಚಾರ್ಯ ಮತ್ತು ಗೌರಿದೇವಿಗೆ ಪುತ್ರನಾಗಿ, ಅವತಾರ ಮಾಡಿದರು. ಗದ್ದೆಯಲ್ಲಿ ಗೌರಿ ದೇವಿಗೆ ಪ್ರಸವವಾದ್ದರಿಂದ ಗೌರಿಗದ್ದೆಯೆಂದು ಹೆಸರಾಯಿತು. ಭೂ ವರಾಹನ ಅನುಗ್ರಹದಿಂದ ಅವತಾರವಾದ ದಂಪತಿಗಳ ಪುತ್ರನಿಗೆ ''ಭೂ ವರಾಹ''ಎಂದು ನಾಮಕರಣ ಮಾಡಲಾಯಿತು. ಮಗುವನ್ನು ಆಶ್ರಮಕ್ಕೆ ಸೇರಿಸಲು ಶ್ರೀವಾಗೀಶತೀರ್ಥರು ದಂಪತಿಗಳನ್ನು ಕೇಳಿದಾಗ ಅವರು ಚಿಂತಿಸುತ್ತಿರಲು ಭೂವರಾಹನಿಗೆ ತಮ್ಮ ಹುಟ್ಟಿದ ಮೇಲೆ ಆಶ್ರಮಕ್ಕೆ ಒಪ್ಪಿಸ ಬೇಕೆಂದು ವಾಗೀಶತೀರ್ಥರು ತಿಳಿಸಿದರು. ಅದರಂತೆ ಕೆಲ ಸಮಯದ ನಂತರ ಭೂವರಾಹನಿಗೆ ಸಹೋದರ ಜನಿಸಲು (ಸುರೋತ್ತಮ ತೀರ್ಥರು) ಭೂವರಾಹನನ್ನು ಆಶ್ರಮಕ್ಕೆ ದಂಪತಿಗಳು ಒಪ್ಪಿಸಿದರು. ಭೂವರಾಹನ ಪಾಂಡಿತ್ಯ ಅಸಾಧಾರಣ ದೈವಭಕ್ತಿ, ಕಂಡು ಎಂಟನೇಯ ವರ್ಷಕ್ಕೆ ಶ್ರೀ ವಾಗೀಶತೀರ್ಥರು ಭೂವರಾಹನಿಗೆ ಆಶ್ರಮ ನೀಡಿ ಸನ್ಯಾಸ ದೀಕ್ಷೆ ಕೊಟ್ಟು ''ವಾದಿರಾಜ ತೀರ್ಥ'' ಎಂದು ನಾಮಕರಣ ಮಾಡಿದರು. ಶ್ರೀ ವಾದಿರಾಜರು ಗುರುಗಳಿಂದ ಸಕಲ ವಿದ್ಯೋಪದೇಶವನ್ನು ಪಡೆದು, ಶ್ರೀಭೂವರಾಹ ದೇವರನ್ನು ಪೂಜಿಸುತ್ತಾ ದಿಗ್ವಿಜಯ ಯಾತ್ರೆ ಮಾಡಿ, ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶಿಸಿ , ಅದರ ಮಹಿಮೆಯ ತೀರ್ಥ ಪ್ರಬಂಧ ಕೃತಿ ರಚಿಸಿದರು.

ಶ್ರೀ ವಾದಿರಾಜರು ಅವತಾರ ಮಾಡುವ ಮೊದಲು ರಾಮಚಾರ್ಯ ಮತ್ತು ಸರಸ್ವತಿ ದೇವಿಗೆ ಪುತಿ ಜನಿಸಿದಳು. ಆದರೆ ಸರಸ್ವತೀ ದೇವಿ ಗಂಡು ಮಗು ಜನಿಸಿದರೆ, ತಿರುಪತಿ ಶ್ರೀನಿವಾಸನಿಗೆ ಲಕ್ಷಾಲಂಕಾರ ಮಾಡುವೆ ಎಂಬ ಹರಕೆ ಹೊತ್ತಿದ್ದಳು. ತಾಯಿಯ ಹರಕೆ ತೀರಿಸಲು ವಾದಿರಾಜರು ಲಕ್ಷ ಶ್ಲೋಕಾತ್ಮಕ ಮಹಾಭಾರತ ಗ್ರಂಥದ ಕಠಿಣ ಶಬ್ದಗಳಿಗೆ ಟೀಕೆ ಬರೆದು ಬದರಿಯಲ್ಲಿ ವೇದವ್ಯಾಸ ದೇವರಿಗೆ ಸಮರ್ಪಿಸಿದರು. ಸ್ವಪ್ನದಲ್ಲಿ ವಾದಿರಾಜರ ತಾಯಿ ಸಹ ಭೂವರಾಹ ದೇವರಿಗೆ ಲಕ್ಷಾಲಂಕಾರಗಳನ್ನು ಸಮರ್ಪಿಸಿದ ದೃಶ್ಯ ಕಂಡು ಹರಕೆ ತೀರಿತೆಂದು ಮುದಗೊಂಡಳು.

ಅನೇಕ ಸಂಸ್ಕೃತ, ಕನ್ನಡ, ತುಳು ಗ್ರಂಥಗಳನ್ನು ವಾದಿರಾಜರು ರಚಿಸಿದರು. ಅಂತ್ಯಜರ ಉದ್ಧಾರಕ್ಕಾಗಿ, ತುಳು ಭಾಷೆಯಲ್ಲಿ ದೇವರನಾಮ ''ಪಾಡ್ದನ'' ರಚಿಸಿ ಅನುಗ್ರಹ ಮಾಡಿದರು. ಪಂಢರಪುರದಲ್ಲಿ ಹಯಗ್ರೀವ ಮಹಿಮೆ, ಜಹಗೀರದಾರನಿಗೆ ಪುತ್ರ ಸಂತಾನವಾಗಲು ಅನುಗ್ರಹ, ದ್ವಾರಕೆಯಲ್ಲಿ ಹಯಗ್ರೀವ ಶಾಲಿಗ್ರಾಮ ಪಡೆದಿದ್ದು, ವಿಜಯನಗರದ ಚಕ್ರವರ್ತಿ ಶ್ರೀಕೃಷ್ಣ ದೇವರಾಯನಿಗೆ ವಾಲಿ ಭಂಡಾರದಿಂದ ಹೇರಳ, ಮುತ್ತು, ರತ್ನ ದೊರಕು ವಂತೆ ಅನುಗ್ರಹಿಸಿದ್ದು, ಅವನಿಂದ ಕೇವಲ ಎರಡು ವಾಲಿ ಸುಗ್ರೀವ ಪೂಜಿತ ವಿಠಲ ಮತ್ತು ರಾಮಚಂದ್ರ ಮೂರ್ತಿಪಡೆದಿದ್ದು ಇತಿಹಾಸವಾಯಿತು. ನಂತರ ಅಚ್ಯುತರಾಯ ಸಹ ತನ್ನ ವ್ಯಾಧಿ ಪರಿಹಾರ ಮಾಡಿದ ಕಾರಣಕ್ಕಾಗಿ ಶ್ರೀವಾದಿರಾಜರು ಉಡುಪಿಯಲ್ಲಿ ಪರ್ಯಾಯಸ್ಥರಾಗಿದ್ದಾಗ (ಕ್ರಿ.ಶ.1532) ಶ್ರೀಕೃಷ್ಣನ ದರ್ಶನ ಮಾಡಿ ಅನಂತೇಶ್ವರ, ಚಂದ್ರ ಮೌಳೇಶ್ವರ, ಶ್ರೀಕೃಷ್ಣ ಮಠ ಜೀರ್ಣೋದ್ಧಾರ ಮಾಡಿಸಿದನು. ಉಡುಪಿಯಲ್ಲಿ ಶ್ರೀಮಧ್ವಾಚಾರ್ಯರು ಹಾಕಿಕೊಟ್ಟ ಎರಡು ತಿಂಗಳು ಶ್ರೀಕೃಷ್ಣನ ಪೂಜೆ ಪರ್ಯಾಯಸ್ಥ ಅಷ್ಟಮಠದ ಯತಿಗಳು ಮಾಡುವುದನ್ನು ಎರಡು ವರ್ಷಕ್ಕೆ ಬದಲಾಯಿಸಿದರು.ವಿಜಯನಗರದ ವೀರ ಪ್ರತಾಪ ವೆಂಕಟರಾಯನು ಶ್ರೀವಾದಿರಾಜರನ್ನು ಸನ್ಮಾನಿಸಿ, ಆದರ - ಆತಿಥ್ಯಗಳೊಂದಿಗೆ ''ಪ್ರಸಂಗಾ ಭರಣ

ತೀರ್ಥ'' ಎಂಬ ಬಿರುದು ನೀಡಿ ಗೌರವಿಸಿದನು. ಉಡುಪಿಯಲ್ಲಿ ವಾದಿರಾಜರು ಬೃಹತ್ ಪಂಚಲೋಹದ ಗಂಟೆಯನ್ನು ಶ್ರೀಕೃಷ್ಣ ಮಠಕ್ಕೆ ಸಮರ್ಪಿಸಿದರು.ಉತ್ತರ ಭಾರತದ ಸಂಚಾರದಲ್ಲಿದ್ದಾಗ ಶ್ರೀವಾದಿರಾಜರು ಮೊಗಲ ಅರಸ ನೀಡಿದ ದ್ರವ್ಯ ಸಂಪತ್ತನ್ನು ಶ್ರೀ ಕೃಷ್ಣ ಮಠದ ಆವರಣದ ಬಿಲದಲ್ಲಿರಿಸಿ, ಸುಬ್ರಹ್ಮಣ್ಯನನ್ನು ಪ್ರತಿಷ್ಠಾಪಿಸಿ ಉಳಿದ ಸ್ವಲ್ಪ ಭಾಗವನ್ನು ಉಡುಪಿಯ ವಾದಿ ರಾಜರು ಮಠದಲ್ಲಿ ಪ್ರತಿಷ್ಠೆ ಮಾಡಿ ಮೇಲೆ ಭೂತರಾಜರನ್ನು ಪ್ರತಿಷ್ಠೆ ಮಾಡಿ ದ್ದಾರೆ.

ಸಂಚಾರ ಮಾಡುತ್ತಾ ತಿರುಪತಿ ಶ್ರೀನಿವಾಸದೇವರ ದರ್ಶನ ಮಾಡಲು ಹೊರಟಾಗ ತಿರುಪತಿ ಬೆಟ್ಟ ಸಂಪೂರ್ಣವಾಗಿ ಶಾಲಿಗ್ರಾಮದಂತೆ ಕಾಣಿಸಿತು ! ಪಾದ ಊರಲು ಮನಸ್ಸಾಗದೆ ಬೆಟ್ಟವನ್ನು ಮೋಣಕಾಲಿನಿಂದ ಊರುತ್ತಾ ಕಡಿದಾದ ಬೆಟ್ಟ ಏರಿದ್ದು ಇತಿಹಾಸ ಸುಲಭವಾಗಿ ಶ್ರೀನಿವಾಸನ ದರ್ಶನ ದೊರಕದೆ ಹೊರಗಿನ ಆವರಣದಲ್ಲಿ ಶ್ರೀನಿವಾಸ ಪ್ರತ್ಯಕ್ಷನಾಗಿ ದರ್ಶನ ನೀಡಿ ಅನುಗ್ರಹಿಸಿದ ಗೋಪುರದಲ್ಲಿರುವ ಶ್ರೀನಿವಾಸನಿಗೆ "ವಿಮಾನ ಶ್ರೀನಿವಾಸ'' ಎಂದು ಹೆಸರಾಗಿ ಭಕ್ತರು ಮೂಲ ಮೂರ್ತಿದರ್ಶನವಾದ ಮೇಲೆ ಹೊರ ಆವರಣದ ವಿಮಾನ ಶ್ರೀನಿವಾಸನ ದರ್ಶನ ಈಗಲೂ ಮಾಡುವರು.ವಾದಿರಾಜರ ಅಪಾರ ಮಹಿಮೆ ತಿಳಿದು ದೇಗುಲದ ಆಡಳಿತದ ಮಂಡಳಿಯವರು ಶ್ರೀವಾದಿರಾಜರಿಗೆ ಆದರಾದಿತ್ಯ ಮಾಡಿದರು. ವಾದಿ ರಾಜರೂ ಸಹ ಶ್ರೀನಿವಾಸ ದೇವರಿಗೆ ಶಾಲಿಗ್ರಾಮಗಳ ಸರ ಸಮರ್ಪಿಸಿದರು. ಸ್ವಪ್ನಾದೇಶದಂತೆ ದೇಗುಲದ ಅಧಿಕಾರಿಗಳು ಶ್ರೀದೇವಿ ಭೂದೇವಿ ಸಹಿತ ಸ್ವರ್ಣದ ಶ್ರೀನಿವಾಸದೇವರನ್ನು ವಾದಿರಾಜರಿಗೆ ನೀಡಿ ಗೌರವಿಸಿದರು. ಈಗಲೂ ಸೋದೆ ಮಠದ ಸಂಸ್ಥಾನ ಪೂಜೆಯಲ್ಲಿ ಈ ಪ್ರತಿಮೆಗಳು ಪೂಜಿಸಲ್ಪಡುತ್ತಿವೆ.

ಶ್ರೀವಾದಿರಾಜರನ್ನು ಪರೀಕ್ಷೆ ಮಾಡಲು ಬಂದ ನಾರಳದ ನಾರಾಯಣಾಚಾರ್ಯರು ಶಪಿಸಿಕೊಂಡು ಬ್ರಹ್ಮರಾಕ್ಷಸನಾಗಿ ಪುನಃ ಅವರಿಂದಲೇ ಮುಕ್ತನಾಗಿ ಭೂತರಾಜರಾಗಿ ಅವರ ಸಮೀಪದ ಶಿಷ್ಯನಾಗಿ ಸೇವೆ ಮಾಡುವ ಅನುಗ್ರಹ ಪಡೆದರು. ವಾದಿರಾಜರು ಕರಾವಳಿ ಭಾಗದ ಕೋಟೇಶ್ವರ ಬ್ರಾಹ್ಮಣರನ್ನು ತಪ್ತಮುದ್ರಾಧಾರಣದಿಂದ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ವಿಜಯನಗರದಲ್ಲಿ ವಿಜಯೀಂದ್ರತೀರ್ಥರು,ವಾದಿ ರಾಜರು, ಪುರಂದರದಾಸರು, ಕನಕದಾಸರು, ಬೇಲೂರು ವೈಕುಂಠದಾಸರು, ಶ್ರೀವ್ಯಾಸರಾಜರೊಂದಿಗೆ ಅನೇಕ ಸಲ ದೇವರ ಆರಾಧನೆಗಳನ್ನು ಮಾಡುತ್ತಿದ್ದರು ಯಂತ್ರೋದ್ಧಾರಕ ದೇವರ ಗುಡಿ ಇವರ ಸಮಾಗಮದತಾಣವಾಗಿತ್ತು.

ವಾದಿರಾಜರು ನೂರೆಂಟು ನಾಮವುಳ್ಳ ನಾರಾಯಣ ಸ್ತೋತ್ರ ದಶಾವತಾರ ರಚಿಸಿ ರಾಜಕುಮಾರಿಗೆ ಗಂಡನನ್ನು ಬದುಕಿಸದ ಮಹಾನುಭಾವರು ವಾದಿರಾಜರಿಗೆ ಸರ್ವಜ್ಞಕಲ್ಪಮ್ ಷಟ್ತರ್ಕಷಣ್ಮುಖ ಜಗದೇಕ ಮಲ್ಲವಾದಿ ಬಿರುದುಗಳು ಸಂದಿವೆ. ರಘುನಾಥಾಚಾರ್ಯರಿಂದ ರಚಿತ ವೃತ್ತರತ್ನ ಸಂಗ್ರಹ ವಾದಿರಾಜರ ಮಹಿಮೆಯ ಅಪೂರ್ವ ಕೃತಿಯಾಗಿದೆ. ಉಡುಪಿಯಲ್ಲಿ ಶ್ರೀ ಕನಕದಾಸರು ಸಮರ್ಪಿಸಿದ ನೈವೇದ್ಯ ಗಂಜೀ, ನೀರು, ರೊಟ್ಟಿ ಈಗಲೂ ಶ್ರೀ ಕೃಷ್ಣನಿಗೆ ಸಮರ್ಪಿತವಾಗುತ್ತದೆ.


ಸೋದೆಯ ರಾಜ ಅರಸಪ್ಪನಾಯಕನ ಆಸ್ಥಾನದಲ್ಲಿದ್ದ ಮಾಂತ್ರಿಕ ಭೈರವೇಂದ್ರನನ್ನು ವಾದದಲ್ಲಿ ಸೋಲಿಸಿ, ವಾದಿರಾಜರು ಅವನಿಂದ ಅನೇಕ ಛತ್ರ, ಚಾಮರ, ಮುತ್ತಿನ ಕಿರೀಟ, ಕುಲಾವಿ, ಬಸವನ ಗಂಟೆ, ಸಮರ್ಪಿಸಿದ್ದನ್ನು ಸ್ವೀಕರಿಸಿದರು. ಕೆಲ ಕಾಲ ಅರಸಪ್ಪನಾಯಕ ರಾಜ್ಯ ಭ್ರಷ್ಟನಾಗಿರಲು ಅವನನ್ನು ಅನುಗ್ರಹಿಸಿ ವಾದಿರಾಜರು ಪುನಃ ರಾಜ್ಯ ಸಂಪಾದಿಸಲು ಮಾಡಿದರು ಕಾಣಿಕೆಯ ರೂಪದಲ್ಲಿ ಅರಸಪ್ಪನಾಯಕ ವಾದಿರಾಜರ ಆದೇಶದಂತೆ ತ್ರಿವಿಕ್ರಮ ದೇವಾಲಯ ಕಟ್ಟಿಸಿದ.ಬದರಿಯಿಂದ ಭೂತರಾಜರು ರಥಸ್ಥ ತ್ರಿವಿಕ್ರಮ ದೇವರನ್ನು ತಂದರು. ಶ್ರೀ ವಾದಿರಾಜರು ಅರಸಪ್ಪ ನಾಯಕನು ಕಟ್ಟಿಸಿದ ದೇಗುಲವನ್ನು ವಾದಿರಾಜರು ಕ್ರಿ.ಶ. 1582 ರಲ್ಲಿ ವೈಶಾಖ ಶುದ್ಧ ಪೂರ್ಣಿಮೆ ದಿವಸ ತ್ರಿವಿಕ್ರಮ ದೇವರನ್ನು ಪ್ರತಿಷ್ಠಾಪಿಸಿದರು ಹಯಗ್ರೀವ ಸರೋವರದ ಹತ್ತಿರ ವಿದ್ದ ಲಕ್ಷ್ಮೀದೇವಿಯ ಮೂರ್ತಿಯನ್ನು ಶ್ರೀವಿಶ್ವೇಂದ್ರರು ತ್ರಿವಿಕ್ರಮ ದೇಗುಲದಲ್ಲಿ ಪುನಃ ಪ್ರತಿಷ್ಟಾಪಿಸಿದರು.

ಶ್ರೀವಾದಿರಾಜರು ಐದು ಪರ್ಯಾಯ ಪೂರೈಸಿದರು. ಸೋದೆಯಲ್ಲಿ ಪಂಚ ವೃಂದಾವನ ಪ್ರತಿಷ್ಠಾಪಿಸಿ ಸುತ್ತಲೂ ಇರುವ ನಾಲ್ಕು ವೃಂದಾವನದಲ್ಲಿ ದಶಾವತಾರದ ದೇವರು, ಮೂಲವೃಂದಾವನದಲ್ಲಿ ಶ್ರೀವಾದಿರಾಜರು ಹನುಮ ಭೀಮ,ಮಧ್ವರಿಂದ ಸಮಸ್ಥಾನದಲ್ಲಿ ರಾಮ,ಕೃಷ್ಣ, ವೇದವ್ಯಾಸರು ಹಯಗ್ರೀವ ರೂಪಿ ಅವರವರ ಉಪಾಸ್ಯ ಮೂರ್ತಿಯೊಂದಿಗೆ ವಿರಾಜಮಾನ ರಾಗಿರುವರು.ಎದುರಿಗೆ ಶ್ರೀವೇದವ್ಯಾಸದೇವರು ಪ್ರತಿಷ್ಟಾಪಿಸಲ್ಪಟ್ಟಿದೆ.

ಶ್ರೀ ವಾದಿರಾಜರು ತ್ರಿವಿಕ್ರಮ ದೇವರ ರಥೋತ್ಸವ ಫಾಲ್ಗುಣ ಶುಕ್ಲ ಹುಣ್ಣಿಮೆ ವಿಜೃಂಭಣೆಯಿಂದ ಜರುಗಿಸಿ, ನಂತರ ಅನೇಕ ಭಕ್ತರ ಭೂತ ರಾಜರ, ಆಶ್ರಮ ಶಿಷ್ಯರಾದ ಶ್ರೀವೇದವೇದ್ಯರ ಸಮ್ಮುಖದಲ್ಲೇ ಸಶರೀರವಾಗಿ ಫಾಲ್ಗುಣ ಕೃಷ್ಣ ತೃತೀಯಾ ಬುಧವಾರ, ಸ್ವಾತಿ ನಕ್ಷತ್ರ, ಕ್ರಿ.ಶ. 1601 ಶಾರ್ವರಿ ಸಂವತ್ಸರದಲ್ಲಿ ಬೃಂದಾವನ ಪ್ರವೇಶ ಮಾಡಿದರು. ಒಂದಂಶದಲ್ಲಿ ಬೃಂದಾವನದಲ್ಲಿದ್ದು ಭಕ್ತರನ್ನು ಅನುಗ್ರಹಿಸಿ, ಅವರ ಅಭೀಷ್ಟವನ್ನು ಪೂರೈಸುವರು, ಮತ್ತೊಂದು ಅಂಶದಲ್ಲಿ ಪುಷ್ಪಕ ವಿಮಾನದಲ್ಲಿ ಕುಳಿತು ವೈಕುಂಠಕ್ಕೆ ಹೊರಟರು, ಪಕ್ಕದಲ್ಲಿ ಭೂತರಾಜರ ವೇದವೇದ್ಯರ ಗುಡಿ,ವೃಂದಾವನ ಇದೆ. ಭೂತ ರಾಜರಿಗೆ ಕಾಯಿ ಬಿಡುವ ಸಂಪ್ರದಾಯವಿದೆ. ನಂತರ ಏಡಮೂಕ ಬ್ರಾಹ್ಮಣನಿಂದ ಸ್ವಪ್ನ ವೃಂದಾವನದ ಮಹಿಮೆ (22 ಅಧ್ಯಾಯಗಳು) ವಾದಿರಾಜರು ಮಹಿಮೆ ಪ್ರಸಿದ್ದಿಯಾಗಿದೆ.

35 ನೇ ಯತಿಗಳಾದ ಶ್ರೀ ವಿಶ್ವೋತ್ತಮ ತೀರ್ಥರು ವಾದಿರಾಜರ ಸೇವೆ ಮಾಡಿ ಸತತ 64 ವರ್ಷ ರಮಾ ತ್ರಿವಿಕ್ರಮ ದೇವರ ರಥೋತ್ಸವ ಜರುಗಿಸಿದ್ದು ವಿಶೇಷವಾಗಿದೆ. 36 ನೇ ಯತಿಗಳಾದ ಸೋದೆ ವಾದಿರಾಜ ಮಠದ ಶ್ರೀ ವಿಶ್ವವಲ್ಲಭ ತೀರ್ಥರು ಪ್ರಸಕ್ತ ಪೀಠಾಧಿಪತಿಗಳಾಗಿ ದೇವರ ಪೂಜೆ ಸಲ್ಲಿಸುತ್ತಾ, ಉಡುಪಿಯಲ್ಲಿ ಚಿಕ್ಕ ವಯಸ್ಸಿನಲ್ಲೇ ಅವರ ಮೊದಲ ಪರ್ಯಾಯ ಪೂರೈಸಿ ಬೃಹತ್ ಬ್ರಹ್ಮರಥ ಶ್ರೀಕೃಷ್ಣನಿಗೆ ಸಮರ್ಪಿಸಿ ಸೋದೆಯಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಮಹಾನುಭಾವರು. ಶ್ರೀ ವಾದಿರಾಜರ ಆರಾಧನೆ ಪ್ರತಿ ವರ್ಷ ಫಾಲ್ಗುಣ ಕೃಷ್ಣ ತದಿಗೆ ಸೋದೆಯಲ್ಲಿ ಇನ್ನಿತರ ಸ್ಥಳಗಳಲ್ಲಿ ವಿಜೃಂಭಣೆಯಿಂದ ಜರುಗುತ್ತದೆ.

ತಪೋವಿದ್ಯಾ ವಿರಕ್ತ್ಯಾದಿ ಸದ್ಗುಣೋ ಘಾಕರಾನಹಂ
ವಾದಿರಾಜ ಗುರುನ್ ವಂದೇ ಹಯಗ್ರೀವ ದಯಾಶ್ರಯಾನ್॥





# ಶುಂಠಿಯಿಂದ ಆರೋಗ್ಯ ದೃಢಕಾಯ

ತೆಲುಗು ಮೂಲ : ಡಾ॥ ಮಧುಸೂದನಶರ್ಮ

ಅನುವಾದ : ಡಿ.ಎಸ್. ಬದ್ರಿನಾಥ್

ಪ್ರಕೃತಿ ಮಾತೆಯು ಪ್ರಸಾದಿಸಿದ ಶ್ರೇಷ್ಠವಾದ ಆಹಾರೌಷಧಿ ಶುಂಠಿ. ಸಂಸ್ಕೃತದಲ್ಲಿ ಇದನ್ನು ಆರ್ದ್ರಕ ಎಂದು ಕರೆಯುತ್ತಾರೆ. ಜಿಂಜಿಬರೇಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಇದರ ಶಾಸ್ತ್ರೀಯನಾಮ "ಜಿಂಜಿಬರ್ ಅಫಿಷನಾಲಿಸ್". ಶುಂಠಿಯನ್ನು ಔಷಧವನ್ನಾಗಿ ಯಾವ ಯಾವ ಅನಾರೋಗ್ಯ ಸಮಸ್ಯೆಗಳಿಗೆ ಹೇಗೆ ಬಳಸಿಕೊಳ್ಳಬೇಕೆಂದು ಪ್ರಸ್ತುತ ತಿಳಿಯೋಣ.

**ಜೀರ್ಣಾಂಗಗಳು ಸಕ್ರಮವಾಗಿ ಕೆಲಸಮಾಡಲು :**

ಪ್ರತಿನಿತ್ಯ ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ 100 ಮಿ.ಲೀ. ಬಿಸಿ ನೀರಿನಲ್ಲಿ 5 ಮಿ.ಲಿ ಶುಂಠಿಯ ರಸ 5 ಮಿ.ಲಿ. ನಿಂಬೆರಸ ಒಂದೆರಡು ಟೀಸ್ಪೂನ್ ಸಕ್ಕರೆ ಕಲಿಸಿ ಕರಗಿಸಿ ಸೇವಿಸುತ್ತಿದ್ದರೆ ಜೀರ್ಣಕ್ರಿಯೆ ಸಕ್ರಮವಾಗಿ ಜರಗುವುದಲ್ಲದೇ ಪೈತ್ಯ, ತಲೆತಿರುಗುವುದು,ಗರ್ಭಿಣಿಯರಿಗೆ ವಾಂತಿ ಕಡಿಮೆಯಾಗುತ್ತವೆ. ಅಷ್ಟೆ ಅಲ್ಲದೇ ಕ್ಯಾನ್ಸರ್ ವ್ಯಾಧಿಗೆ ಬಳಸುವ ಕೃತಕ ಆಧುನಿಕ ಔಷಧಗಳಿಂದ ಉಂಟಾಗುವ ದುಷ್ಪರಿಣಾಮಗಳಾದ ವಿಕಾರಗಳು, ವಾಂತಿ, ಹಸಿವೆಯಾಗದಿರುವುದು ಅನ್ನದ ಅಸೂಯೆ, ಅನ್ನವನ್ನು ದ್ವೇಷಿಸುವಂತಹವು ಕಡಿಮೆಯಾಗುತ್ತದೆ.

**ಮುಟ್ಟಿನ ನೋವು ನಿವಾರಣೆಗೆ:**

200 ಮಿ.ಲೀ. ನೀರಿನಲ್ಲಿ 2-5 ಗ್ರಾಂ ಕುಟ್ಟಿದ ಶುಂಠಿ ತುಂಡುಗಳನ್ನು ಹಾಕಿ ಸ್ವಲ್ಪ ಹೊತ್ತು ಮರಳಿಸಿ, ಕೆಳಗಿಳಿಸಿ, ಉಗುರು ಬೆಚ್ಚಗಿರುವಾಗಲೇ ಶೋಧಿಸಿ ಸಕ್ಕರೆಯನ್ನು ಸೇರಿಸಿ ಕುಡಿಯಬೇಕು. ಹೀಗೆ ದಿನವೂ 2-3 ಬಾರಿ ಹೇಳಿ ದಂತೆ ಮುಟ್ಟಿನ ನಾಲ್ಕು ದಿನಗಳು ಮಾಡಬೇಕು.

**ಗಂಟಲು ನೋವಿಗೆ:**

ದಿನವೂ 2 ಬಾರಿ ಒಂದೆರಡು ಗ್ರಾಂ ಶುಂಠಿ, ಒಂದು ಲವಂಗ, ಚಿಟಿಕೆ ಉಪ್ಪು ಕಲಿಸಿ ಮೆತ್ತಗೆ ನಾದಿ ಚಪ್ಪರಿಸಿ ತಿಂದು ನುಂಗಬೇಕು. ಬೋಧನೆ ವೃತ್ತಿಯಲ್ಲಿರುವ ಶಿಕ್ಷಕರು,ಅಧ್ಯಾಪಕರು,ಗಾಯಕ-ಗಾಯಕಿಯರು, ಹರಿಕಥಾ ಪ್ರಸಂಗಗಳನ್ನು ಮಾಡುವ ಪ್ರವಚನಕಾರರು ಮುಂತಾದವರಿಗೆ ಬರುವ ಗಂಟಲು ಊತಕ್ಕೆ ಈ ಔಷಧಿಯ ಸೇವನೆಯ ಮೂಲಕ ಪರಿಹಾರ ಉಂಟಾಗುತ್ತದೆ.

**ಗ್ಯಾಸ್ಟ್ರಿಕ್ ಟ್ರಬಲ್‌ಗೆ:**

ಇಂಗಿನ ತುಂಡುಗಳನ್ನು ಸ್ವಲ್ಪ ತುಪ್ಪ ಹಾಕಿ ಹುರಿದು ಮಾಡಿದ ಪುಡಿ, 25ಗ್ರಾಂ, ಅಜ್ವಾನವನ್ನು ಪುಡಿಮಾಡಿದ ಚೂರ್ಣ 25ಗ್ರಾಂ, ಉಪ್ಪು 25 ಗ್ರಾಂ, ಏಲಕ್ಕಿ ಪುಡಿ 25 ಗ್ರಾಂ, ಶುಂಠಿಯ ರಸ 50 ಗ್ರಾಂ,ತೆಗೆದುಕೊಂಡು ಇವೆಲ್ಲವನ್ನು ಕಲಿಸಿ, ಚೆನ್ನಾಗಿ ನಾದಿ,ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ,ಕುಟ್ಟಿ,ಸಂಗ್ರಹಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ 2 ಗ್ರಾಂ ಪುಡಿಯನ್ನು 100 ಮಿ.ಲಿ.ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಹೊಟ್ಟೆಯಲ್ಲಿ ಗ್ಯಾಸ್ ಸೇರುವುದು, ಹೊಟ್ಟೆಯುಬ್ಬರ, ಹೊಟ್ಟೆ ಹಿಂಡುವ ನೋವು, ತೇಗುಗಳು ಇಂತಹ ಸಮಸ್ಯೆ, ಗ್ಯಾಸ್ಟ್ರಿಕ್ ಟ್ರಬಲ್ ಲಕ್ಷಣಗಳು ಕುಗ್ಗಿ. ಕರುಳಿನ ಕದಲಿಕೆಗಳು ಕ್ರಮಬದ್ಧವಾಗಿ ಜೀರ್ಣಪ್ರಕ್ರಿಯೆ ಉಂಟಾಗುತ್ತದೆ.

**ವಿವಿಧ ಬಗೆಯ ಜ್ವರಗಳಿಗೆ :**

ದಿನವೂ 3 ಬಾರಿ , ಬಾರಿಯೊಂದಕ್ಕೆ 10 ಮಿ.ಲೀ ಶುಂಠಿ ರಸ, 10 ಮಿ.ಲಿ. ತುಳಸಿರಸ, 5 ಮಿ.ಲೀ ಜೇನು ಕಲಿಸಿ ತೆಗೆದುಕೊಳ್ಳುತ್ತಿದ್ದರೆ ಮಲೇರಿಯಾ, ಟೈಫಾಯಿಡ್,ಡೆಂಗ್ಯೂ, ಚಿಕನ್ ಗುನ್ಯಾದಂತಹ ವಿವಿಧ ಬಗೆಯ ಜ್ವರಗಳು ಶೀಘ್ರವಾಗಿ ಶಮನಗೊಳ್ಳುತ್ತದೆ.

**ಆಯಾಸದ ಕಾಯಿಲೆಯ ತೀವ್ರತೆ ತಗ್ಗಲು:**

ದಿನವೂ ಎರಡು ಬಾರಿ, ಬಾರಿಯೊಂದಕ್ಕೆ 100 ಮಿ.ಲೀ. ತೆಳುವಾದ ಬಿಸಿ ಹಾಲಿನಲ್ಲಿ 10 ಮಿ.ಲೀ.ಶುಂಠಿರಸ, 3-4 ಚಿಟಿಕೆ ಮೆಣಸಿನ ಪುಡಿ ಕಲಿಸಿ ಸೇವಿಸುತ್ತಿದ್ದರೆ ಈ ಆಯಾಸದ ಬಾಧೆಯ ತೀವ್ರತೆ ತಗ್ಗುತ್ತದೆ.

**ಸಾಧಾರಣ ಚರ್ಮರೋಗಗಳಿಗೆ :**

ದಿನವೂ ಬೆಳಗ್ಗೆ, ಸಾಯಂಕಾಲ ಬಾರಿಗೆ 1,2 ಗ್ರಾಂ ನಷ್ಟು ಶುಂಠಿ, ಬೆಲ್ಲ ತೆಗೆದುಕೊಂಡು ಮೆತ್ತಗೆ ನಾದಿ ಸೇವಿಸುತ್ತಿದ್ದರೆ ಕಜ್ಜಿ, ದದ್ದು, ತುರಿಗೆಯಂತಹ ಚರ್ಮವ್ಯಾಧಿಗಳು ಕಡಿಮೆಯಾಗುತ್ತವೆ. ಅಷ್ಟೇ ಅಲ್ಲದೇ,ಅಂಗೈ, ಅಂಗಾಲುಗಳಲ್ಲಿ ಹೊಟ್ಟು ಬರುವುದು ಸಹ ತಗುತ್ತದೆ.



**ಕಾಲಿನ ಊತ ಕಡಿಮೆಯಾಗಲು :**

200 ಗ್ರಾಂ ಕಾರ್ಚಿಕಾಯಿ, 4-5 ಬಾರಿ ಶೋಧಿಸಿದ ತಕ್ಕಷ್ಟು ಗೋಮೂತ್ರ ಕಲಿಸಿ ಬಿಸಿಲಿನಲ್ಲಿ ಒಣಗಿಸಿ ನಂತರ ತಕ್ಕಷ್ಟು ಶುಂಠಿ ರಸವನ್ನು ಸೇರಿಸಿ ಮತ್ತೊಮ್ಮೆ ಚೆನ್ನಾಗಿ ಒಣಗಿಸಿ,ಕುಟ್ಟಿ ಚೂರ್ಣ ಮಾಡಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಒಂದೆರಡು ಗ್ರಾಂ ಪುಡಿಯನ್ನು 100 ಮಿ.ಲೀ ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

**ಕೀಲು ನೋವು ನಿವಾರಣೆಗೆ:**

100 ಮಿ.ಲೀ ಶುಂಠಿಯ ರಸವನ್ನು 200 ಮಿ.ಲೀ. ಎಳ್ಳೆಣ್ಣೆಯಲ್ಲಿ ಕಲಿಸಿ ಸಣ್ಣ ನುರಿಯಲ್ಲಿ ನೀರು ಇಂಗುವ ವರೆಗೂ ಎಣ್ಣೆ ಮಾತ್ರವೇ ಉಳಿಯುವವರೆಗೆ ಅಂದರೆ ನೊರೆ ಬರುವವರೆಗೆ ಮರಳಿಸಿ ಕೆಳಗಿಳಿಸಿ, ಅದರಲ್ಲಿ 20 ಗ್ರಾಂ ಆರತಿ ಕರ್ಪೂರ ಪುಡಿ ಕಲಿಸಿ ಮುಚ್ಚಿಟ್ಟು ಬಿಸಿಯಾರಿದ ಬಳಿಕ ಶೋಧಿಸಿ,ಸಂಗ್ರಹಿಸಿಟ್ಟುಕೊಂಡು ದಿನಕ್ಕೆರಡು ಬಾರಿ ಹಿತವಾಗುವವರೆಗೂ ಮಸಾಜು ಮಾಡುತ್ತಿದ್ದರೆ. ಕೀಲು ನೋವಿನ ಜೊತೆಗೆ ಸೆಳೆತ, ಸೊಂಟ ನೋವು, ಭುಜದ ನೋವು, ತೊಡೆನೋವು ಇಂತಹ ವಿವಿಧ ಬಗೆಯ ನೋವುಗಳು ತಗ್ಗುತ್ತವೆ.

**ಪಾರ್ಶ್ವ ತಲೆನೋವಿಗೆ:**

ದಿನವೂ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 50 ಮಿ.ಲಿ. ಉಗುರು ಬೆಚ್ಚಗಿನ ನೀರಿನಲ್ಲಿ 10 ಮಿ.ಲೀ.ಶುಂಠಿ ರಸ, ಅರ್ಧ ಟೀಸ್ಪೂನ್ ಬೆಲ್ಲದ ಪುಡಿ ಕಲಿಸಿ, ಕರಗಿಸಿ ಕುಡಿಯುತ್ತಿರಬೇಕು.

**ಬಾಯಿ ರುಚಿಹೀನತೆ ತಗಿಸಲು :**

250 ಗ್ರಾಂ ಶುಂಠಿಯನ್ನು ಚೆನ್ನಾಗಿ ತೊಳೆದು ಶುದ್ಧಿ ಮಾಡಿ ಚಿಕ್ಕದಾದ ತುಂಡುಗಳಾಗಿ ಮಾಡಿ ಒಂದು ಪ್ರಾತೆಯಲ್ಲಿ ತೆಗೆದುಕೊಂಡು 25 ಗ್ರಾಂ ಸೈಂಧವ ಲವಣದ ಚೂರ್ಣ,ತಕ್ಕಷ್ಟು ನಿಂಬೆರಸ ಕಲಿಸಿ ಬಿಸಿಲಿನಲ್ಲಿ ಒಣಗಿಸಿ ಸಂಗ್ರಹಿಸಿಟ್ಟುಕೊಂಡು ದಿನವೂ ಎರಡು ಬಾರಿ,ಬಾರಿಯೊಂದಕ್ಕೆ ಒಂದು ಗ್ರಾಂನಂತೆ ಅಗೆದು ತಿನ್ನಬೇಕು.

## STATEMENT ABOUT OWNERSHIP AND OTHER PARTICULARS ABOUT

## SAPTHAGIRI

**(MONTHLY)**

**FORM IV**

*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Printer's Name | : | Sri P. Ramaraju, M.A. |
| Whether citizen of India | : | Yes |
| Address | : | S.O.,T.T.D.Press Compound, K.T.Road, Tirupati. |
| 4. Publisher's Name | : | **Dr. K. Radha Ramana**, M.A.,M.Phil., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 5. Editor's Name | : | **Dr. V.G.Chokkalingam**, M.A., Ph.D. |
| Whether citizen of India | : | Yes |
| Address | : | Chief Editor Office, T.T.D.Press Compound ,K.T.Road, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Tirumala Tirupati Devasthanams |

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 28-2-2022

**(Sd.) Dr. K. Radha Ramana**
*Signature of the Publisher*

# ಹೋಳಿ.. ಬಣ್ಣದೋಕುಳಿ...



– ಹನುಮಂತ.ಮ.ದೇಶಕುಲಕರ್ಣಿ
9480364915

ಫಾಲ್ಗುಣ ಮಾಸದ ಶುದ್ಧ ಹುಣ್ಣಿಮೆ ಅಂದರೆ ಚಾಂದ್ರಮಾನ ಪಂಚಾಂಗದ ಪ್ರಕಾರ ವರ್ಷದ ಕೊನೆಯ ಹುಣ್ಣಿಮೆ. ಇದನ್ನು ಹೋಳಿ ಹುಣ್ಣಿಮೆ ಎಂದು ಕರೆಯಲಾಗುತ್ತದೆ. ಈ ಹಬ್ಬವು ವಸಂತ ಮಾಸವನ್ನು ಸ್ವಾಗತಿಸುವುದಷ್ಟೇ ಅಲ್ಲ ಏಕತೆಯನ್ನು ಬಿಂಬಿಸಿ ಹೊಸದನ್ನು ಸ್ವಾಗತಿಸುವ ಹಬ್ಬ.ಹೋಳಿಯು ಬಣ್ಣಗಳ ಹಬ್ಬ.ಯುವಕರಿಗೆ ಬಣ್ಣ ಆಡುವುದು, ಕುಣಿದಾಡುತ್ತಾ ಬೇರೆಯವರನ್ನು ಬಣ್ಣದಲ್ಲಿ ನೆನಸಿ ತಾವು ಬಣ್ಣ ಹಾಕಿಸಿಕೊಳ್ಳುವುದು ತುಂಬಾ ಇಷ್ಟ ನೈಸರ್ಗಿಕ ವಾದ ಬಣ್ಣಗಳು ಬಳಸದಿದ್ದರೆ ತ್ವಚೆಗೆ ಹಾನಿಯಾಗುತ್ತದೆ.

ಬಣ್ಣ ಬಣ್ಣಗಳ ಎರಚಾಟ, ಕಾಮದಹನ, ಹೋಲಿಕಾ ದಹನ ಈ ಆಚರಣೆಗಳಲ್ಲಿದೆ. ಎಲ್ಲರೂ ಒಟ್ಟುಗೂಡಿ ದೀಪೋತ್ಸವವನ್ನು ಮಾಡಿ ಆ ದೀಪಗಳ ಮುಂದೆ ತಮ್ಮ ತಪ್ಪುಗಳನ್ನು ಕ್ಷಮಿಸುವಂತೆ ಭಗವಂತನಲ್ಲಿ ಪ್ರಾರ್ಥಿಸುವರು, ಈ ಹಬ್ಬವನ್ನು ಇಡೀ ಭಾರತದಲ್ಲಿ ಆಚರಿಸುತ್ತಾರೆ.

### ಪುರಾಣಗಳಲ್ಲಿ

ನಾರದ ಪುರಾಣದಲ್ಲಿ ಬರುವ ಕಥೆಯ ಪ್ರಕಾರ ಹಿರಣ್ಯಕಶಿಪು ಎಂಬ ಅತ್ಯಂತ ಬಲಶಾಲಿಯಾದ ರಾಕ್ಷಸನು ತನ್ನ ರಾಜ್ಯದಲ್ಲಿ ದೇವರ ಪೂಜೆಯನ್ನು ನಿಷೇಧಿಸಿ ಎಲ್ಲಾ ಪ್ರಜೆಗಳೂ ತನ್ನನ್ನೇ ಆರಾಧಿಸಬೇಕೆಂದು ಕಟ್ಟಪ್ಪಣೆ ಮಾಡುತ್ತಾನೆ.ಆದರೆ ಅದಕ್ಕೆ ವಿರುದ್ಧವಾಗಿ ಅವನ ಮಗ ಪ್ರಹ್ಲಾದನು, ಮಹಾವಿಷ್ಣುವಿನ ಪರಮ ಭಕ್ತ.ಪುಟ್ಟ ಬಾಲಕ ಪ್ರಹ್ಲಾದ ವಿಷ್ಣುವಿನ ಆರಾಧನೆಯನ್ನು ನಿಲ್ಲಿಸಲು ಸಾಧ್ಯವಾಗದಿದ್ದಾಗ ಮಗನನ್ನು ಕೊಲ್ಲಲು ಹಲವಾರು ರೀತಿ ಪ್ರಯತ್ನಿಸಿ ಹಿರಣ್ಯಕಶಿಪು ಅಲ್ಲಿಯೂ ವಿಫಲನಾಗುವನು. ನಂತರ ಹಿರಣ್ಯಕಶಿಪು ತನ್ನ ತಂಗಿ ಹೋಲಿಕಾಳ ನೆರವು ತೆಗೆದುಕೊಳ್ಳುವನು. ಅವಳು ಬೆಂಕಿಯು ಸುಡದೇ ಇರುವ ವರವನ್ನು ಪಡೆದಿರುತ್ತಾಳೆ.

ಆದರೆ ಪ್ರಹ್ಲಾದನನ್ನು ಅವಳ ತೊಡೆಯ ಮೇಲೆ ಕೂರಿಸಿದಾಗ ಬೆಂಕಿಯು ಅವಳನ್ನೇ ಸುಡುತ್ತದೆ. ಪಾಪ ಕೃತ್ಯ ಎಸಗಿದ ಅವಳೇ ಸುಟ್ಟು ಭಸ್ಮವಾಗುತ್ತಾಳೆ. ಪ್ರಹ್ಲಾದನನ್ನು ಬೆಂಕಿಯು ಸುಡುವುದಿಲ್ಲ. ಹೀಗೆ ಹೋಲಿಕಾ ದುಷ್ಟ ಶಿಕ್ಷೆ ಶಿಕ್ಷ ರಕ್ಷಣೆಯ ಸಾಂಕೇತಿಕವಾಗಿ ಮುಂಬರುವ ಸುದಿನಗಳ ಸ್ವಾಗತಕ್ಕೆ ಬಣ್ಣಗಳ ಓಕುಳಿಯಾಡುವ ಪದ್ಧತಿ ರೂಢಿಗೆ ಬಂದಿದೆ.

ಶಿವಪುರಾಣದ ಪ್ರಕಾರ ತಾರಕಾಸುರನಿಂದ ರಾಕ್ಷಸನು ಘೋರ ತಪಸ್ಸನ್ನು ಮಾಡಿ ಬ್ರಹ್ಮ ದೇವನಲ್ಲಿ ತನಗೆ ಸಾವೇ ಬರಬಾರದು ಎಂದು ವರವನ್ನು ಕೇಳುವನು. ಬ್ರಹ್ಮನು ಆ ವರವನ್ನು ನಿರಾಕರಿಸಿದಾಗ ಶಿವನ ಏಳು ದಿನಗಳ ಮಗುವಿನಿಂದ ತನಗೆ ಸಾವು ಬರಲಿ ಎಂಬ ವರವನ್ನು ಪಡೆದನು.

ಗೋಪಿಕೆಯರೊಂದಿಗೆ ತುಂಟ ಕೃಷ್ಣ ಚೆಲ್ಲಾಟಗಳು ನೆನಪಾಗುತ್ತವೆ. ಮಥುರಾ ಮತ್ತು ಬೃಂದಾವನಗಳಲ್ಲಿನ ಹೋಳಿ ಹಬ್ಬವು ಜಗತ್ಪ್ರಸಿದ್ಧವಾಗಿದೆ.



ನಂತರ ತಾರಕಾಸುರನಿಂದ ದೇವತೆಗಳಿಗೆ ಉಪಟಳ ಹೆಚ್ಚಾಯಿತು. ಅದು ಮಿತಿ ಮೀರಿದಾಗ ದೇವತೆಗಳು ಶಿವನಲ್ಲಿ ಮೊರೆ ಹೋಗುವರು. ಆದರೆ ಶಿವನು ಸಮಾಧಿ ಸ್ಥಿತಿಯಲ್ಲಿದ್ದನು. ಆಗ ಶಿವನ ಧ್ಯಾನವನ್ನು ಭಂಗಪಡಿಸಿ ಪಾರ್ವತಿಯಲ್ಲಿ ಮೋಹಿತನನ್ನಾಗಿ ಮಾಡಲು ರತಿ ಮನ್ಮಥರನ್ನು ದೇವತೆಗಳು ಒಪ್ಪಿಸುವರು.

ಮನ್ಮಥನು ಐದು ಪುಷ್ಪ ಬಾಣಗಳನ್ನು ಪ್ರಯೋಗಿಸುತ್ತಾನೆ. ರತಿ ಮನ್ಮಥರು ಶಿವನ ಮುಂದೆ ನೃತ್ಯವನ್ನು ಮಾಡಿದರು ಶಿವನ ಧ್ಯಾನಕ್ಕೆ ಭಂಗ ಉಂಟಾದಾಗ ಅವನು ಕೆರಳಿ ಮೂರನೇ ಚಕ್ಷುವನ್ನು ತೆರೆದನು. ಈಶ್ವರನ ಕ್ರೋಧಾಗ್ನಿಗೆ ಕಾಮನು ಸುಟ್ಟು ಭಸ್ಮವಾಗುತ್ತಾನೆ. ಕಾಮ ನರಸಿ ರತಿದೇವಿಯು ಪರಿಪರಿಯಾಗಿ ಶಿವನಲ್ಲಿ ಪತಿಭಿಕ್ಷೆ ಯಾಚಿಸಲು ಕಾಮನು ಅನಂಗನಾಗಿಯೇ ಇರುತ್ತಾನೆ. ಆದರೆ ಪತ್ನಿಗೆ ಮಾತ್ರ ಶರೀರಿಯಾಗಿ ಕಾಣಿಸುತ್ತಾನೆ ಎಂದು ಶಿವನು ಅಭಯ ನೀಡಿದನೆಂಬುದು ಪುರಾಣ ಕಥನ.

ಇನ್ನೊಂದು ಕಥೆ ಪ್ರಕಾರ ರಘುರಾಜನ ರಾಜ್ಯದಲ್ಲಿ ಡೊಂಡಾ ಹೆಸರಿನ ರಾಕ್ಷಸಿ ಮಕ್ಕಳನ್ನು ಹೆದರಿಸುತ್ತಿದ್ದಳು ಆಗ ರಾಜ ಮುಂದೆ ಬಂದು ಪುರೋಹಿತರ ಸಲಹೆ ಕೇಳಲಾಗಿ ಅವಳ ಸಾವು ಅಸ್ತ್ರ ಶಸ್ತ್ರ ಅಥವಾ ಮಳೆ, ಬಿಸಿಲು, ಚಳಿಯಿಂದ ಸಾವು ಇಲ್ಲ ಮಕ್ಕಳಿಂದ ಅವಳಿಗೆ ಸಾವು ಇದೆ. ಈ ರಾಜ್ಯದಲ್ಲಿ ಹೋಳಿ ಹಬ್ಬ ವಿಶಿಷ್ಟವಾಗಿ ಆಚರಿಸುತ್ತಾರೆ.

ಈ ಹಬ್ಬಕ್ಕೆ ಅವರು ಧೂಂಡ ಎನ್ನುತ್ತಾರೆ. ಕಲ್ಕತ್ತದಲ್ಲಿ ದೋಲ್ ಪೌರ್ಣಮಿ ಎನ್ನುತ್ತಾರೆ. ಹರ್ಯಾನದಲ್ಲಿ ದುಲಂದಿ ಹಬ್ಬ ಎಂದು ಆಚರಿಸುತ್ತಾರೆ. ಈ ಹಬ್ಬ ಫಾಲ್ಗುಣ ಮಾಸದ ಪುಬ್ಬಾ ನಕ್ಷತ್ರದ ದಿನ ಆಚರಿಸುತ್ತಾರೆ. ಹಲವು ಕಡೆ ಈ ಹಬ್ಬವನ್ನು ಐದು ದಿನ ಆಚರಿಸುತ್ತಾರೆ.

ಈ ರಂಗಿನ ಹಬ್ಬಕ್ಕೆ ಪೂತನಿಯ ಸಂಹಾರದ ಕಥೆಯೂ ಸೇರಿದೆ. ಶ್ರೀಕೃಷ್ಣ ಮಗುವಾಗಿದ್ದಾಗ ಅವನ ಸೋದರಮಾವ ಕಂಸರಾಜನು ಪೂತನಿ ಎಂಬ ರಾಕ್ಷಸಿಯನ್ನು ಶ್ರೀ ಕೃಷ್ಣನನ್ನು ಕೊಲ್ಲಲು ಕಳಿಸುವನು. ಬಾಲಕೃಷ್ಣನು ಪೂತನಿಯ ಎದೆ ಹಾಲಿನೊಂದಿಗೆ ಪ್ರಾಣವನ್ನೂ ಹೀರಿ ಅವಳ ಸಂಹಾರ ಮಾಡುವನು. ಆದರಿಂದ ಶ್ರೀಕೃಷ್ಣನ ಮೈ ನೀಲಿ ಬಣ್ಣವಾಯಿತು. ಆದರೂ ರಾಧೆಯು ಕೃಷ್ಣನನ್ನು ಅನನ್ಯವಾಗಿ ಪ್ರೀತಿಸುವಳು. ಅವರಿಬ್ಬರ ಪ್ರೀತಿಯ ಪ್ರತೀಕವಾಗಿ ಹೋಲಿ ಆಚರಣೆ ಮಾಡಲಾಗುತ್ತದೆ.

### ರಂಗಿನಾಟ

ಶ್ರೀಕೃಷ್ಣನು ಗೋಪಿಕೆಯರಿಗೆ ಪಿಚಕಾರಿ ಮೂಲಕ ಓಕುಳಿ ಹಾರಿಸುತ್ತಾ, ರಂಗು ರಂಗಾಗಿಸುತ್ತಿದ್ದ ಆತನ ರಂಗಿನೆರಚಾಟಕ್ಕೆ ತುತ್ತಾಗಲು ಹವಣಿಸುತ್ತಿದ್ದ ಗೋಪಿಕೆಯರ ದೃಶ್ಯಗಳು ಕಣ್ಮುಂದೆ ಸುಳಿಯುತ್ತದೆ. 'ಬೇಡ ಕೃಷ್ಣ ರಂಗಿನಾಟ,ಸೀರೆ ನೆನೆವುದು' ಎಂಬ ಹಾಡು ನೆನಪಿಗೆ ಬರುತ್ತದೆ. ಗೋಪಿಕೆಯರೊಂದಿಗೆ ತುಂಟ ಕೃಷ್ಣನ ಚೆಲ್ಲಾಟಗಳು ನೆನಪಾಗುತ್ತವೆ. ಮಥುರಾ ಮತ್ತು ಬೃಂದಾವನಗಳಲ್ಲಿನ ಹೋಳಿ ಹಬ್ಬವು ಜಗತ್ಪ್ರಸಿದ್ಧವಾಗಿದೆ.ಈ ಹಬ್ಬವು ಕೆಟ್ಟದ್ದನ್ನು ಸುಟ್ಟು ಬಿಡುವುದು, ಕಾಮ, ಕ್ರೋಧಾದಿ ಅರಿಷಡ್ವರ್ಗಗಳನ್ನು ಅಗ್ನಿಕುಂಡದಲ್ಲಿ ಸುಟ್ಟು,ಸದಾಚಾರವನ್ನು ರೂಢಿಸಿಕೊಳ್ಳುವುದು, ಅಸುರೀ ಶಕ್ತಿಗಳ ನಿರ್ನಾಮದ ದ್ಯೋತಕವಾಗಿ ಹೋಳಿಕಾ ಅಂದರೆ ಉತ್ಸವಾಗ್ನಿ ಹಾಕುವ ಪದ್ಧತಿ ಉತ್ತರ ಭಾರತದಲ್ಲಿ ಹೆಚ್ಚಾಗಿ ಆಚರಣೆಯಲ್ಲಿದೆ.




# ಧರೆಯ ಕಾಮಧೇನು ಕಲ್ಪವೃಕ್ಷ ಶ್ರೀಗುರುರಾಘವೇಂದ್ರ

- ಪ್ರಿಯಕೃಷ್ಣ

ಕಲಿಯುಗದ ಕಾಮಧೇನು ಕಲ್ಪವೃಕ್ಷವಾಗಿ ನೊಂದು ಬೆಂದು ಬರುವಂತಹ ಬರುವ ಭಕ್ತರ ಕರುಣಿ, ಶ್ರೀರಾಘವೇಂದ್ರ, ಸ್ವಾಮಿಗಳು (೧೬೭೧-೧೬೭೧) ಮಧ್ವಮತದ ದ್ವೈತ ಸಿದ್ಧಾಂತ ವನ್ನು ಪ್ರತಿಪಾದಿಸಿದ್ದಾರೆ. ಶ್ರೀಪ್ರಹ್ಲಾದ ರಾಜರಾಗಿ ಮೂರನೇ ಅವತಾರ.ಶ್ರೀವ್ಯಾಸರಾಯರಾಗಿ ಎರಡನೆಯ ಅವತಾರ. ಮುಂದೆ ಕಲಿಯುಗದಲ್ಲಿ ಶ್ರೀಗುರುರಾಘವೇಂದ್ರ ಸ್ವಾಮಿಗಳಾಗಿ ಧರೆಯಲ್ಲಿ ಹುಟ್ಟಿ ಬಂದಿದ್ದಾರೆ.ಭಕ್ತರು ರಾಯರನ್ನು ಗುರು ರಾಯರು, ಗುರುರಾಜರು ಎಂದು ಭಕ್ತಿಯಿಂದ ಕರೆಯುತ್ತಾರೆ.

ಇವರು ಸಶರೀರವಾಗಿ ಬೃಂದಾವನಸ್ಥರಾಗಿದ್ದಾರೆ. ಆಂಧ್ರ ಪ್ರದೇಶದ ತುಂಗಭದ್ರಾ ನದಿ ತಟದಲ್ಲಿರುವ ಮಂತ್ರಾಲಯದಲ್ಲಿದೆ. ಪ್ರತಿ ವರ್ಷ ಶ್ರಾವಣ ಕೃಷ್ಣ ಪಕ್ಷ ಪಾಡ್ಯದಿಂದ ಶ್ರಾವಣ ಕೃಷ್ಣ ಪಕ್ಷ ತದಿಗೆವರೆಗೂ ಭವ್ಯ ಆರಾಧನೆ ನಡೆಯುತ್ತದೆ.

ಪೂರ್ವಾಶ್ರಮದ ಹೆಸರು ವೇಂಕಟನಾಥ. ಇವರ ತಂದೆಯ ಹೆಸರು ತಿಮ್ಮಣ್ಣ ಭಟ್ಟ. ತಾಯಿಯ ಹೆಸರು ಗೋಪಿ ಕಾಂಬ.ತಿಮ್ಮಣ್ಣ ಭಟ್ಟರಿಗೆ ಮೂರು ಜನ ಮಕ್ಕಳು. ಗುರುರಾಜ ಮತ್ತು ವೇಂಕಟಾಂಬ ಮತ್ತು ವೇಂಕಟನಾಥ ತಮಿಳುನಾಡಿನ ಭುವನಗಿರಿ ಎಂಬಲ್ಲಿ ವೇಂಕಟನಾಥನ ಜನನವಾಯಿತು. ಬಾಲಕ ವೇಂಕಟನಾಥ ಕುಶಾಗ್ರಮತಿ ಮತ್ತು ಓರಿಗೆಯ ವರ ಕ್ಕಿಂತ ಹೆಚ್ಚಿನ ಜ್ಞಾನ ಗಾಂಭಿರ್ಯ.ವೇಂಕಟನಾಥನು ಚಿಕ್ಕ ವಯಸ್ಸಿನಲ್ಲಿದ್ದಾಗಲೇ ತಂದೆ ತೀರಿ ಹೋದರು. ಸಂಸಾರದ ಜವಾಬ್ದಾರಿ ಅಣ್ಣ ಗುರುರಾಜನ ಮೇಲೆ ಬಿತ್ತು. ವೇಂಕಟನಾಥನ ವಿದ್ಯಾಭ್ಯಾಸ ಸೋದರಮಾವನಾದ ಮಧುರೈನ ಲಕ್ಷ್ಮಿ ನರ ಸಿಂಹಾಚಾರ್ಯರಲ್ಲಿ ನಡೆಯಿತು.ಇವರು ಕಲಿಯುತ್ತಿರು ವಾಗಲೇ ಶ್ರೀಮನ್ ನ್ಯಾಯ ಸುಧಾಕ್ಕೆ "ಪರಿಮಳಾ" ಟಿಪ್ಪಣಿ ಬರೆದು "ಪರಿಮಳಾಚಾರ್ಯ ಎಂದು ಪ್ರಸಿದ್ಧಿ ಹೊಂದಿದರು.

ಸರಸ್ವತಿ ಎಂಬ ಕನ್ಯೆಯೊಡನೆ ವಿವಾಹವಾಯಿತು. ವಿವಾಹದ ನಂತರ ಇವರು ಕುಂಭಕೋಣಕ್ಕೆ ಬಂದು ಸುಧೀಂದ್ರ ತೀರ್ಥರಲ್ಲಿ ದ್ವೈತ ವೇದಾಂತ ಅಭ್ಯಸಿಸಿದರು. ಅಲ್ಲಿಯೇ ಮಕ್ಕಳಿಗೆ ಸಂಸ್ಕೃತ ಮತ್ತು ವೇದಗಳನ್ನು ಕಲಿಸುತ್ತಿದ್ದರು.

ಕೆಲವೊಮ್ಮೆ ತಮ್ಮ ಹೆಂಡತಿ ಮಕ್ಕಳೊಂದಿಗೆ ಉಪವಾಸ ಇರುವ ಪರಿಸ್ಥಿತಿ ಬರುತ್ತಿತ್ತು. ಆದರೂ ದೇವರಲ್ಲಿ ನಂಬಿಕೆ ಕಳೆದು ಕೊಳ್ಳುತ್ತಿದ್ದಿಲ್ಲ.ಆಚಲವಾದ ಭಕ್ತಿ ಶ್ರದ್ಧೆ ಇತ್ತು.ತಿಮ್ಮಣ್ಣ ಭಟ್ಟರ ಅಜ್ಜ ಕೃಷ್ಣಭಟ್ಟ. ಇವರು ವೀಣೆಯಲ್ಲಿ ಅಪಾರ ಪಾಂಡಿತ್ಯ ಪಡೆದಿದ್ದರು. ವಿಜಯನಗರದ ರಾಜನಾದ ಕೃಷ್ಣದೇವರಾಯ ನಿಗೆ ವೀಣೆ ಕಲಿಸಿದ ಗುರುಗಳು. ಮಕ್ಕಳ ಗುಣ ಅವರ ವಂಶ ದಿಂದ ಬರುವುದಂತೆ ನಿಜ ಮುತ್ತಜ್ಜನಿಂದ ಬಂದಂತಹ ವೇಂಕಟ ನಾಥರಿಗೆ ವೀಣಾ ವಿದ್ಯೆ ಬಳುವಳಿಯಾಗಿತ್ತು ಆದ್ದರಿಂದ ರಾಘ ವೇಂದ್ರ ಸ್ವಾಮಿಗಳು ವೀಣೆ ನುಡಿಸುತ್ತಿದ್ದರು. ಆದ್ದರಿಂದ ಇವರನ್ನು "ವೀಣಾ ವೈಣಿಕ" ಎಂದು ಕರೆಯುತ್ತಿದ್ದರು.

ಶ್ರೀ ಸುಧೀಂದ್ರ ತೀರ್ಥರು ತಮ್ಮ ಉತ್ತರಾಧಿಕಾರಿಯನ್ನು ಹುಡುಕುತ್ತಿರುವಾಗ, ಅವರ ಕನಸಿನಲ್ಲಿ ಭಗವಂತ ವೆಂಕಟ ನಾಥನನ್ನು ಸೂಚಿಸಿದರು. ಈ ವಿಷಯವನ್ನು ಶ್ರೀ ಸುಧೀಂದ್ರ ತೀರ್ಥರು ವೇಂಕಟನಾಥನಿಗೆ ತಿಳಿಸಿದಾಗ, ವೆಂಕಟನಾಥನು ಪತ್ನಿ ಮತ್ತು ಮಗನನ್ನು ಬಿಟ್ಟು ಸನ್ಯಾಸಿ ಆಗಲಾರೆ ಎಂದು



ತಿರಸ್ಕಾರ ಮಾಡಿದರು. ಆದರೆ ಭಗವಂತ ತನ್ನ ಆಟ ತೋರಿ ಸುತ್ತಾನೆ. ಮುಂದೆ ಸ್ವಲ್ಪ ದಿನಗಳಲ್ಲಿಯೇ ಸಾಕ್ಷಾತ್ ಸರಸ್ವತಿ ದೇವಿಯೇ ಸ್ವಪ್ನದಲ್ಲಿ ಬಂದು ಸನ್ಯಾಸಾಶ್ರಮ ಸ್ವೀಕರಿಸಲು ಆಜ್ಞೆ ನೀಡುತ್ತಾಳೆ.

ಇದರಿಂದ ಮನಸ್ಸು ಪರಿವರ್ತನೆಯಾಗಿ,ವೆಂಕಟನಾಥನು ಫಾಲ್ಗುಣ ಶುದ್ಧ ಬಿದಿಗೆಯಂದು ತಂಜಾವೂರಿನಲ್ಲಿ ತನ್ನ ಗುರುಗಳಾದ ಶ್ರೀಸುಧೀಂದ್ರತೀರ್ಥರ ಸಮ್ಮುಖದಲ್ಲಿ ಫಾಲ್ಗುಣ ಶುದ್ಧ ದ್ವಿತೀಯಾದಂದು ಸನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀರಾಘವೇಂದ್ರ ಸ್ವಾಮಿಗಳಾಗುತ್ತಾರೆ.

ಸನ್ಯಾಸಾಶ್ರಮ ಸುದ್ಧಿ ತಿಳಿಯುತ್ತಲೇ ಮನನೊಂದ ಪತ್ನಿ ಸರಸ್ವತಿಯು ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡು ಪಿಶಾಚಿಯಾಗಿ ಶ್ರೀರಾಘವೇಂದ್ರ ಸ್ವಾಮಿಗಳಿದ್ದಲ್ಲಿಗೆ ಬಂದು ತಮ್ಮ ಪೂರ್ವಾಶ್ರಮದ ಪತ್ನಿಯನ್ನು ಈ ಅವತಾರದಲ್ಲಿ ನೋಡಿ ಆಕೆಯ ಮೇಲೆ ತೀರ್ಥವನ್ನು ಪ್ರೋಕ್ಷಿಸಿ ಆಕೆಗೆ ಮೋಕ್ಷ ನೀಡುತ್ತಾರೆ.

ಎಲ್ಲ ವೇದ ಉಪನಿಷತ್ತುಗಳ ಖಂಡಾರ್ಥ ಮುಂತಾದ ಗೀತೆಗೆ ವಿವೃತ್ತಿ ,ಚಂದ್ರಿಕಾಕ್ಕೆ ಪ್ರಕಾಶ ಹೀಗೆ ಗ್ರಂಥಗಳು ಮತ್ತು ಸ್ತೋತ್ರಗಳನ್ನು ರಚಿಸಿದ್ದಾರೆ. ವೇಣುಗೋಪಾಲ ಅಂಕಿತದಿಂದ ಕನ್ನಡ ಪದ್ಯ ರಚಿಸಿರುತ್ತಾರೆ. ದಾಸ ಸಾಹಿತ್ಯದಲ್ಲಿ ಎಲ್ಲ ದಾಸರುಗಳಿಂದ ಸ್ತುತಿಸಿಕೊಂಡ ಮಹಾತ್ಮರು.''ಇಂದು ಎನಗೆ ಗೋವಿಂದ...'' ಪ್ರಸಿದ್ಧ ಪದ ಇವರ ರಚನೆಯಾಗಿದೆ.

ಪ್ರಹ್ಲಾದ ರಾಜರ ಯಜ್ಞಭೂಮಿಯಾದ, ಮಂಚಾಲಮ್ಮನ ಕ್ಷೇತ್ರವಾದ ಮಂತ್ರಾಲಯದಲ್ಲಿ ಶ್ರಾವಣ ಬಹುಳ ದ್ವಿತೀಯ ಶುಕ್ರವಾರದಂದು, ತಾವೇ, ನಿರ್ಮಿಸಿದ ವೃಂದಾವನದಲ್ಲಿ ಪ್ರವೇಶ ಮಾಡಿದರು. ಇವರ ಮಹಿಮೆಗಳು ಭಕ್ತಜನಕ್ಕೆ ಆಶ್ರಯ ನೀಡಿವೆ.

## ರಾಘವೇಂದ್ರ ಸ್ವಾಮಿಗಳ ಕೃತಿಗಳು

1) ಋಗ್ವೇದ ವಿವೃತಿ
2) ಯಜುರ್ವೇದ ವಿವೃತಿ
3) ಸಾಮವೇದ ವಿವೃತಿ
4) ಮಂತ್ರಾರ್ಥ ಮಂಜರೀ
5) ಪುರುಷ ಸೂಕ್ತ ಮಂತ್ರಾರ್ಥ


ಇನ್ನು ಮುಂತಾದವುಗಳು

**ಮಹಿಮೆಗಳು:**

ದೇಸಾಯಿ ಮಗನನ್ನು ಮಾವಿನ ಶೀಕರಣೆಯಿಂದ ರಕ್ಷಣೆ ಮಾಡಿದರು. ಅದವಾನಿಯ ದನಗಾಹಿ ವೆಂಕಣ್ಣನಿಗೆ ದಿವಾನ ಪದವಿ ಬರುವಂತೆ ಮಾಡಿದರು.

ಶಿಷ್ಯನಿಗೆ ಮೃತ್ತಿಕೆಯನ್ನು ನೀಡಿ.ಊರಿಗೆ ಹೋರಟ ಸಂದರ್ಭದಲ್ಲಿ ರಾತ್ರಿಯಾದಾಗ ಒಂದು ಮನೆಯ ಕಟ್ಟೆಯ ಮೇಲೆ ಮಲಗುತ್ತಾನೆ. ಆಗ ಮನೆಯ ಒಡತಿಯ ಪ್ರತಿ ಬಾರಿಯು ಪ್ರಸವವಾದಾಗ ಪಿಶಾಚಿಯು ಹುಟ್ಟಿದ ಮಗುವನ್ನು ಕೊಲ್ಲುತ್ತಿತ್ತು, ಆದರೆ ಈ ಸಲ ಪ್ರಸವವಾದಾಗ ಗಂಡು ಮಗು ಸುರಕ್ಷಿತವಾಗಿ ಉಳಿದಿರುತ್ತದೆ. ಏಕೆಂದರೆ ಕಟ್ಟೆಯ ಮೇಲೆ ಮಲಗಿದ ಶಿಷ್ಯನಲ್ಲಿರುವ ಮೃತ್ತಿಕೆಯು ಈ ಮಹಿಮೆಯನ್ನು ಘಟಿಸುತ್ತದೆ.

ಜಗನ್ನಾಥದಾಸರು ಹೇಳಿದಂತೆ "ನಂಬಿ ಕೆಟ್ಟವರಿಲ್ಲವೋ ಈ ಗುರುಗಳ ನಂಬದೇ ಕೆಡುವರುಂಟೋ" ಎಂದು ಹೇಳಿದಂತೆ ಇಂದಿಗೂ ಭಕ್ತರ ಕರೆಗೆ ಓ ಗೊಟ್ಟು ಬರುವ ಕಾಮಧೇನು ಕಲ್ಪವೃಕ್ಷವಾಗಿರುವ ಶ್ರೀರಾಘವೇಂದ್ರರೇ ಗುರುಸಾರ್ವಭೌಮರು ಕಲಿಯುಗದ ಈ ಕರೋನಾ ಮತ್ತು ಇನ್ನಿತರ ರೂಪಾಂತರಿ ಕರಿನೆರಳಿನ ಛಾಯೆ ತೊಲಗಿಸಿ, ಧರೆಗೆ ಮತ್ತೇ ಜೀವಸೆಲೆ ಒದಗಿ, ಜನರ ಜೀವನದಲ್ಲಿ ಉತ್ಸಾಹ ಕಳೆ ಮೂಡಿಸಲಿ ಎಂದು ಪ್ರಾರ್ಥಿಸೋಣ.




# ಸಾಗರದಾಚೆ ಹರಡಿರುವ ಭಾರತೀಯ ಸಂಸ್ಕೃತಿ

| | |
|---|---|
| ಪುಸ್ತಕದ ಹೆಸರು: | ಸಾಗರದಾಚೆ ಹರಡಿರುವ ಭಾರತೀಯ ಸಂಸ್ಕೃತಿ |
| ಲೇಖಕರು : | ಡಾ॥ಜಯಂತಿ ಮನೋಹರ್<br>ಬಿ.ಎಸ್. ಮನೋಹರ್ |
| ಪುಟಗಳು : | 264 |
| ಬೆಲೆ : | 440 |
| ಮುದ್ರಣ : | ಅಮೃತವಾಹಿನಿ<br>ನಂಬರ್. 21, ಕನಕಪುರ ರೋಡ್<br>ಬಸವನಗುಡಿ<br>ಬೆಂಗಳೂರು - 560 004 |

ಇದೊಂದು ವಿಶಿಷ್ಟವಾದ ಪ್ರವಾಸಕಥನ. ಲೇಖಕರು ತಾವು ಕೈಗೊಂಡ ಥಾಯ್‌ಲ್ಯಾಂಡ್, ಕಾಂಬೋಡಿಯಾ, ಇಂಡೋನೇಷಿಯಾ ಹಾಗೂ ಜಪಾನ್ ದೇಶಗಳ ಪ್ರವಾಸದಲ್ಲಿ ಕಂಡ ಸ್ಥಳಗಳ ಐತಿಹಾಸಿಕ ಮಹತ್ವ, ಪೌರಾಣಿಕ ಹಿನ್ನೆಲೆ ಹಾಗೂ ಪಡೆದ ಅನುಭವಗಳ ಪ್ರವಾಸ ಕಥನವಾಗಿದೆ. ಭಾರತೀಯ ಸಂಸ್ಕೃತಿಯ ಹೆಮ್ಮೆಯ ಸಂಗತಿಗಳನ್ನು ತಿಳಿಸಿಕೊಡುವ ಜ್ಞಾನಭಂಡಾರವೆನಿಸಿದೆ. ಲೇಖಕರ ಅಧ್ಯಯನ ಶೀಲತೆ ಹಾಗೂ ಸಂಶೋಧನಾ ದೃಷ್ಟಿಗೆ ಸಾಕ್ಷಿಯೆನಿಸಿದೆ.

ಪ್ರವಾಸ ಸಂದರ್ಭದಲ್ಲಿ ಭೇಟಿ ನೀಡಿದ ಸ್ಥಳಗಳ ಕುರಿತು ತಿಳಿದುಕೊಂಡಾಗ, ಭಾರತೀಯ ಸಂಸ್ಕೃತಿಯ ಹೆಜ್ಜೆ ಗುರುತುಗಳನ್ನು ಸೂಕ್ಷ್ಮವಾಗಿ ಗಮನಿಸಿ ಅದಕ್ಕೆ ಇರಬಹುದಾದ ಹಿನ್ನೆಲೆಗಳನ್ನು ಪತ್ತೆ ಹಚ್ಚಿದ್ದಾರೆ. ಅಷ್ಟೇ ಅಲ್ಲ ಭಾರತೀಯ ಸಂಸ್ಕೃತಿಯ ಬಗ್ಗೆ ಹೆಮ್ಮೆ ಮೂಡಿಸುವಂತೆ ನಿರೂಪಿಸಿದ್ದಾರೆ.ಆದೇಶಗಳ ಶಿಲ್ಪಕಲಾ ವೈಭವ ವನ್ನು, ಧಾರ್ಮಿಕ ಆಚರಣೆಗಳನ್ನು ದಾಖಲಿಸಿರುವುದಷ್ಟೇ ಅಲ್ಲ ಅವುಗಳನ್ನು ಅತ್ಯುತ್ತಮವಾಗಿ ವಿಶ್ಲೇಷಿಸಿದ್ದಾರೆ. ಸಾಗರೋತ್ತರ ದೇಶ ಗಳ ಪ್ರವಾಸಗಳ ದಟ್ಟವಾದ ಅನುಭವಗಳನ್ನು ರೋಚಕವಾಗಿ ಚಿತ್ರಿ ಸಿದ್ದಾರೆ. ಆಯಾ ದೇಶದ ಜನತೆಯೊಂದಿಗೆ ಸಂಭಾಷಿಸಿ, ಸಂದೇಹ ಗಳನ್ನು ಪರಿಹರಿಸಿಕೊಂಡು ತಾವು ಕಂಡುಕೊಂಡ ಸತ್ಯವನ್ನು ಓದು ಗರ ಮುಂದಿಟ್ಟಿದ್ದಾರೆ. ಈ ಬಗೆಯ ಪ್ರವಾಸ ಕಥನಗಳು ಇತಿಹಾಸ ಕಾರರಿಗೆ ಅಮೂಲ್ಯವಾದ ಆಕರ ಗ್ರಂಥಗಳಾಗಿದ್ದು ಸಂಸ್ಕೃತಿ ಪ್ರಿಯ ರಿಗೆ ಉತ್ತಮ ಜ್ಞಾನಕೋಶಗಳಾಗಬಲ್ಲವಾಗಿದೆ.

ಡಾ॥ ಬಾಬುಕೃಷ್ಣಮೂರ್ತಿ, ಎನ್. ಸೀತಾರಾಮ್, ಡಾ॥ಎಚ್. ಎಸ್. ಗೋಪಾಲರಾವ್ ಮೊದಲಾದ ಗಣ್ಯ ಲೇಖಕರು ಈ ಕೃತಿಯ ಬಗ್ಗೆ ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವೈವಿಧ್ಯಮಯ ಛಾಯಾಚಿತ್ರಗಳು, ಆಕರ್ಷಕ ಮುದ್ರಣದಿಂದ ಕೂಡಿರುವ ಈ ಕೃತಿಯ ಲೇಖಕರ ಬಹು ಶ್ರುತತ್ವಕ್ಕೆ ನಿದರ್ಶನ ವಾಗಿದೆ. ಸಾಗರದಾಚೆ ಹರಡಿರುವ ಭಾರತೀಯ ಸಂಸ್ಕೃತಿಯ ಪರಿಚಯವನ್ನು ಲೇಖಕರು ಸಮರ್ಥವಾಗಿ ಮಾಡಿ ಕೊಟ್ಟಿದ್ದಾರೆ. ಸಾಹಿತ್ಯ - ಕಲೆ - ಸಂಸ್ಕೃತಿ - ಇತಿಹಾಸ ಆಸಕ್ತರಿಗೆ ಪ್ರಿಯವಾಗುವ ಈ ಹೊತ್ತಿಗೆ ಕನ್ನಡ ಪುಸ್ತಕ ಲೋಕದಲ್ಲೊಂದು ಮೈಲಿಗಲ್ಲಾಗಿದೆ.

ಪುಸ್ತಕ ಪರಿಚಯ: ಬಿ.ಎಸ್.ರಾಮಮೂರ್ತಿ
9449750618

# ಹೊಂಗನೂರಿನ ಶ್ರೀ ವೇಣುಗೋಪಾಲ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

16

ಕರ್ನಾಟಕದ ವೈಷ್ಣವ ದೇವಾಲಯಗಳು

ಬೊಂಬೆನಾಡು ಎಂದು ಪ್ರಖ್ಯಾತಿಯನ್ನು ಹೊಂದಿರುವ ರಾಮನಗರ ಜಿಲ್ಲೆ ಚನ್ನಪಟ್ಟಣದ ಸುತ್ತ ಮುತ್ತಲೂ ಹಲವಾರು ಸುಂದರ ದೇವಾಲಯಗಳನ್ನು ಹೊಂದಿರುವ ಸ್ಥಳಗಳಿವೆ. ಮಳೂರಿನ ಅಪ್ರಮೇಯ, ಚಿಕ್ಕಮಳೂರಿನ ಗೋಪಾಲಕೃಷ್ಣ, ಕೂಡಲೂರಿನ ರಾಮ ದೇವಾಲಯ ಹಾಗೂ ಮಂಗಳೇಶ್ವರ ದೇವಾಲಯ, ದೇವರ ಹೊಸ ಹಳ್ಳಿಯ ಸಂಜೀವರಾಯ ದೇವಾಲಯ, ಚನ್ನಪಟ್ಟಣದ ವರದರಾಜ ದೇವಾಲಯ, ಕುಡಿಕೆ ಬೇವೂರಿನ ವೆಂಕಟೇಶ್ವರ ದೇವಾಲಯ ಹಾಗೂ ಸಿದ್ದೇಶ್ವರ ದೇವಾಲಯ ಮತ್ತು ಹೊಂಗನೂರಿನ ವೇಣುಗೋಪಾಲ ದೇವಾಲಯ, ಲಕ್ಷ್ಮೀದೇವಾಲಯ ಮತ್ತು ಶಿವಾಲಯಗಳನ್ನು ಉದಾಹರಿಸಬಹುದು.

ಚನ್ನಪಟ್ಟಣಕ್ಕೆ ಅತೀಸಮೀಪವಿರುವ ಹೊಂಗನೂರು ಒಂದು ಪ್ರಾಚೀನ ಅಗ್ರಹಾರವಾಗಿತ್ತು. ಇಲ್ಲಿರುವ ಚೋಳರ ಶಾಸನಗಳು ಈ ಗ್ರಾಮದ ಪ್ರಾಚೀನತೆಯನ್ನು ಹತ್ತನೆಯ ಶತಮಾನಕ್ಕೆ ಕೊಂಡೊಯ್ಯುತ್ತವೆ.

ಹೊಂಗನೂರಿನಲ್ಲಿ ಮೂರು ದೇವಾಲಯಗಳಿವೆ. ವೇಣುಗೋಪಾಲ ದೇವಾಲಯ. ಈಶ್ವರ ದೇವಾಲಯ ಹಾಗೂ ಲಕ್ಷ್ಮೀ ದೇವಾಲಯಗಳು ಇಲ್ಲಿವೆ.

ಹೊಂಗನೂರಿನಲ್ಲಿ ಎಲ್ಲಾ ಪ್ರಾಚೀನ ಅಗ್ರಹಾರದಲ್ಲಿರುವಂತೆ ಊರ ಹೊರಗೆ ಈಶಾನ್ಯ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಶಿವನ ದೇವಾಲಯ ಹಾಗೂ ಊರ ಮಧ್ಯೆ ವಿಷ್ಣು ದೇವಾಲಯಗಳಿವೆ.

ಹೊಂಗನೂರಿನ ಊರನಡುವೆ ಇರುವ ವೇಣುಗೋಪಾಲ ದೇವಾಲಯವು ಚೋಳರ ಶೈಲಿಯಲ್ಲಿದೆ. ದೇವಾಲಯವು ಪ್ರವೇಶದ್ವಾರ, ವಿಶಾಲವಾದ ಮುಖಮಂಟಪ, ನವರಂಗ , ಅಂತರಾಳ ಹಾಗೂ ಗರ್ಭಗುಡಿಗಳನ್ನು ಹೊಂದಿರುತ್ತದೆ. ಗರ್ಭಗುಡಿಯಲ್ಲಿ ಕೊಳಲು ನುಡಿಸುತ್ತಿರುವ ಕೃಷ್ಣನ ದಿವ್ಯಮೂರ್ತಿಯಿದೆ.

ಈ ದೇವಾಲಯದಲ್ಲಿ ದೊರೆತಿರುವ ರಾಜೇಂದ್ರ ಚೋಳನ ಕ್ರಿ.ಶ. 1018 ರ ಶಾಸನದಲ್ಲಿ ವೇಣುಗೋಪಾಲ ಸ್ವಾಮಿಯ ದೇವಾಲಯಕ್ಕೆ ದತ್ತಿಬಿಡಲಾಗಿದೆ ಮತ್ತು ಹೊಯ್ಸಳ ಒಂದನೆಯ ನರಸಿಂಹನ ಶಾಸನದಲ್ಲಿ ಸಹಾ ವೇಣುಗೋಪಾಲ ಸ್ವಾಮಿಯ ನಿತ್ಯಪೂಜಾ ಕೈಂಕರ್ಯಕ್ಕೆ ದತ್ತಿಬಿಟ್ಟಿರುವ ಉಲ್ಲೇಖವಿದೆ. ವೇಣುಗೋಪಾಲ







ಸ್ವಾಮಿಯ ಗುಡಿಯ ಬಲಭಾಗಕ್ಕೆ ಲಕ್ಷ್ಮೀ ದೇವಿಗಾಗಿ ಪ್ರತ್ಯೇಕ ಗುಡಿಯಿದೆ.ದೇವಾಲಯದ ಆವರಣದಲ್ಲಿ ಸುಮಾರು ಎಂಟನೆಯ ಶತಮಾನಕ್ಕೆ ಸೇರುವ ದ್ವಿಬಾಹು ಗಣೇಶನ ಶಿಲ್ಪವನ್ನಿರಿಸಲಾಗಿದೆ.

ಹೊಂಗನೂರಿನ ವೇಣುಗೋಪಾಲ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷವೂ ಮಾಘಮಾಸದ ಶುಕ್ಲಪಕ್ಷದ ರಥಸಪ್ತಮಿ ದಿನ ಬಹಳ ಅದ್ದೂರಿಯಾಗಿ ನೆರವೇರುತ್ತದೆ. ಶ್ರೀ ವೈಷ್ಣವ ಸೇವಾ ಸಮಿತಿ ಮತ್ತು ಬ್ರಹ್ಮ ರಥೋತ್ಸವ ಸೇವಾ ಸಮಿತಿಯ ಸೇವೆಯಲ್ಲಿ ಉತ್ಸವಗಳು ಬಹಳ ಸಾಂಗವಾಗಿ ನೆರ ವೇರುತ್ತವೆ.

ಉತ್ಸವದ ಅಂಗವಾಗಿ ಮಂಗಳಾರ್ಚನೆ, ವಿಶ್ವ ಕ್ಸೇನ ಆರಾಧನೆ,ಅಂಕುರಾರ್ಪಣೆ,ಧ್ವಜಾರೋಹಣ, ಚಂದ್ರಮಂಡಲ ಉತ್ಸವ, ನಿತ್ಯಹೋಮ, ಗರುಡೋ ತ್ಸವ, ಗಜೇಂದ್ರಮೋಕ್ಷ ಹಾಗೂ ಕಲ್ಯಾಣೋತ್ಸವ ಗಳು ಮೊದಲ ಎರಡು ದಿನಗಳ ಕಾಲ ನಡೆದು ಮೂರ ನೆಯ ದಿನ ಸ್ವಾಮಿಗೆ ಬ್ರಹ್ಮ ರಥೋತ್ಸವವು ಸ್ಥಳೀಯ ಶಾಸಕರಾದಿಯಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹಳ ಅದ್ದೂರಿಯಾಗಿ ನೆರವೇರುತ್ತದೆ. ಬ್ರಹ್ಮ ರಥೋತ್ಸವದ ನಂತರ ಎರಡು ದಿನಗಳ ಕಾಲ ಹನುಮಂತೋತ್ಸವ, ಶೇಷವಾಹನೋತ್ಸವ, ಶಯನೋತ್ಸವ ಅವಭೃತ ಸ್ನಾನ, ಬಲಿಪ್ರದಾನ, ಧ್ವಜಾರೋಹಣ, ಪೂರ್ಣಾ ಹುತಿ ಮತ್ತು ಮಹಾ ಮಂಗಳಾರತಿಯೊಂದಿಗೆ ಐದುದಿನಗಳ ವೈಭವದ ರಥೋತ್ಸವವಕ್ಕೆ ತೆರ ಬೀಳುತ್ತದೆ.

ಹೊಂಗನೂರಿನ ಊರ ನಡುವೆ ಇರುವ ಮತ್ತೊಂದು ಪ್ರಸಿದ್ಧ ದೇವಾಲಯ ಲಕ್ಷ್ಮೀದೇವಾಲಯವಾಗಿರುವುದು. ಸಂಪೂರ್ಣ ಜೀರ್ಣಾ ವಸ್ಥೆಯಲ್ಲಿದ್ದುದರಿಂದ ದೇವಾಲಯವನ್ನು ಪೂರಾ ತೆಗೆದು ನೂತನ ದೇವಾಲಯವನ್ನು ನಿರ್ಮಿಸಲಾಗಿದೆ.ಆದರೆ ದೇವಾಲಯದಲ್ಲಿರುವ ಮೂರ್ತಿಗಳು ಮಾತ್ರ ಪ್ರಾಚೀನವಾಗಿದೆ. ಲಕ್ಷ್ಮೀದೇವಾಲಯದ ಗರ್ಭ ಗುಡಿಯಲ್ಲಿ ಸುಮಾರು ಐದು ಅಡಿ ಎತ್ತರದ ಲಕ್ಷ್ಮೀದೇವಿಯ ಶಿಲ್ಪವಿದೆ.

ಹೊಂಗನೂರಿನ ಲಕ್ಷ್ಮೀದೇವಿಗೆ ಚನ್ನಪಟ್ಟಣ ತಾಲ್ಲೂಕಿನಲ್ಲದೆ ಮಂಡ್ಯಜಿಲ್ಲೆಯಲ್ಲೂ ಭಕ್ತಾದಿಗಳು ಬಹಳ ಭಕ್ತಿ ಶ್ರದ್ಧೆಯಿಂದ ನಡೆದು ಕೊಳ್ಳುತ್ತಾರೆ ಅದರಲ್ಲೂ ಮಂಡ್ಯಜಿಲ್ಲೆ ನಾಗಮಂಗಲ ತಾಲ್ಲೂಕಿನ ಸುಮಾರು ಸಾವಿರಾರು ಕುಟುಂಬಗಳಿಗೆ ಹೊಂಗನೂರಿನ ಲಕ್ಷ್ಮಿಯೇ ಇಷ್ಟ ದೈವವಾಗಿದ್ದು,ಪ್ರತಿ ಶುಕ್ರವಾರಗಳಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲುತ್ತದೆ. ಹೊಂಗನೂರಿನ ಮತ್ತೊಂದು ಪುರಾತನ ದೇವಾಲಯ ಶಿವಾ ಲಯವಾಗಿದೆ. ಇದು ಒಂದು ಚೋಳರ ವಾಸ್ತು ಶೈಲಿಯಲ್ಲಿ ನಿರ್ಮಿತ ವಾಗಿರುವ ಸುಂದರ ದೇವಾಲಯವಾಗಿರುತ್ತದೆ.

ಗರ್ಭಗುಡಿಯಲ್ಲಿ ಸುಮಾರು ಹನ್ನೊಂದನೆಯ ಶತಮಾನಕ್ಕೆ ಸೇರುವ ಭವ್ಯವಾದ ಶಿವಲಿಂಗವಿದೆ. ನವರಂಗವು ಒಂಭತ್ತು ಅಂಕಣ ವನ್ನು ಹೊಂದಿದ್ದು ಮಧ್ಯದ ಭುವನೇಶ್ವರಿಯಲ್ಲಿ ನಟರಾಜನ ಸುಂದರ ಶಿಲ್ಪವಿದೆ ಹಾಗೂ ಉಳಿದ ಎಂಟು ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರು ತಮ್ಮ ವಾಹನಗಳಲ್ಲಿರುವಂತೆ ಚಿತ್ರಿಸಲಾಗಿದೆ.

ಈ ದೇವಾಲಯವು ಮೂಲ ಸ್ವರೂಪದಂತೆ ಇದ್ದು ಯಾವ ರೀತಿಯ ಬದಲಾವಣೆಗಳನ್ನು ಹೊಂದಿಲ್ಲದಿರುವುದರಿಂದ ಚೋಳರ ದೇವಾಲಯದ ಶೈಲಿಯನ್ನು ಅಭ್ಯಸಿಸುವವರಿಗೆ ಒಂದು ಉತ್ತಮ ದೇವಾ ಲಯವಾಗಿದೆ.

**ಹೀಗೆ ಬನ್ನಿ...**

ಬೆಂಗಳೂರು - ಮೈಸೂರು ರಸ್ತೆಯಲ್ಲಿ ಚನ್ನಪಟ್ಟಣದ ಹೊರ ವಲಯದಲ್ಲಿ ಸಾತನೂರು ವೃತ್ತ ಸಿಗುತ್ತದೆ. ಸಾತನೂರು ವೃತ್ತದಿಂದ ಸಾತನೂರು ಕಡೆಗೆ ಆರು ಕಿ.ಮೀ. ಕ್ರಮಿಸಿ ಹೊಂಗನೂರನ್ನು ಸೇರಬಹುದು. ಇಲ್ಲಿರುವ ದೇವಾಲಯಗಳನ್ನು ದರ್ಶಿಸಿ ಸಮೀಪ ದಲ್ಲಿರುವ ಕಬ್ಬಾಳು ಎಂಬ ಗ್ರಾಮದಲ್ಲಿರುವ ಸುಪ್ರಸಿದ್ಧ ಶಕ್ತಿ ದೇವತೆ ಕಬ್ಬಾಳಮ್ಮನ ದೇವಾಲಯವನ್ನು ದರ್ಶಿಸಬಹುದು.



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

- ಇಂಗ್ಲೀಷ್ ಮೂಲ : ಡಾ|| ಎನ್.ರಮೇಶನ್
- ಕನ್ನಡಾನುವಾದ : ದಿ|| ಬಿ.ಎನ್. ಶ್ರೀನಿವಾಸನ್

## ವಿಜಯನಗರದ ಕಾಲದಲ್ಲಿ ತಿರುಮಲೆ

ತೊಂಡಮಂಡಲವು ವಿಜಯನಗರದ ಆವಿರ್ಭಾವವಾದಾಗಲೇ ಅದರ ಒಂದು ಭಾಗವಾಗಿ ವಿಜಯನಗರದ ಪತನವಾಗುವವರೆಗೆ ಅದರ ಭಾಗವಾಗಿಯೇ ಇದ್ದಿತು.ತಿರುಮಲೆ-ತಿರುಪತಿ ಪ್ರಾಂತ್ಯಗಳ ಹಾಗೂ ಅಲ್ಲಿನ ಆಲಯಗಳ ಚರಿತ್ರೆಯಲ್ಲಿ ವಿಜಯನಗರದ ಸಂಗಮ, ಸಾಳುವ,ತುಳುವ,ಅರವೀಡುವಂಶಗಳ ಆಳ್ವಿಕೆಯ ಕಾಲ ಬಹುಶೋಭಾಕರವಾದ ಕಾಲವಾಗಿದೆ.

ಸಂಗಮ ವಂಶದ ಅತಿಪ್ರಾಚೀನ ದಾಖಲೆಯೆಂದರೆ ಕ್ರಿ.ಶ.1355 ರಿಂದ ಕ್ರಿ.ಶ.1377 ರವರೆಗೆ ಆಳಿದ ಒಂದನೆಯ ಹರಿಹರನ ಕಾಲದ್ದು.ಶಾಸನಗಳಲ್ಲಿ ಕಂಡು ಬರದೆ ಕೋಯಿಲ್-ಒಳಗುವಿನಲ್ಲಿ ಕಂಡು ಬರುವ ಒಂದು ಅಂಶವೆಂದರೆ ತಿರುಮಲೆಯಲ್ಲಿದ್ದ ರಂಗನಾಥನ ಉತ್ಸವ ಮೂರ್ತಿಯನ್ನು ಶ್ರೀರಂಗಕ್ಕೆ ಸಾಗಿಸಿದ್ದು. ವಿಜಯನಗರದ ರಾಜಕುಮಾರ ಕುಮಾರ ಕಂಪಣನು ಮಧುರೆಯ ಮುಸಲ್ಮಾನ ದೊರೆಯ ಮೇಲೆ ದಂಡೆತ್ತಿ ಹೋಗಿ ಅವನ ಆಳ್ವಿಕೆಯನ್ನು ಕೊನೆಗೊಳಿಸಿದ.ಕಂಪಣ್ಣನ ಬ್ರಾಹ್ಮಣ ಸೇನಾನಿ ಗೋಪಣ್ಣನು ರಂಗನಾಥನ ಉತ್ಸವ ಮೂರ್ತಿಯನ್ನು ಕ್ರಿ.ಶ.1371 ರಲ್ಲಿ ಶ್ರೀರಂಗದಲ್ಲಿ ಪ್ರತಿಷ್ಠಾಪಿಸಿದ. ಈ ಮೂರ್ತಿಯನ್ನು ಬೆಂಜಿಗೆ ತೆಗೆದು ಕೊಂಡು ಹೋಗಿ ಅಲ್ಲಿ ಸ್ವಲ್ಪಕಾಲ ಇಟ್ಟು ಕೊಂಡು ನಂತರ ಶ್ರೀರಂಗದ ದೇವಾಲಯಕ್ಕೆ ಅದನ್ನು ತಲುಪಿಸಲಾಯಿತು. ಪ್ರಾಯಶಃ ಕ್ರಿ.ಶ.1368 ರ ಹೊತ್ತಿಗೆ ಅದನ್ನು ತಿರುಮಲೆಯಿಂದ ಸಾಗಿಸಲಾಯಿತು. ನಂತರದ ರಾಜ ಎರಡನೇ ಹರಿಹರನು ತಿರುಮಲೆಯ ಶಾಸನವೊಂದರಲ್ಲಿ ಹೆಸರಿಸಲ್ಪಟ್ಟಿದ್ದಾನೆ.

ಸಂಗಮವಂಶದಲ್ಲಿಯೇ ಅತಿಶ್ರೇಷ್ಠನಾದ ಎರಡನೇ ದೇವರಾಯನು ಶ್ರೀವೆಂಕಟೇಶ್ವರನ ಹಿರಿಯ ಭಕ್ತನಾಗಿದ್ದ.ಅವನು ಕ್ರಿ.ಶ. 1428ರಲ್ಲಿ ತಿರುಮಲೆಗೆ ಬಂದು ದೇವರನ್ನು ಆರಾಧಿಸಿದ್ದೇ ಅಲ್ಲದೆ,ತಿರುಮಲೆಯ ಆಲಯದಲ್ಲಿ ವೇದ ಪಾರಾಯಣವನ್ನು ಪುನರುದ್ಧರಿಸಲು ಸಾಕಷ್ಟು ದಾನವನ್ನು ನೀಡಿದ.

ತಿರುಮಲೆ-ತಿರುಪತಿಗಳ ದಾಖಲೆಗಳಲ್ಲಿ ಸಂಗಮವಂಶದ ಕೊನೆಯ ದೊರೆ ಮಲ್ಲಿಕಾರ್ಜುನನ ಹೆಸರು ಇದೆ. ಈ ಪ್ರಾಂತ್ಯದಲ್ಲಿ ಕಂಡು ಬರುವ ಇತರರೆಂದರೆ ಸಾಳುವ ಗೋಪಯ್ಯ,ಸಾಳುವ ತಿಮ್ಮರಾಜ,ಸಾಳುವ ಪರ್ವತರಾಜ,ಸಾಳುವ ತ್ರಿಪುರಾಂತಕ ಕಂಪಯದೇವ, ಸಾಳುವ ಯರ್ರಮರಾಜ, ತಮ್ಮಯ ದೇವಚೋಡ,ವಲ್ಲಭದೇವ. ಸಂಗಮ ವಂಶದ ಕೊನೆಯ ದಿನಗಳಲ್ಲಿ ವಿಜಯನಗರದ ಸರ್ವ ಸೇನಾನಿಯೂ,ಪರ್ಯಾಯ ಪ್ರಭುವೂ ಆಗಿದ್ದ ಸಾಳುವ ನರಸಿಂಹನು ತಿರುಮಲ-ತಿರು

ಪತಿ ಆಲಯಗಳ ದೊಡ್ಡ ರಾಜಪೋಷಕ ನಾಗಿದ್ದ. ತಿರುಮಲೆಯ ಆಲಯದಲ್ಲಿ ವಿಶೇಷವಾಗಿ ನಿರ್ಮಿತ ವಾದ ಮಂಟಪದಲ್ಲಿ ಅಣ್ಣಾ ಊಂಜಲ್ ತಿರುನಾಳ್ ಉತ್ಸವ ವನ್ನು ಏರ್ಪಡಿಸಿದ್ದು ಒಂದು ಹಿರಿಯ ಕೊಡುಗೆಯಾಯಿತು.

ಸಾಳುವವಂಶದ ಸಾಳುವ ನರಸಿಂಹನು ತನ್ನ ಪ್ರಭುವನ್ನು ಪದಚ್ಯುತಗೊಳಿಸಿ,ತಾನೇ ಪ್ರಭುವಾದ. ಸಾಮ್ರಾಟ ನಾದ ಮೇಲೆ ಬೆಟ್ಟಕ್ಕೆ ಹೋಗುವ ಕಾಲುಹಾದಿಯ ಬದಿಯಲ್ಲಿ ಲಕ್ಷ್ಮೀನರಸಿಂಹನ ವಿಗ್ರಹವನ್ನು ಪ್ರತಿಷ್ಠಾಪಿದ.

ತುಳುವವಂಶದ ಆಳ್ವಿಕೆ ಕೃಷ್ಣದೇವರಾಯನ (1507-1529)ಆಗಮನದ ನಂತರ ತಿರುಮಲೆಯ ಶ್ರೀವೆಂಕಟೇಶ್ವರ ಸ್ವಾಮಿ ಆಲಯ ತನ್ನ ಪ್ರಸಿದ್ಧಿಯ ಉನ್ನತಿಯನ್ನು ಪಡೆಯಿತು. ಈ ರಾಜನಿಗೆ ಶ್ರೀವೆಂಕಟೇಶ್ವರಸ್ವಾಮಿ ಮನೆ ದೈವವಾದ. ಎಲ್ಲ ಪ್ರಮುಖ ಸಂದರ್ಭಗಳಲ್ಲೂ ರಾಯನು ಸ್ವಾಮಿಯನ್ನು ಸಂದ ರ್ಶಿಸಿ,ಆಶೀರ್ವಾದವನ್ನು ಬೇಡಿದ.ಈತನ ತಿರುಮಲೆಯ ಮೊದಲ ಸಂದರ್ಶನ ಕ್ರಿ.ಶ.1513ರ ಫೆಬ್ರವರಿ 10 ರಂದು ನಡೆ ಯಿತು. ಶಾಸನಗಳು 1513,1514,1515, 1517, 1518,1521 ರಲ್ಲಿ ರಾಯನು ತಿರುಮಲೆಯನ್ನು ಸೇರಿದ ವಿವರಗಳನ್ನು ಒದಗಿ ಸುತ್ತವೆ. ಇದರಿಂದಾಗಿ ಶ್ರೀವೇಂಕಟೇಶ್ವರ ಸ್ವಾಮಿ ಹಲವಾರು ಅನರ್ಘ್ಯ ಆಭರಣಗಳನ್ನು ಕಾಣಿಕೆ ಪಡೆಯುವಂತಾಯಿತು.

ಕೃಷ್ಣದೇವರಾಯನಿಗೆ ಅವನ ಮಲಸಹೋದರ ಅಚ್ಯುತರಾಯನು ಉತ್ತರಾಧಿಕಾರಿಯಾದ (1529-1543) ಅಚ್ಯುತನು ತನ್ನ ಸಹೋದರನ ಆಳ್ವಿಕೆಯ ಕಾಲದಲ್ಲಿ ಚಂದ್ರ ಗಿರಿಯ ಕೋಟೆಯಲ್ಲಿ ಸೆರೆಯಾಗಿದ್ದ. ಕೃಷ್ಣದೇವ ರಾಯನು ಮರಣ ಹೊಂದಿದ ನಂತರ ಅಚ್ಯುತರಾಯನು ತಿರುಮಲೆಗೆ ಆಗಮಿಸಿ,ಶ್ರೀವೇಂಕಟೇಶ್ವರ ಸ್ವಾಮಿಯ ಶಂಖೋದಕ ಸ್ನಾತ ನಾಗಿ ಪಟ್ಟಾಭಿಷಿಕ್ತನಾದ.ಇವನೂ ಈ ದೇವರ ಹಿರಿಯ ಭಕ್ತನೇ. ಸಾಮ್ರಾಟನು ಮತ್ತೆ ಕ್ರಿ.ಶ.1533 ರಲ್ಲಿ ತಿರುಮಲೆಗೆ ಆಗಮಿಸಿದ.ತನ್ನ ಪತ್ನಿ ವರದಾಜಿ,ಮಗ ಕುಮಾರ ವೆಂಕಟಾದ್ರಿ ಯರೊಡನೆ ಆಗಮಿಸಿದ ಅವನು ದೇವರಿಗೆ ಹಲವಾರು ಅಮೂಲ್ಯ ಆಭರಣಗಳನ್ನು ನೀಡಿದ.ಕ್ರಿ.ಶ.1538ರಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಹಾಗೂ ಅಲಮೇಲುಮಂಗೆಯರಿಗಾಗಿ ತಿರುಮಲೆಯ ಆಲಯದಲ್ಲಿ ಮಹಾಲಕ್ಷ್ಮಿ ಮಹೋತ್ಸವನ್ನು ಏರ್ಪಡಿಸಿದ.

ಸದಾಶಿವರಾಯನು ಅಚ್ಯುತರಾಯನ ಉತ್ತರಾ ಧಿಕಾರಿಯಾದ. ಇವನು ಬಹುಶಃ ಎರಡು ಬಾರಿ ತಿರುಮಲೆಗೆ ಬಂದಿರಬೇಕು. ಮೊದಲಿಗೆ 1554 ರ ಫೆಬ್ರವರಿ 3 ರಂದೂ, ನಂತರ ಅದೇ ವರ್ಷದ ಜುಲೈ ತಿಂಗಳಿನಲ್ಲೂ ಆಗಮಿಸಿ, ಆಲಯಕ್ಕೆ ಹಲವಾರು ಕಾಣಿಕೆಗಳನ್ನು ನೀಡಿದ. ಅವನ ಅತಿ ಕಡಿಮೆಯಾದ ತಿರುಮಲೆ ಯಾತ್ರೆಗಳಿಗೂ,ಅವನ ಕಾಣಿಕೆ ಗಳಲ್ಲಿನ ಅತಿ ಕಡಿಮೆ ಬೆಲೆಗಳಿಗೂ,ಕೆಲಕಾಲ ಅವನು ರಾಜ ನೆಂದೇ ಗುರುತಿಸಲ್ಪಟ್ಟಿದ್ದರೂ ಅಳಿಯ ರಾಮರಾಯನೇ ನಿಜ ವಾದ ಪ್ರಭುವಾಗಿದ್ದದ್ದೇ ಕಾರಣವೆನ್ನಬಹುದು. ನಂತರ ರಾಯ ರಾಯನೇ ಸಾಮ್ರಾಟನಾಗಿ ಇವನು ಸೆರೆಮನೆಯ ಪಾಲಾದ.

ಅರವೀಡುವಂಶದವನಾದ ಅಳಿಯ ರಾಮರಾಯನು ಸದಾಶಿವನನ್ನು ಸೆರೆಗೆ ತಳ್ಳಿ ತಾನೇ ವಿಜಯನಗರದ ಸಾಮ್ರಾಟ ನಾದ ಮೇಲೆ ಸಮಕಾಲೀನ ಬಹಮನೀ ಸುಲ್ತಾನದ ರಾಜಕೀಯ ದಲ್ಲಿ ಹಸ್ತಕ್ಷೇಪ ಮಾಡಿ ತನ್ನ ಅಹಂಕಾರದಿಂದಲೂ, ಪ್ರಾಬಲ್ಯ ದಿಂದಲೂ ಅವರನ್ನು ಕೀಳಾಗಿ ನಡೆಸಿಕೊಂಡ. ಸುಲ್ತಾನರು ತಮ್ಮ ಬಲವನ್ನೆಲ್ಲ ಒಟ್ಟುಗೊಳಿಸಿ ವಿಜಯನಗರವನ್ನು ಮುತ್ತಿದರು. ರಾಯರಾಯನು ರಕ್ಕಸ ತಂಗಡಿಯಲ್ಲಿ ಅವರೊಡನೆ ಯುದ್ಧಗೈದ. ಕ್ರಿ.ಶ.1565ರಲ್ಲಿ ನಡೆದ ಯುದ್ಧದಲ್ಲಿ ರಾಮರಾಯನು ಹತನಾಗಿ, ವಿಜಯನಗರದ ಸೇನೆ ಪರಾಜಯ ಪಡೆಯಿತು.

ತಿರುಮಲನು (ಅಳಿಯ ರಾಮರಾಯನ ತಮ್ಮ) ತಿರುಮಲರಾಯನೆಂಬ ಹೆಸರಿನಿಂದ ಕ್ರಿ.ಶ.1570 ರಲ್ಲಿ ಸಿಂಹಾ ಸನವನ್ನೇರಿದ.ಇವನ ಹೆಸರು ತಿರುಮಲೆಯ ಆಲಯದ ಉಯ್ಯಾಲೆ ಮಂಟಪದೊಡನೆ ಸೇರಿ ತಿರುಮಲರಾಯ ಮಂಟಪ ವೆಂದಾಗಿದೆ-ತಿರುಮಲರಾಯನ ಅಲ್ಪಕಾಲದ ಆಳ್ವಿಕೆಯಲ್ಲೂ ಮುಸಲ್ಮಾನರ ಧಾಳಿ ನಡದೇ ಇತ್ತು. ಬಿಜಾಪುರದ ಸುಲ್ತಾನನ ಸೈನ್ಯಗಳು ಆನೆಗೊಂದಿ,ಪೆನುಗೊಂಡ,ಆದೋನಿಗಳನ್ನು ಮುತ್ತಿ ದವು.ಆದರೆ ತಿರುಮಲರಾಯನು ರಾಮರಾಯನ ರೀತಿಯನ್ನೇ ಅನುಸರಿಸಿ ಸುಲ್ತಾನರಲ್ಲಿ ಒಬ್ಬರ ಮೇಲೆ ಇನ್ನೊಬ್ಬರನ್ನು ಎತ್ತಿಕಟ್ಟಿ ಅಪಾಯದಿಂದ ತಪ್ಪಿಸಿಕೊಂಡ. ಒಂದನೇ ಶ್ರೀರಂಗನು ಇವನ ಉತ್ತರಾಧಿಕಾರಿಯಾದ (ಕ್ರಿ.ಶ.1571 - 1585) ಈ ದೊರೆಯ ಕಾಲದ ಆರು ಶಾಸನಗಳು ತಿರುಮಲೆ-ತಿರುಪತಿಗಳಲ್ಲಿ ದೊರೆಯು ತ್ತವೆ. ಎಲ್ಲವೂ ಖಾಸಗೀ ವ್ಯಕ್ತಿಗಳಿಂದ ಉಂಟಾದ ದಾನಗಳನ್ನು ಕುರಿತೇ ಹೇಳುತ್ತವೆ.

ನಂತರದ ರಾಜ ವೆಂಕಟಪತಿ (1585-1614) ಇವನು ತನ್ನ ಹಿಂದಿನ ಇಬ್ಬರ ಆಳ್ವಿಕೆಯಲ್ಲೂ ಚಂದ್ರಗಿರಿಯಲ್ಲಿ ರಾಜಪ್ರತಿ ನಿಧಿಯಾಗಿದ್ದು,ಉದಯಗಿರಿ,ಕೊಂಡವೀಡುಗಳಿಗೂ ಜವಾಬು ದಾರನಾಗಿದ್ದ.ತಾನು ರಾಜನಾದ ಮೇಲೆ ರಾಜಧಾನಿಯನ್ನು ಪೆನು ಗೊಂಡೆಯಿಂದ ಚಂದ್ರಗಿರಿಗೆ ಬದಲಾಯಿಸಿದ.ಇವನು ಸ್ವಾಮಿಯ ದೊಡ್ಡ ಭಕ್ತನಾಗಿದ್ದು ತಿರುಮಲೆಯ ಆಲಯದಲ್ಲಿ ತನ್ನ ಹಾಗೂ ತನ್ನ ತಂದೆತಾಯಿಯರ -ತಿರುಮಲ ಹಾಗೂ ವೆಂಗಳಾಂಬರ- ವಿಗ್ರಹಗಳನ್ನು ಸ್ಥಾಪಿಸಿದ.ತಿರುಮಲೆ ಹಾಗೂ ತಿರುಪತಿಗಳ ಹದಿ ನಾಲ್ಕು ಶಾಸನಗಳು ಇವನನ್ನು ಹೆಸರಿಸುತ್ತವೆ.

**(-ಮುಂದುವರೆಯುತ್ತದೆ.)**



# ಪದಬಂಧ

**ಎಡದಿಂದ ಬಲಕ್ಕೆ**

01.ಪೊಯ್ಗೈ ಆಳ್ವಾರ್ ಪ್ರಬಂಧ 'ಮು' ಯಿಂದಾರಂಭ ...(8)

02. ಕುಲಶೇಖರಾಳ್ವಾರ್ ವಿರಚಿತ ಪ್ರಬಂಧ ..(8)

**ಬಲದಿಂದ ಎಡಕ್ಕೆ**

03.ಆಂಡಾಳ್ ರಚಿಸಿದ ಅಪರೂಪದ ಕೃತಿ ..(4)

04.ನಮ್ಮಾಳ್ವಾರರ ಋಗ್ವೇದಕ್ಕೆ ಸಮವಾದ ಪ್ರಬಂಧ ಕೊನೆ 3 ಅಕ್ಷರವಿರುತ್ತಂ ...(5)

**ಮೇಲಿಂದ ಕೆಳಕ್ಕೆ**

5.ತೊಂಡರಡಿಪ್ಪೊಡಿಆಳ್ವಾರ್ ಅವರ ಸುಪ್ರಭಾತ ಪ್ರಬಂಧ ಎಳುಚ್ಚಿಯಿಂದ ಕೊನೆಗೊಳ್ಳುವ ...(7)

6.ತಿರುಮಂಗೈಆಳ್ವಾರ್‌ರ ತಿರುಮಡಲ್‌ನಿಂದ ಅಂತ್ಯಗೊಳ್ಳುವ 'ಶಿ'ಯಿಂದ ಆರಂಭದ ಪ್ರಬಂಧ ...(3)

7.ಅತ್ಯಂತ ಹೆಚ್ಚು ದಿವ್ಯ ದೇಶಗಳನ್ನು ಸಂದರ್ಶಿಸಿರುವ ಏಕೈಕ ಆಳ್ವಾರ್ ತಿರುಮಂಗೈ ಆಳ್ವಾರ್ 1084 ಪಾಶುರಗಳ ದಿವ್ಯ ಪ್ರಬಂಧದ ಮೊದಲ ಮೂರಕ್ಷರಗಳು ...(3)

8.120 ಪಾಶುರಗಳ ಸಂಗೀತಮಯ ತಿರುಮಳಿಶೈ ಆಳ್ವಾರರ ಅದ್ಭುತ ಪ್ರಬಂಧ(ಚಂದದ್ದು) ...(7)

**ಕೆಳಗಿನಿಂದ ಮೇಲಕ್ಕೆ**

9.ನಾಲಾಯಿರ ಪ್ರಬಂಧದ ಕಾಣಿಕೆಯ ಜೊತೆ ಭಕ್ತಿ ಭಾವದ ಸ್ತೋತ್ರವನ್ನು ನೀಡಿದ್ದಾರೆ.ಕುಲಶೇಖರ ಆಳ್ವಾರರು 'ಮು' ಯಿಂದ ಆರಂಭ. ...(5)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | | | | |
| 2 | | 5 | | | | 3 8 | | |
| 3 | 2 | | | | | | | |
| 4 | | | 6 | | 7 | | | |
| 5 | | | | | | | | |
| 6 | | | | | | | | |
| 7 | | | | | | | 4 11 | |
| 8 | 9 | | | 10 | | | | 12 |

**- ಪಿ.ಜಿ. ಶ್ರೀನಿವಾಸನ್**

**- 40 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.**

10. ವಿಪ್ರನಾರಾಯಣರೆಂದು ಸಹ ಖ್ಯಾತರಾಗಿರುವ ತೊಂಡರಡಿ ಪ್ಪೊಡಿ ಆಳ್ವಾರರು ದೇವರಿಗೆ ಮಾಲೆ ಅರ್ಪಿಸಿದ್ದಾರೆ ಮಾಲೆ ರೂಪದಲ್ಲಿ ...(4)

11. ಸಾಮವೇದ ಸಾರವೆಂದು ಖ್ಯಾತಿ ಪಡೆದಿರುವ ನಮ್ಮಾಳ್ವಾರರ ಬಹು ಪ್ರತಿಭೆ ಹಾಗೂ ಖ್ಯಾತಿಯ 1102 ಪಾಶುರಗಳ ಅತಿದೊಡ್ಡ ಪ್ರಬಂಧ ...(5)

12.ದೇವರ ಪೂಜೆ ಈ ಪ್ರಬಂಧವಿಲ್ಲದೆ ಅಪೂರ್ಣ, ಅಂತಹ ಖ್ಯಾತಿಯ ಪ್ರಬಂಧ ದೇವರಿಗೇ ಸೌಖ್ಯ ಕೋರುವ ಮಧುರೈ ಪಟ್ಟಣದಿಂದ ಬೆಳಕಿಗೆ ಬಂದ ಅಮೃತವಾಣಿ ಪೆರಿಯಾಳ್ವಾರರಿಂದ ಹೊರಹೊಮ್ಮಿತು ...(5)


ತಿರುಮಲ ತಿರುಪತಿ ದೇವಸ್ಥಾನಗಳು
ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯವರ
ತೆಪ್ಪೋತ್ಸವಗಳು
13-03-2022 ರಿಂದ
17-03-2022 ರ ವರೆಗೆ
ಗೋವಿಂದ
ಗೋವಿಂದ



13-01-2022 ರಂದು ವೈಕುಂಠ ಏಕಾದಶಿ ಸಂದರ್ಭವಾಗಿ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಹೂವಿನ ಅಲಂಕಾರದ ದೃಶ್ಯಗಳು.

ವೈಕುಂಠ ಏಕಾದಶಿ ಸಂದರ್ಭವಾಗಿ ಸ್ವರ್ಣ ರಥದಲ್ಲಿ ಮಾಢಬೀದಿಗಳಲ್ಲಿ ಮೆರವಣಿಗೆಯಲ್ಲಿ ಮೆರೆಯುತ್ತಿರುವ ಶ್ರೀ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರು.





13-01-2022 ರಂದು ವೈಕುಂಠ ಏಕಾದಶಿ ಸಂದರ್ಭವಾಗಿ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಹೂವಿನ ಅಲಂಕಾರದ ದೃಶ್ಯಗಳು.

ವೈಕುಂಠ ಏಕಾದಶಿ ಸಂದರ್ಭವಾಗಿ ಸ್ವರ್ಣ ರಥದಲ್ಲಿ ಮಾಢಬೀದಿಗಳಲ್ಲಿ ಮೆರವಣಿಗೆಯಲ್ಲಿ ಮೆರೆಯುತ್ತಿರುವ ಶ್ರೀ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರು.



# ತಿರುಮಲೆ ತಿರುಪತಿ ದೇವಸ್ಥಾನಗಳು



27-01-2022 ರಂದು "ನಮಾಮಿ ಗೋವಿಂದ" ಎಂಬ ಹೆಸರಿನಲ್ಲಿ "ಪಂಚಗವ್ಯದಿಂದ ತಯಾರಿಸಿದ ಉತ್ಪನ್ನಗಳು" ವಿಕ್ರಯಕೇಂದ್ರವನ್ನು ಪ್ರಾರಂಭಿಸಿದ ತಿ.ತಿ ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು, ತಿರುಪತಿ ಎಂ.ಎಲ್.ಎ. ಶ್ರೀ ಭೂಮನ ಕರುಣಾಕರ ರೆಡ್ಡಿ, ಯವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್.ಜವಹರ್ ರೆಡ್ಡಿ ಐ.ಎ.ಎಸ್., ರವರು ಮತ್ತು ತಿ.ತಿ.ದೇ.,ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿಯವರು ಮತ್ತು ಸಿ.ವಿ.ಎಸ್.ಓ. ಶ್ರೀ ಗೋಪಿನಾಥ ಜೆಟ್ಟಿ ಐ.ಎ.ಎಸ್., ಮತ್ತು ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ,ಶ್ರೀ ವಿ.ವೀರಬ್ರಹ್ಮ ಐ.ಎ.ಎಸ್., ಮತ್ತು ತಿರುಪತಿ ಮೇಯರ್, ಮತ್ತು ಇತರ ಉನ್ನತಾಧಿಕಾರಿ ಪಾಲ್ಗೊಂಡರು.
















05-01-2022 ರಂದು ತಿ.ತಿ.ದೇ. ಸಂಗೀತ ಮತ್ತು ನೃತ್ಯ ಕಲಾಶಾಲೆಗೆ ಆಗಮಿಸಿದ ಕಂಚಿ ಪೀಠಾಧಿಪತಿ ಶ್ರೀ ಶ್ರೀ ಶ್ರೀ ವಿಜಯೇಂದ್ರ ಸರಸ್ವತಿ ಸ್ವಾಮಿಯವರು. ಕಂಚಿ ಸ್ವಾಮಿಯವರೊಂದಿಗೆ ತಿ.ತಿ.ದೇ. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ.ಎಸ್. ಭಾರ್ಗವಿ, ಐ.ಎ.ಎಸ್. ರವರು ಪಾಲ್ಗೊಂಡರು.



21-01-2022 ರಿಂದ 27-01-2022 ರ ವರೆಗೆ ತಿರುಚಾನೂರು ಶ್ರೀ ಪದ್ಮಾವತಿ ಅಮ್ಮನವರ ಆಲಯದಲ್ಲಿ ನಡೆದ "ನವಕುಂಡಾತ್ಮಕ ಸ್ತ್ರೀ ಯಾಗಂ" ನಡೆಯಿತು. ಮಹಾಪೂರ್ಣಾಹುತಿಯೊಂದಿಗೆ ಮುಕ್ತಾಯದ ದೃಶ್ಯ






26-01-2022 ರಂದು 73 ನೇ ಗಣತಂತ್ರದಿನೋತ್ಸವ ಸಂದರ್ಭದಲ್ಲಿ ಮಾತನಾಡುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ ಐ.ಎ.ಎಸ್. ರವರು



26-01-2022 ರಂದು 73 ನೇ ಗಣತಂತ್ರ ದಿನೋತ್ಸವ ಸಂದರ್ಭದಲ್ಲಿ ಬಾವುಟವನ್ನು ಹಾರಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ ಐ.ಎ.ಎಸ್. ರವರು, ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ.ಎ.ಇ.ಓ. ಶ್ರೀ ಎ.ವಿ. ಧರ್ಮಾರೆಡ್ಡಿ ಯವರು, ತಿರುಪತಿ ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ. ವಿ. ವೀರಬ್ರಹ್ಮ ಐ.ಎ.ಎಸ್. ಮತ್ತು ಎಸ್.ವಿ.ಎಸ್.ಓ. ಶ್ರೀ ಗೋಪಿನಾಥ್ ಜೆಟ್ಟಿ ಮತ್ತು ಅಡಿಷನಲ್ ಎಸ್.ವಿ.ಎಸ್.ಓ. ಶ್ರೀ. ಶಿವಕುಮಾರ್‌ರೆಡ್ಡಿ ಮತ್ತು ಎಫ್.ಎ. ಮತ್ತು ಸಿ.ಎ.ಓ. ಶ್ರೀ ಓ.ಬಾಲಾಜಿ ಮತ್ತು ಎಸ್.ವಿ.ಬಿ.ಸಿ. ಸಿ.ಇ.ಓ. ಶ್ರೀ ಸುರೇಶ್ ಕುಮಾರ್ ಮತ್ತು ಇತರ ಉನ್ನತಾಧಿಕಾರಿಗಳು ಪಾಲ್ಗೊಂಡರು

# ಕಪಿಲ ತೀರ್ಥ

ಅಲಿಪಿರಿಯ ಪೂರ್ವಕ್ಕೆ ಕಪಿಲತೀರ್ಥ ಜಲಪಾತವಿದೆ. ಇಲ್ಲಿನ ಶಿವಾಲಯ ಕಪಿಲೇಶ್ವರಸ್ವಾಮಿ ಆಲಯ. ಬೆಟ್ಟದ ಮೇಲಿನ ಮಳೆಯ ನೀರು ಕೆಳಕ್ಕೆ ಧುಮುಕುವುದರಿಂದ ಆದ ಜಲಪಾತ. ಇಲ್ಲಿ ಕಪಿಲಮುನಿಯಿಂದ ಪೂಜಿತನಾದ ಕಪಿಲೇಶ್ವರಸ್ವಾಮಿಯ ನೆಲೆಯಿಂದಾಗಿ ಕಪಿಲ ತೀರ್ಥವಾಗಿ ಪುಷ್ಕರಿಣಿಯಾಗಿದೆ. ಕಪಿಲೇಶ್ವರಸ್ವಾಮಿ ಆಲಯದಲ್ಲಿ ಒಂದು ಅರ್ಧ ಗುಹೆಯುಂಟು. ಬೆಟ್ಟದ ಗುಹೆಯಲ್ಲಿ ಶಿವಲಿಂಗಕ್ಕೆ ಹತ್ತನೆಯ ಶತಮಾನದಲ್ಲಿ ಚೋಳರ ಅಧೀನದ ಕೊತ್ತೂರು ಅಗ್ರಹಾರದ ಒಡೆಯ - ಬ್ರಹ್ಮಮಾರಾಯನಾದ ಮುನಿಯದರಯ್ಯನು ನಿರ್ಮಿಸಿದ ಆಲಯ. ಜಲಪಾತದ ಪೂರ್ವ ಪಶ್ಚಿಮಗಳಲ್ಲಿ ವಿಜಯನಗರದ ರಾಜ ಅಚ್ಯುತರಾಯನು ಸಂಧ್ಯಾವಂದನ ಮಂಟಪಗಳನ್ನು ನಿರ್ಮಿಸಿದ್ದೇ ಅಲ್ಲದೆ, ಜಲಪಾತದ ನಾಲ್ಕೂ ಕಡೆ ಮೆಟ್ಟಿಲುಗಳನ್ನು ಹಾಕಿಸಿ, ಚಕ್ರ ಮುದ್ರೆಯ ಶಿಲೆಗಳನ್ನು ನೆಟ್ಟಿರುವುದರಿಂದ ಇದನ್ನು ಚಕ್ರತ್ತಾಳ್ವಾರ್ ತೀರ್ಥ ಎಂದೂ ಕರೆಯಲಾಗಿದೆ.

ಜಲಾಪಾತದ ಪೂರ್ವಕ್ಕೆ ಪಶ್ಚಿಮಾಭಿಮುಖವಾದ ಆಲಯವಿದೆ. ಮೊದಲಿಗೆ ವಿಶಾಲವಾದ ಒಂದು ಮಣಿ ಮಂಟಪ. ಇದರ ಉತ್ತರಕ್ಕೆ ಗಣಪತಿ ವಿಗ್ರಹವುಳ್ಳ ಒಂದು ಮುಖಮಂಟಪವಿದೆ. ಈ ಮಂಟಪದ ಪೂರ್ವಕ್ಕೆ ಇರುವ ದ್ವಾರದಿಂದ ಒಳಬಂದರೆ ಇರುವ ಅಂತರಾಳದಲ್ಲಿ ಗರ್ಭಗುಡಿಯ ಪ್ರದಕ್ಷಿಣಾಪಥ. ಈ ಪಥವು ಕಪಿಲೇಶ್ವರ ಸ್ವಾಮಿಯ ಗರ್ಭಗುಡಿಯನ್ನೂ ಅದರ ಬಲಗಡೆಯ ಅಮ್ಮನವರ ಗುಡಿಯನ್ನೂ ಸುತ್ತಿ ಬರುವುದು. ಗರ್ಭಗುಡಿಯಲ್ಲಿ ನಿತ್ಯ ಪೂಜೆಗೊಳ್ಳುವ ಕಪಿಲೇಶ್ವರಸ್ವಾಮಿ ಇದ್ದಾನೆ. ಪ್ರದಕ್ಷಿಣಾ ಪಥದ ದಕ್ಷಿಣದಲ್ಲಿ ಒಂದು ಹೊರಮಂಟಪ. ಇಲ್ಲಿನ ಎತ್ತರವಾದ ವೇದಿಕೆಯ ಮೇಲೆ ಸುಬ್ರಹ್ಮಣ್ಯಸ್ವಾಮಿ, ಕಾಶಿ ವಿಶ್ವೇಶ್ವರ ಲಿಂಗ, ವಿನಾಯಕ, ಸೂರ್ಯನಾರಾಯಣ ಮುಂತಾದ ಹಲವು ವಿಗ್ರಹಗಳಿವೆ. ಈ ಮಂಟಪದಿಂದ ಹೊರಕ್ಕೆ ಬೆಟ್ಟಕ್ಕೆ ಹೊಂದಿಕೊಂಡಂತೆ ಒಂದು ವಿಶಾಲವಾದ ಅಂಗಳ. ಮೊದಲಿನ ಮಹಾಮಂಟಪದ ಪಶ್ಚಿಮದಲ್ಲಿದೆ. ನಡುವೆ ಉಗ್ರಾಣ, ಪಾಕಶಾಲೆಗಳಿವೆ. ಇಲ್ಲಿನ ಪ್ರತ್ಯೇಕವಾದ ಕಿರುಗುಡಿಯಲ್ಲಿ ಶಿವಲಿಂಗವೂ ಇದೆ.

ಕಪಿಲತೀರ್ಥದ ಆರಂಭದಲ್ಲಿ ವಿಶಾಲವಾದ ರಾಜ ಗೋಪುರವುಂಟು. ಇದರ ಮೂಲಕ ಒಳಬಂದರೆ ತಾಳ್ಳಪಾಕದವರು ನಿರ್ಮಿಸಿದ ಲಕ್ಷ್ಮೀನಾರಾಯಣ ಸ್ವಾಮಿ ಆಲಯವು ಒಳಾಂಗಣದ ಎಡಭಾಗದಲ್ಲಿ ಎತ್ತರವಾದ ಜಗಲಿಯ ಮೇಲೆ ಇದೆ. ಬಲಗಡೆಗೆ ರಾಧಾಕೃಷ್ಣ ಆಲಯ, ನಡುವೆ ಎತ್ತರವಾದ ಕಂಬಗಳಿಂದ ಕೂಡಿದ ಹೊರಮಂಟಪ. ಇದಾದ ನಂತರ ಪುಷ್ಕರಿಣಿಗೆ ಪ್ರವೇಶ. ಎಡಗಡೆಯ (ಪಶ್ಚಿಮದ) ಸಂಧ್ಯಾವಂದನ ಮಂಟಪದ ಮೇಲುಗಡೆ ಒಂದು ಅರ್ಧ ಗೋಡೆಯಲ್ಲಿ ಪ್ರಹ್ಲಾದ ವಿಗ್ರಹ, ನರಸಿಂಹನ ವಿಗ್ರಹವುಂಟಾದರೂ, ಮಿಕ್ಕ ಎರಡು ಆಲಯಗಳಲ್ಲಿಯೂ, ಕಪಿಲೇಶ್ವರಸ್ವಾಮಿ ಆಲಯದಲ್ಲಿಯೂ ಇರುವಂತೆ ನಿತ್ಯಪೂಜೆಯಿಲ್ಲ.

ಕಪಿಲ ತೀರ್ಥದ ಹೊರಭಾಗದಲ್ಲಿ ಎಂದರೆ ಕಪಿಲೇಶ್ವರ ಸ್ವಾಮಿ ಆಲಯಕ್ಕೆ ಹೋಗುವ ದಾರಿಯಲ್ಲಿ ಮೊದಲಿಗೆ ಆಂಜನೇಯ ಸ್ವಾಮಿಯ ಆಲಯವುಂಟು. ಅದರ ನಂತರ ನಮ್ಮಾಳ್ವಾರ್ ಆಲಯವಿದೆ. ಹತ್ತನೆಯ ಶತಮಾನದ ಈ ಆಲಯದಲ್ಲಿ ಎತ್ತರದ ಸುಂದರವಾದ ಕುಳಿತ ಭಂಗಿಯಲ್ಲಿರುವ ನಮ್ಮಾಳ್ವಾರ್ ವಿಗ್ರಹವಿದೆ. ಶಿಥಿಲವಾಗಿದ್ದ ಈ ಆಲಯವನ್ನು ಇಪ್ಪತ್ತನೆಯ ಶತಮಾನದಲ್ಲಿ ಜೀರ್ಣೋದ್ಧಾರಗೊಳಿಸಿ ನಿತ್ಯ ಪೂಜೆಯ ವ್ಯವಸ್ಥೆ ಮಾಡಲಾಗಿದೆ.

ಕಪಿಲೇಶ್ವರಸ್ವಾಮಿ ಆಲಯದಲ್ಲಿ ಶಿವರಾತ್ರಿಯ ಹಿಂದೆ ಮುಂದೆ ಹನ್ನೊಂದು ದಿನಗಳ ಬ್ರಹ್ಮೋತ್ಸವ ನಡೆಯುತ್ತದೆ. ತಿರುಮಲೆ ತಿರುಪತಿಗಳಲ್ಲಿ ನಡೆಯುವ ಬ್ರಹ್ಮೋತ್ಸವದಂತೆಯೇ ವಾಹನ ಸೇವೆಗಳು ವಿಜೃಂಭಣೆಯಿಂದ ನಡೆಯುತ್ತವೆ. ಇಲ್ಲಿ ನಡೆಯುವ ಡಿಸೆಂಬರ್ - ಜನವರಿಯ ತೆಪ್ಪೋತ್ಸವಗಳು ಅತಿ ಸುಂದರ ಸಂಭ್ರಮಗಳಿಂದ ಕೂಡಿರುತ್ತವೆ.





# ಲಕ್ಷ್ಮೀ ಬಾರಮ್ಮ... ಬಾರಮ್ಮ!

– ಶ್ರೀಮತಿ. ಕೆ.ವಿ. ಪದ್ಮಾವತಿ



ಪುರಂದರದಾಸರ 'ಭಾಗ್ಯದ ಲಕ್ಷ್ಮೀ ಬಾರಮ್ಮ - ಕೃತಿ ಎಷ್ಟು ಜನಜನಿತ ಅಂದರೆ ಈ ಹಾಡು ಕೇಳದವರೂ ಇಲ್ಲ. ಹಾಡು ಹಾಡದ ಗಾಯಕರೂ ಇಲ್ಲ, ಹಾಡು ನುಡಿಸದ ವಾದ್ಯಕಾರರೂ ಇಲ್ಲ.

ಭಾಗ್ಯದ ಲಕ್ಷ್ಮೀ. ನೀನು ಯಾವಾಗ ಹೇಗೆ ಬರ ಬೇಕು, ಬಂದ ಮೇಲೆ ಏನು ಮಾಡಬೇಕು. ಎಲ್ಲವನ್ನು ದಾಸರೇ ಪಟ್ಟಿ ಮಾಡಿದ್ದಾರೆ. ಅದು ಹೀಗಿದೆ ನೋಡಿ.

ಲಕ್ಷ್ಮೀ.. ನೀನು ಹೇಗೆ ಬರಬೇಕು ಗೊತ್ತಾ?

ಹೆಜ್ಜೆಯ ಮೇಲೆ ಹೆಜ್ಜೆಯ ನಿಕ್ಕುತ ಗೆಜ್ಜೆ ಕಾಲ್ಗಳ ಧ್ವನಿಯ ತೋರುತ, ಮಜ್ಜಿಗೆಯೊಳಗಿನ ಬೆಣ್ಣೆಯಂತೆ (ಹೇಗೆ ಒಮ್ಮೆ ಬೆಣ್ಣೆ ಬಂದ ನಂತರ,ಪುನಃ ಮೊಸರಾಗಲು ಸಾಧ್ಯವಿಲ್ಲಾ. ಹಾಗೆ ಲಕ್ಷ್ಮಿ ಸ್ಥಿರವಾಗಿ ನಮ್ಮ ಮನೆಯಲ್ಲಿ ನಿಲ್ಲಲಿ) ಕನಕ ವೃಷ್ಟಿಯ ಕರೆಯುತ ಬಾರೆ ಮನಕಾ ಮನೆಯ ಸಿದ್ಧಿಯ ತೋರೆ ಕಂಕಣ ಕೈಯ ತಿರುವುತ ಬಾರೆ.

ಲಕ್ಷ್ಮೀ.. ನೀನು ಯಾವಾಗ ಬರಬೇಕು ಗೊತ್ತಾ?

ಸಜ್ಜನ ಸಾಧು ಪೂಜೆಯ ವೇಳೆಗೆ ಶುಕ್ರವಾರದ ಪೂಜೆಯ ವೇಳೆಗೆ.

ಲಕ್ಷ್ಮೀ.. ನೀನು ಬಂದ ಮೇಲೆ ಏನು ಮಾಡಬೇಕು ಗೊತ್ತಾ?

ಸಂಖ್ಯೆ ಇಲ್ಲದ ಭಾಗ್ಯವ ಕೊಟ್ಟು ಸಕ್ಕರೆ ತುಪ್ಪದ ಕಾಲುವೆ ಹರಿಸಿ

ಲಕ್ಷ್ಮೀ.. ನೀನು ಇನ್ನೇನು ಮಾಡಬೇಕು ಗೊತ್ತಾ?

ಅತ್ತಿತ್ತಗಲದೆ ಭಕ್ತರ ಮನೆಯಲ್ಲಿ ನಿತ್ಯ ಮಹೋತ್ಸವ, ನಿತ್ಯ ಸುಮಂಗಲ.

ಲಕ್ಷ್ಮೀ.. ನಾನು ಹೊಗಳೋದು ಅಲ್ಲ. ನಿಜ ಹೇಳ್ಬೇಕು ಅಂದ್ರೆ.ನೀನು ಯಾರು, ಹೇಗೆ ಇದ್ದೀಯ ಗೊತ್ತಾ?



ದಿನಕರ ಕೋಟಿ ತೇಜದಿ ಹೊಳೆಯುವ ಜನಕ ರಾಯನ ಕುಮಾರಿ,ಸತ್ಯವ ತೋರುವ ಸಾಧು ಸಜ್ಜನರ ಚಿತ್ತದಿ ಹೊಳೆಯುವ ಪುತ್ಥಳಿ ಗೊಂಬೆ ಕುಂಕುಮಾಂಕಿತೆ ಪಂಕಜಲೋಚನೆ ವೆಂಕಟ ರಮಣನ ಬಿಂಕದ ರಾಣಿ ಅಕ್ಕರೆಯುಳ್ಳ ಅಳಗಿರಿರಂಗನ ಚೊಕ್ಕ ಪುರಂದರ ವಿಠಲನ ರಾಣಿ.

ದಾಸರು ವಿನಮ್ರವಾಗಿ ಇಷ್ಟೆಲ್ಲಾ ಹಾಡಿ ಹೊಗಳಿದರೆ ಲಕ್ಷ್ಮೀ ಬಾರದಿರುವಳೇ? ಆದರೆ ಅವರು ಲಕ್ಷ್ಮೀಯನ್ನು ಪೂಜಿಸಿದ್ದಷೇ ..

ಲಕ್ಷ್ಮೀ ಬೇಕಾಗಿರುವುದು ನಿಮಗೆ, ನಮಗೆ ಅಲ್ಲವೇ? ಅವರು ದಾರಿ ಯಾವುದಯ್ಯಾ ವೈಕುಂಠಕೆ ಎಂದರು. ಹಾಗೆಯೇ ಇಷ್ಟು ದಿನ ವೈಕುಂಠ ಎಷ್ಟು ದೂರ ಎನ್ನುತಲಿದ್ದೆ ಅಂದವರು "ಇಲ್ಲೇ ವೈಕುಂಠ ಕಾಣಿರೋ" ಅಂತಾನೂ ಅಂದರು. ಕಾಸು. ಕಾಸು ಅನ್ನುತ್ತಿದ್ದವರು,ಚಿಕ್ಕಾಸೂ ಇಲ್ಲದೆ ಶ್ರೀನಿವಾಸನ ಅರಸಿ ದೇಶಾಂತರ ಹೊರಟರು.

ಕಮಲನಾಭನಾದ ವಿಷ್ಣುವು ತನ್ನ ದೇಹದಿಂದ ಒಂದು ಬೃಹತ್ ಕಮಲದ ಹೂವನ್ನು ಹೊರಚಾಚಿದಾಗ, ಅದರ ಮೇಲೆ ಕಮಲಭವ ಅಂದರೆ ಸೃಷ್ಟಿಕರ್ತನಾದ ಬ್ರಹ್ಮ ಕುಳಿತಿರುತ್ತಾನೆ. ಸಾವಿರ ಸುವರ್ಣ ದಳಗಳುಳ್ಳ ಈ ಕಮಲ ವಿಶ್ವ ವಿಸ್ತರಿಸಿದಂತೆ ತಾನೂ ಬೆಳೆಯುತ್ತಾ ಹೋಗುತ್ತದೆ.

ಅದರ ದಳಗಳಿಂದ ಪರ್ವತಗಳು ಉದ್ಭವಿಸುತ್ತವೆ, ನೀರು ಪ್ರವಹಿಸುತ್ತದೆ. ದಳದ ಮುಂಭಾಗದಲ್ಲಿ ದೇವತೆಗಳ ಚಿತ್ರ, ದಳದ ಹಿಂಭಾಗದಲ್ಲಿ ರಾಕ್ಷಸರ ಮತ್ತು ಸರ್ಪಗಳ ಚಿತ್ರವಿದೆ. ಪ್ರತಿಯೊಂದು ಕಲ್ಪ ಅಥವಾ ದಿನ ಮುಗಿದ ನಂತರ, ವಿಷ್ಣುವಿನ ನಾಭಿಯ ಕಮಲದ ಮೇಲೆ ಬ್ರಹ್ಮ ಮರು ಹುಟ್ಟು ಪಡೆಯುತ್ತಾನೆಂದು 'ಪದ್ಮ ಪುರಾಣದಲ್ಲಿ ಹೇಳಲಾಗಿದೆ.

ಕಮಲವನ್ನು ಕೈಯಲ್ಲಿ ಹಿಡಿಯುವುದು ಅನೇಕ ದೇವರುಗಳ ವೈಶಿಷ್ಟ್ಯವಾಗಿದೆ. ವಿಷ್ಣು ತನ್ನ ನಾಲ್ಕು ಕೈಗಳ ಪೈಕಿ ಒಂದು ಕೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದಾನೆ. ಪ್ರಾಚೀನ ಶಿಲ್ಪಗಳಲ್ಲಿ ಅದು ಆರನೇ ಜನನ ಚಿಹ್ನೆಯಾಗಿದೆ.ಅವಲೋಕಿತನನ್ನು 'ಪದ್ಮಪಾಣಿ' ಎಂದು ಕರೆಯಲಾಗಿದೆ.

ಶುಭ ಶಕುನದ ಎಂಟು ಚಿಹ್ನೆಗಳಲ್ಲಿ ಕಮಲವೂ ಒಂದು ಹಾಲ್ಗಡಲನ್ನು ಮಥಿಸಿದಾಗ ಮೊದಲು ಬಂದ ವಸ್ತುಗಳಲ್ಲಿ ಇದು ಒಂದು. ಕಮಲದೊಂದಿಗೆ ಹೆಣೆದುಕೊಂಡ ಲಿಂಗವನ್ನು ಶಿವ ತನ್ನ ದೇವತೆಯಾದ ಶಕ್ತಿಗೆ ಇದನ್ನು ಕೊಡುತ್ತಾನೆ.ಕಾಳಿ, ಪಾರ್ವತಿಯಾದ ಅವಳು ನಿರಂತರ ಪೀಳಿಗೆಯ ಸಂಕೇತವಾದ ಕಮಲವನ್ನು ಒಂದು ಕೈಯಲ್ಲಿ ಹಿಡಿದಿದ್ದಾಳೆ. ಎಲ್ಲೆಲ್ಲೂ ತುಂಬಿದ್ದ ಈ ವಿಶ್ವದ ಮೇಲೆ ಒಂದು ಕಮಲದ ಎಳೆಯನ್ನು ಪ್ರಜಾಪತಿ ಕಂಡನೆಂದೂ ಅವನೇ ಸೃಷ್ಟಿಕರ್ತನೆಂದು ಪುರಾಣಗಳಲ್ಲಿ ಹೇಳಲಾಗಿದೆ.

### ಲಲಿತಾ ಸಹಸ್ರನಾಮದಲ್ಲಿ

ಶ್ರೀಲಲಿತಾಂಬಿಕೆಯ ೫೨೮ ನೇ ನಾಮದಲ್ಲಿ ತಾಯಿ ಲಲಿತಾಂಬಿಕೆಯನ್ನು ಹೀಗೆ ವರ್ಣಿಸಲಾಗಿದೆ.

ಸಹಸ್ರದಳ ಪದ್ಮಸ್ಥಾಯೈ ಸರ್ವವರ್ಣೋಪ ಶೋಭಿತಾಯೈ
ಸರ್ವಾಯುಧಧರಾಯೈ ಶುಕ್ಲ ಸಂಸ್ಥಿತಾಯೈ ಸರ್ವತೋಮುಖ್ಯೈ

ಯೋಗಿನಿಯರಲಂತಿಯ ಯೋಗಿಸಿ ಯಾಕಿನೀ, ಸಹಸ್ರಾರದಲಿ ಉಪಸ್ಥಿತೆ ಸಹಸ್ರದಳ ಪದ್ಮರೂಪಿ ಸಹಸ್ರಾರ, ಬ್ರಹ್ಮರಂಧ್ರ ದೈವೀಸಂವಹನ ತರುತೆ ಕ್ಲಿಷ್ಟ-ಉತ್ಕೃಷ್ಟ ನಿಜ ಚಕ್ರವಲ್ಲದ ಕಿರೀಟ, ಬ್ರಹ್ಮಾಂಡ ಆತ್ಮಗಳ ಮಿಲನದಲ್ಲಿ ತಿಂಗಳಿನ ಮೀರಿದ ಕಾಂತಿ ಸಹಸ್ರಾರ ಪರಿಧಿಗೆ ಲೇಪಿಸಿ, ಬ್ರಹ್ಮಕೆ ಬೆಸೆವಲ್ಲಿ॥

ಕಮಲದ ಹೂವಿಗೆ ಸಂಬಂಧಪಟ್ಟ ಅರ್ಥ ಸೂಕ್ಷ್ಮತೆಗಳು

**1. ಸ್ತ್ರೀಯ ಸ್ವರೂಪ :** ಸೃಷ್ಟಿಕ್ರಿಯೆ, ಶಕ್ತಿ ಮತ್ತು ಜೀವನದ ಪ್ರೇರಕ ಅಂಶ.

**2. ಫಲವಂತಿಕೆ :** ಪಕ್ವತೆ, ಸಮೃದ್ಧಿ, ಅದೃಷ್ಟ ಶುಭ, ಸಂತಸದ ಶಕುನ, ಸಂತಾನ ಪ್ರಾಪ್ತಿ, ದೀರ್ಘಾಯುಷ್ಯ ಮತ್ತು ಕೀರ್ತಿ.

**3. ಮಾತೃದೇವತೆ :** ನದಿಗಳ ಜನನ ಮೂಲ, ಜೀವ ದಾಯಕ, ಭೂಮಿ, ಸೃಷ್ಟಿ ಪ್ರಾಣ, ಚೈತನ್ಯ, ಸ್ವಯಂ ಸೃಷ್ಟಿ ಶೀಲ, ವಿಶ್ವದ ಪ್ರಮುಖ ಪ್ರಕ್ರಿಯೆ.

**4. ದೈವತ್ವ :** ಅತಿಮಾನವ ಹುಟ್ಟು, ನಿರಂತರ ಪೀಳಿಗೆ ಉತ್ಪತ್ತಿ,ಮರುಹುಟ್ಟು.

**5.ಅಮರತ್ವ :** ಪುನರುಜ್ಜೀವನ ಮತ್ತು ಜೀವರಕ್ಷಣೆ, ಜ್ಞಾನೋದಯ ತಿರುಳು.

**6. ಸೂರ್ಯ ಪ್ರತಿಷ್ಠಾಪಕ:** ಆತ್ಮಗಳನ್ನು ಆಸ್ವಾದಿಸುವ ಹೂ ಮತ್ತು ಬುದ್ಧನ ವಿಶ್ರಾಂತಿ ತಾಣ.


**7. ಪಾವಿತ್ರ್ಯ:** ಆಧ್ಯಾತ್ಮಿಕ ನಿಯಮ ರಕ್ಷಣೆ ಮತ್ತು ರಚನೆ, ನಿರ್ವಾಣ ಮಾರ್ಗದರ್ಶಿ.




ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು
ಟೋಲ್ ಫ್ರಿ ನಂಬರ್
18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!
ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.



# 108 ವೈಷ್ಣವ ದಿವ್ಯ ಕ್ಷೇತ್ರಗಳು

- ತೆಲುಗು ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್

ಅನುವಾದ : ಸೂರ್ಯವಂಶಿ

ಶ್ರೀಯಃ ಪತಿಯಾದ ಶ್ರೀಮನ್ನಾರಾಯಣನು ಸಕಲ ಜೀವರಾಶಿಗಳ ಉದ್ಧಾರಕ್ಕಾಗಿ, ಅಧರ್ಮವನ್ನು ಅಳಿಸಿ ಧರ್ಮವನ್ನು ರಕ್ಷಿಸುವುದಕ್ಕಾಗಿ ಐದು ರೂಪವನ್ನು ಧರಿಸಿದ್ದಾನೆಂದು ಶಾಸ್ತ್ರಗಳು ತಿಳಿಸುತ್ತಿವೆ. ಅವು ೧. ಪರರೂಪ ೨.ವ್ಯೂಹರೂಪ ೩.ವಿಭವರೂಪ ೪. ಅಂತರ್ಯಾಮಿ ರೂಪ ೫. ಆರ್ಚಾರೂಪ, ಇದರಲ್ಲಿ ಕೊನೆಯದಾದ " ಆರ್ಚಾರೂಪ" ವನ್ನು ಭೂಲೋಕದಲ್ಲಿ ವಿಶೇಷವಾಗಿ ಪ್ರತಿಯೊಬ್ಬರಿಗೂ ನಯನಗೋಚರನಾಗಿ ಶ್ರೀರಂಗದಿಂದ ಮೊದಲುಗೊಂಡು ನೂರಾಎಂಟು ದಿವ್ಯ ಸ್ಥಳಗಳಲ್ಲಿ ದಿವ್ಯ ಮಂಗಳ ವಿಗ್ರಹ ರೂಪದಲ್ಲಿ ನೆಲಸಿ, ಭಕ್ತರಿಗೆ ಅನುಗ್ರಹಿಸುತ್ತಿರುವಂತಹಾ ದಿವ್ಯರೂಪವಾಗಿದೆ. ತಿರುಪ್ಪಾಲ್ ಕಡಲ್ (ಕ್ಷೀರಸಾಗರ ಅಥವಾ ಹಾಲ್ಗಡಲು) ಶ್ರೀವೈಕುಂಠದಲ್ಲಿ ನೆಲೆಸಿರುವ ಸಾಕ್ಷತ್ತು ದೇವದೇವನಾದ ಲಕ್ಷ್ಮೀವಲ್ಲಭನು ಸ್ವತಾಹಾ ತಾನೇ ಈ ಕ್ಷೇತ್ರಗಳಲ್ಲಿ ನೆಲೆಸಿದ್ದು ಭಕ್ತಾನುಗ್ರಹಕಾರಕನಾಗಿ ರಾರಾಜಿಸುತ್ತಿದ್ದಾನೆ. ಇಂತಹಾ ಮಹಾಮಹಿಮನಾದ ಪುರುಷೋತ್ತಮನ ಶ್ರೀಯಃಪತಿಯ ಪರಿವಾರವೆಂದು ಪರಿಗಣಿಸಲಾಗುತ್ತಿರುವ ಅನಂತ-ಗರುಡ- ವಿಷ್ವಕ್ಸೇನ, ಆಯುಧಾಭರಣಗಳು ಇಹ, ಪೃಥ್ವಿಲೋಕದಲ್ಲಿ ಭಗವಂತನ ಅಜ್ಞಾನುಸಾರವಾಗಿ ಆಳ್ವಾರುಗಳಾಗಿ ಜನ್ಮಿಸಿದರು. ಆಗಾಧವಾದ ಭಗವದ್ಭಕ್ತಿ ಸಿಂಧುಗಳಾದ ಪನ್ನಿದ್ದರು ಆಳ್ವಾರುಗಳ ಮೂಲಕ ಕೀರ್ತಿಸಲ್ಪಡುತ್ತಿರುವ ದಿವ್ಯಕ್ಷೇತ್ರಗಳೇ "ದಿವ್ಯ ದೇಶಗಳೆಂದು", "ದಿವ್ಯ ತಿರುಪತಿಗಳೆಂದು ಕೊಂಡಾಡಲ್ಪಡುತ್ತಿವೆ. ಒಟ್ಟು ಅವು ನೂರಾಎಂಟು ಇವೆ. ಈ ಕೆಳಕಂಡತೆ ಅವುಗಳನ್ನು ವಿಭಜಿಸಲಾಗಿದೆ.

| | | |
|---|---|---|
| 1. ಚೋಳನಾಡು | - | 40 |
| 2. ಪಾಂಡ್ಯನಾಡು | - | 18 |
| 3. ಮಲೈನಾಡು | - | 13 |
| 4. ನಡುನಾಡು | - | 02 |
| 5- ತೊಂಡೈನಾಡು | - | 22 |
| 6. ವಡನಾಡು | - | 12 |
| 7. ತಿರುನಾಡು | - | 01 |
| ಒಟ್ಟು | - | 108 |

ಒಂದೊಂದು ದಿವ್ಯದೇಶದಲ್ಲೂ ದೇವದೇವನ ದಿವ್ಯ ಸ್ವರೂಪ ಅತ್ಯದ್ಭುತವಾಗಿ ನೆಲಸಿದೆ. ಒಂದೊಂದು ದಿವ್ಯದೇಶಕ್ಕೂ



ಕೀರ್ತಿಸಲ್ಪಡುತ್ತಿವೆ. ಅವು ಒಟ್ಟು ನೂರಾಎಂಟು ದಿವ್ಯಕ್ಷೇತ್ರಗಳು ಅದರಲ್ಲಿ ಮೊಟ್ಟ ಮೊದಲನೆಯ ದಿವ್ಯದೇಶವೆಂದು ಪರಿಗಣಿಸಲ್ಪಡುತ್ತಿರುವುದು ಶ್ರೀರಂಗಕ್ಷೇತ್ರ,ತಮಿಳು ಸಂಪ್ರದಾಯದ ಪ್ರಕಾರ ಈ ಕ್ಷೇತ್ರವನ್ನು,'ಕೋಯಿಲ್'ಎಂದು ಕೊಂಡಾಡುತ್ತಿದೆ. ಈ ಕ್ಷೇತ್ರದ ವೈಭವವನ್ನು, ವೈಶಿಷ್ಟ್ಯತೆಯನ್ನು, ಕ್ಷೇತ್ರಾಧೀಶನಾದ ಶ್ರೀರಂಗನಾಥನ ಮಹಿಮೆಯನ್ನು ಇದರಲ್ಲಿ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೋಣ.

ಶ್ರೀಮನ್ನಾರಾಯಣ ಸ್ವತಹಾ ಅವತರಿಸಿದ (ಸ್ವಯಂ ವ್ಯಕ್ತ) ಎಂಟು ಕ್ಷೇತ್ರಗಳಲ್ಲಿ ಶ್ರೀರಂಗಂ ಮೊಟ್ಟ ಮೊದಲನೆಯದಾಗಿದೆ. ದಿವ್ಯದೇಶಗಳಲ್ಲಿ ಮೊದಲನೆಯದು, ತಿರುವರಂಗಂ, ಪೆರಿಯಕೋಯಿಲ್, ಭೂಲೋಕ ವೈಕುಂಠ, ಭೋಗಮಂಡಪ ಎಂದು ಈ ಕ್ಷೇತ್ರವನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಈ ದೇವಾಲಯಕ್ಕೆ ಮಹತ್ತರವಾದ ಚರಿತ್ರೆ ಕೂಡಾ ಇದೆ.

ಸ್ಥಳಪುರಾಣ,ಇತಿಹಾಸ,ಆಳ್ವಾರುಗಳ ದಿವ್ಯ ಪ್ರಬಂಧಗಳು,ಆಚಾರ್ಯರ ಸೋತ್ರಗಳು,ಹೀಗೆ ಎಷ್ಟೋ ಜನ ಭಕ್ತರನ್ನು ವಿಶೇಷವಾಗಿ ಆಕರ್ಷಿಸುತ್ತಿವೆ.

ನಮ್ಮ ಸೌಭಾಗ್ಯದಿಂದಾಗಿ 'ಕೋಯಿಲ್' ಎಂದೇ ಪ್ರಸಿದ್ಧವಾಗಿರುವ ಶ್ರೀರಂಗಂನಿಂದ ಮೊದಲುಗೊಂಡು ಶ್ರೀವೈಕುಂಠದವರೆಗೂ ಇರುವ ದಿವ್ಯ ದೇಶಗಳ ವೈಭವನ್ನು ತಿರುಮಲ ತಿರುಪತಿ ದೇವಸ್ಥಾನದ ಅಡಿಯಲ್ಲಿ "ಸಪ್ತಗಿರಿ" ಮಾಸ ಪತ್ರಿಕೆಯ ದ್ವಾರಾ ತಿಳಿದು ಕೊಳ್ಳೋಣ... ಧನ್ಯರಾಗೋಣ...



ಈ ದೇವಾಲಯ ಒಂದು ಪ್ರಸಿದ್ಧಿ ಪಡೆದ ಸಾಮ್ರಾಜ್ಯಕ್ಕೆ ಸೇರಿದ ಚಾರಿತ್ರಾತ್ಮಕ ವೈಭವವನ್ನು ಸಾವಿರಾರು ವರ್ಷಗಳ ಅದ್ಭುತವಾದ ನಾಗರೀಕತೆಯನ್ನು ಸಾರಿ ಹೇಳುತ್ತಿದೆ.

ಉಭಯ ಕಾವೇರಿ ನದಿ ಮಧ್ಯದಲ್ಲಿರುವ ಒಂದು ದ್ವೀಪದಲ್ಲಿ ೧೫೬ ಎಕರೆಗಳ ವಿಸ್ತೀರ್ಣದಲ್ಲಿ ಏಳು ಪ್ರಾಕಾರಗಳಿಂದ ಅನೇಕ ಗೋಪುರಗಳಿಂದ ಕಂಗೊಳಿಸುತ್ತಾ ಇರುವ ಭೂಲೋಕ ವೈಕುಂಠವೇ ಈ ಶ್ರೀರಂಗ ಕ್ಷೇತ್ರ.

## ಶ್ರೀರಂಗ ವೈಭವ

ಶ್ರೀಯಃ ಪತಿಯಾದ ಶ್ರೀಮನ್ನಾರಾಯಣನು ಪರ-ವ್ಯೂಹ-ವಿಭವ ಅಂತರ್ಯಾಮಿ-ಅರ್ಚಾ-ಎಂಬ ಐದು ರೂಪಗಳಲ್ಲಿ ರಾರಾಜಿಸುತ್ತಿದ್ದಾನೆ. ಅದರಲ್ಲಿ ಅರ್ಚಾವತಾರದಲ್ಲಿ ಸಕಲ ಭಕ್ತರ ನಯನ ಗೋಚರನಾಗಿ ದಿವ್ಯ ಮಂಗಳ ವಿಗ್ರಹದಲ್ಲಿ ನೆಲೆಸಿ ಭೂಲೋಕದಲ್ಲಿ ಆಯಾ ದಿವ್ಯಕ್ಷೇತ್ರಗಳಲ್ಲಿ ನೆಲೆಗೊಂಡು ಭಕ್ತರನ್ನು ಅನುಗ್ರಹಿಸುತ್ತಿದ್ದಾನೆ. ಮುಖ್ಯವಾಗಿ ಭಗವಂತನ ಅನುಜ್ಞೆಯಿಂದ ಇಹಲೋಕ ದಲ್ಲಿ ಆಳ್ವಾರುಗಳಾಗಿ ಅವತರಿಸಿದ ಪನ್ನಿದ್ದರುಗಳ ಮೂಲ ಸ್ತುತಿಸಲ್ಪಟ್ಟ ದಿವ್ಯ ಮೂರ್ತಿಗಳು ನೆಲೆಸಿರುವ ಕ್ಷೇತ್ರಗಳು ದಿವ್ಯದೇಶಗಳೆಂದು,ದಿವ್ಯ ತಿರುಪತಿಗಳೆಂದು



ಈ ಆಲಯದ ಮುಖದ್ವಾರವಾದ ರಾಜಗೋಪುರ ಏಷಿಯಾ ಖಂಡದಲ್ಲೇ ಅತಿದೊಡ್ಡ ಗೋಪುರವೆಂದು ಹೆಸರುಗಳಿಸಿವೆ. ಶ್ರೀಮದಹೋಬಿಲದ ಮಠಾಧೀಶರಾದ ಶ್ರೀ ಶ್ರೀ ಶ್ರೀ ವೇದಾಂತ ದೇಶಿಕಯತೀಂದ್ರರು ಮಹಾದೇಶಿಕ್ ಎಂಬ ೪೪ ನೇ ಪೀಠಾಧಿಪತಿಯಾದ ಶ್ರೀಮದ್ ಅಳಗಿರಿಯ ಸಿಂಗರ್ ಮೂಲಕ ಈ ರಾಜಗೋಪುರವನ್ನು ನಿರ್ಮಾಣ ಗೊಳಿಸಿದರಂತೆ, ಇದು ಪ್ರಪಂಚ ಪ್ರಖ್ಯಾತಿ ಪಡೆದಿದೆ. ಈ ಆಲಯದ ವೈಭವವನ್ನು ಸ್ವಾಮಿಯ ವೈಭವವನ್ನು ನಾವು ಸಂಕ್ಷಿಪ್ತವಾಗಿ ತಿಳಿದುಕೊಳ್ಳಬಹುದು. ಈ ದೇವಾಲಯ ಎಷ್ಟೆಷ್ಟೋ ಉಪಾಲಯಗಳಿಂದ, ಕಂಡೂ ಕೇಳರಿಯದ ರೀತಿಯಲ್ಲಿ ನಡೆಯುವ ಉತ್ಸವ ವಿಶೇಷತೆಗಳಿಂದ ಈ ದೇವಾಲಯ ನಿತ್ಯವೂ ಶೋಭಾಯಮಾನವಾಗಿರುತ್ತದೆ. ಹೆಚ್ಚು ಕಡಿಮೆ ಇಲ್ಲಿಯ 322 ದಿನಗಳ ಕಾಲವೂ ಉತ್ಸವಗಳು ನಡೆಯುತ್ತಿರುತ್ತದೆ.

ತಮಿಳುನಾಡಿನ ತಿರುಚ್ಚಿಯ ಸಮೀಪದಲ್ಲಿ ಎಂಟು ಕಿ.ಮೀ. ದೂರದಲ್ಲಿ ಈ ಆಲಯನೆಲೆಗೊಂಡಿದೆ. ಈ ಆಲಯದಲ್ಲಿ ಸ್ವಾಮಿಯಾವ ರೀತಿ ನೆಲೆಸಿದ್ದಾನೆಂದು ಈ ಶ್ಲೋಕದ ಮುಖಾಂತರ ತಿಳಿದುಕೊಳ್ಳಬಹುದು.

ಸಪ್ತಪ್ರಾಕಾರಮಧ್ಯೇ ಸರಸಿಜಮುಕುಳೋದ್ಭಾಸಮಾನೇ ವಿಮಾನೇ
ಕಾವೇರಿ ಮಧ್ಯದೇಶಮ್ಮೃದುತರಫಣಿರಾಟ್ ಭೋಗಿಪರ್ಯಂಕಭಾಗೇ ।
ನಿದ್ರಾಮುದ್ರಾಭಿರಾಮಂ ಕಟಿನಿಕಟಶಿರಃ ಪಾರ್ಶ್ವವಿನ್ಯಸ್ತಹಸ್ತಂ
ಪದ್ಮಾಧಾತ್ರೀ ಕರಾಭ್ಯಾಂ ಪರಿಚಿತಚರಣಂ ರಂಗರಾಜಂ ಭಜೇಽಹಮ್॥

ಸಪ್ತಪ್ರಾಕಾರಗಳ ನಡುವೆ ಪ್ರಣವಾಕಾರವಿಮಾನಚ್ಛಾಯೆಯಲ್ಲಿ ಉಭಯಕಾವೇರಿ ನದಿಗಳ ನಡುವೆ ಆದಿಶೇಷನ ಮೇಲೆ ಪವಡಿಸಿ ಚತುರ್ಭುಜಗಳಿಂದ ಶ್ರೀದೇವಿ ಭೂದೇವಿಯರೊಂದಿಗೆ ವಿರಾಜಿಸುತ್ತಿರುವ ಶ್ರೀರಂಗನಾಥನನ್ನು ಸದಾ ಸ್ಮರಿಸೋಣ, ಭಜಿಸೋಣ.

ಶ್ರೀರಾಮಕೃಷ್ಣಾದಿ ಅವತಾರಗಳಿಗೆ ಕ್ಷೀರಾಬ್ಧಿಶಾಯಿ ಮೂಲ ರೂಪ ಎನ್ನುವಂತೆ ಅರ್ಚಾವತಾರಗಳಿಗೆ ಈ ಶ್ರೀರಂಗನಾಥನೇ ಮೂಲರೂಪವೆಂದು ಆರ್ಯೋಕ್ತಿಯಲ್ಲಿದೆ.

ಶ್ರೀರಂಗಂ ಪರಮಪದವೆಂದು ಶ್ರೀವೈಕುಂಠವೆಂದೇ ಭಾವಿಸಲಾಗುತ್ತಿದೆ.

ಕಾವೇರಿ ವಿರಜಾ ಸೇಯಂ ವೈಕುಂಠಂ ರಂಗಮಂದಿರಮ್ ।
ಸ ವಾಸುದೇವೋ ರಂಗೇಶಃ ಪ್ರತ್ಯಕ್ಷಂ ಪರಮಂ ಪದಮ್ ॥

ಎಂದು ಶ್ರೀವೈಕುಂಠದಲ್ಲಿರುವ ವಿರಜಾ ನದಿ, ಇಲ್ಲಿ ಹರಿಯುತ್ತಿರುವ ಕಾವೇರಿ ನದಿಯಾಗಿದೆ. ಶ್ರೀರಂಗಮಂದಿರವೇ ಶ್ರೀವೈಕುಂಠವೆನಿಸಿದೆ. ವೈಕುಂಠಾಧಿಪತಿಯಾದ ವಾಸುದೇವನೇ ಶ್ರೀರಂಗನಾಥನಾಗಿದ್ದಾನೆ ಇದುವೇ ಪರಮಪದವು.

ಈ ಕ್ಷೇತ್ರದ ಪ್ರಾಶಸ್ತ್ಯವನ್ನು ಶ್ರೀರಂಗನಾಥನ ಮಹಿಮೆಯನ್ನು ಶ್ರೀವೇದಾಂತದೇಶಿಕರು ಎಂಬ ಆಚಾರ್ಯರು ಒಂದೇ ಒಂದು ಪಾಶುರದ ಮೂಲಕ ವಿವರಿಸುತ್ತಿದ್ದಾರೆ. "ಅಧಿಕಾರಕ ಸಂಗ್ರಹ" ಎಂಬ ದೇಶಿಕಪ್ರಬಂಧದಲ್ಲಿ ೪೨ ವ ಪಾಶುರ ಹೀಗಿದೆ.

ಆರಾದ ಅರುಳಮುದಂ ಪೊದಿನ್ದಕೋಯಿಲ್
ಅಂಬುಯತ್ತೋನ್ ಅಯೋತ್ತಿ ಮನ್ನರ್‌ಕ್ಕಳಿತ್ತಕೋಯಿಲ್
ತೋಲಾದತನಿವೀರನ್ ತೊಳುದಕೋಯಿಲ್
ತುಣೈಯಾನ್ ವೀಡಣರ್ಕು ತುಣೈಯಾಮ್ ಕೋಯಿಲ್
ಶೇರಾದ ಪಯನೆಲ್ಲಾಮ್ ಶೇರ್ ಕ್ಕುಂ ಕೋಯಿಲ್
ಶೆಳುಮರೈಯನ್ ಮುದಲ್‌ಉತ್ತು ಚ್ಚೆರ್‌ನ್ದ ಕೋಯಿಲ್
ತೀರಾದವಿನೈಯನೈತ್ತುಂ ತಿರ್ ಕ್ಕುಂ ಕೋಯಿಲ್
ತಿರುವರಂಗಮೊನತ್ತಿಕಳುಂ ಕೋಯಿಲ್ ದಾನೇ

ಶ್ರೀರಂಗಕ್ಷೇತ್ರ ವೈಭವವನ್ನು ಎಷ್ಟು ನೋಡಿದರೂ ಮನಸ್ಸು ತೃಪ್ತಿಯಾಗುವುದಿಲ್ಲ. ಕರುಣೆಯೇ ಮೂರ್ತಿಭವಿಸಿದ ಶ್ರೀರಂಗನಾಥನೆಂಬ ಅಮೃತ ತುಂಬಿರುವ ದೇವಾಲಯ, ನಾರಾಯಣನ ನಾಭಿಕಮಲದಲ್ಲಿ ನಿವಸಿಸುವ ಬ್ರಹ್ಮದೇವನ ಮೂಲಕ ಅಯೋಧ್ಯಾಧಿಪತಿಯಾದ ಇಕ್ಷ್ವಾಕುವಿಗೆ ಪ್ರಸಾದಿಸಲ್ಪಟ್ಟ ದಿವ್ಯ ದೇವಾಲಯ.

ನಂತರ ಇಕ್ಷ್ವಾಕು ಕೂಣಾಂ ಕುಲಧನ ಎನ್ನುವ ರೀತಿಯಲ್ಲಿ ಅಂದರೆ ಇಕ್ಷ್ವಾಕುವಿನಿಂದ ಸಾಟಿಯಿಲ್ಲದ ವೀರನಾದ ರಾಮಚಂದ್ರಪ್ರಭುವಿನ ಮೂಲ ಆರಾಧಿಸಲ್ಪಟ್ಟ ದೇವಾಲಯ. ರಾಮಭದ್ರನ ಸಹಾಯಕನಾದ ವಿಭೀಷಣನಿಗೆ ಪ್ರಸಾದಿಸಲ್ಪಟ್ಟ ಆತನನ್ನು ರಕ್ಷಿಸಿದ ದೇವಾಲಯ. ಸಮಸ್ತವಾದ ಫಲಗಳನ್ನು ಕೂಡಲೇ ಪ್ರಸಾದಿಸುವ ದಿವ್ಯ ದೇವಾಲಯ ಶ್ರೇಷ್ಟವಾದ ವೇದಗಳಲ್ಲಿನ ಮೊದಲ ಅಕ್ಷರವಾದ ಪ್ರಣವ "ಓಂ" ಕಾರ ರೂಪದಲ್ಲಿ ನೆಲೆಸಿರುವ ಅತ್ಯದ್ಭುತವಾದ ದೇವಾಲಯ, ಅತಿ ದುರ್ಲಭವಾದ ಪಾಪಗಳನ್ನು ಪರಿಹರಿಸುವಂತಹಾ "ತಿರುವರಂಗಂ" ಎಂದು ಕರೆಯಲ್ಪಡುತ್ತಿರುವ ದೇವಾಲಯ, ಆ ದೇವಾಲಯವೇ ಶ್ರೀರಂಗವೆಂದು "ಪ್ರಸಿದ್ಧಿ ಪಡೆದಿದೆ" ಎಂದು ಈ ಪಾಶುರದಲ್ಲಿ ತಿಳಿಸುತ್ತಿದ್ದಾರೆ. ಈ ಪಾಶುರದ ಸಾರವನ್ನು ಮತ್ತೊಂದು ರೀತಿಯಲ್ಲಿ ನೋಡಿದರೆ.

ವೈವಸ್ವತ ಮನುವಿನ ಕುಮಾರ ಇಕ್ಷ್ವಾಕು ಮಹಾರಾಜ. ಆತ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ,ತಪಃಫಲವಾಗಿ ಬ್ರಹ್ಮ ದೇವನ ಆರಾಧ್ಯ ದೇವನಾದ ಶ್ರೀರಂಗನಾಥನನ್ನು ಹೊಂದಿ, ನಂತರ ಆ ವಿಗ್ರಹವನ್ನು ರಾಮಚಂದ್ರನಿಗೆ ಸೇರಿ, ರಾಮಭದ್ರ ವಿಭೀಷಣನಿಗೆ ಪ್ರಸಾದಿಸಿ, ವಿಭೀಷಣನು ಲಂಕೆಗೆ ಹಿಂತಿರು ಗುತ್ತಾ ಸಂಧ್ಯಾವಂದನೆಗಾಗಿ ಉಭಯ ಕಾವೇರಿ ನಡುವೆ ಸ್ವಾಮಿ ಯನ್ನು ಇರಿಸಿ ಸಂಧ್ಯಾವಂದನೆಯನ್ನು ಮುಗಿಸಿ, ಹಿಂದಿರುಗಿ ಬಂದು ನೋಡಿದಾಗ ಪ್ರಣವಾಕಾರವಿಮಾನದಲ್ಲಿ ಶ್ರೀರಂಗ ನಾಥನು ನೆಲೆಸಿರುವುದನ್ನು ನೋಡಿ ಪುನಃ ಅದನ್ನು ತೆಗೆದು ಕೊಂಡು ಹೋಗುವುದಕ್ಕೆ ಪ್ರಯತ್ನಿಸಿದಾಗ, ಶ್ರೀರಂಗನಾಥನ ಸಂಕಲ್ಪದಿಂದಾಗಿ ಭೂಮ್ಯಾಕರ್ಷಣೆಯಿಂದಾಗಿ ಅಲ್ಲಿರಿಸಿದ ಬ್ರಹ್ಮಕಾರಾರ್ಚಿತವಾಗ ಶ್ರೀರಂಗ ಮೂರ್ತಿ ಒಂದು ಇಂಚೂ ಕದ ಲದೇ ಇರುವುದನ್ನು ನೋಡಿ, ಸ್ವಾಮಿಯ ಸಂಕಲ್ಪವನ್ನು ಅರ್ಥ ಮಾಡಿಕೊಂಡ ವಿಭೀಷಣನು ದುಃಖಿಸುತ್ತಿರುವಾಗ, ಭಕ್ತವತ್ಸಲ ನಾದ ಶ್ರೀರಂಗನಾಥನು ಅವನನ್ನು ಸಮಾಧಾನ ಪಡಿಸಿ, ಅನು ಗ್ರಹಿಸಿದನು. ಅಂದಿನಿಂದಲೂ ಶ್ರೀಯಃಪತಿಯಾದ ಶ್ರೀಮನ್ನಾರಾ ಯಣನು ಭಕ್ತಜನಸಂರಕ್ಷಣಾರ್ಥವಾಗಿ ಉಭಯ ಕಾವೇರಿ ಮಧ್ಯ ಇರುವ ದಿವ್ಯಕ್ಷೇತ್ರವಾದ ಶ್ರೀರಂಗದಲ್ಲಿ ರಂಗನಾಥನಾಗಿ ಅರ್ಚಾಮೂರ್ತಿ, ಸ್ವರೂಪವಾಗಿ ಸಕಲ ಜೀವರಾಶಿಯನ್ನು ತನ ಲೀಲೆಯಿಂದ ಸಂರಕ್ಷಿಸುತ್ತಿದ್ದಾನೆ. ನಿತ್ಯವೂ ಭಗವಂತನ ಆಯುಧ ವಿಶೇಷಗಳು, ಭಗವಂತನನ್ನು ಬಿಟ್ಟು ಇರಲಾರದೆ ಭೂಮಿಯಲ್ಲಿ ಭಗವದ್ಭಕ್ತರಾದ ಆಳ್ವಾರರಾಗಿ ಅವತರಿಸಿ ಆರ್ಚಾಮೂರ್ತಿಯಾದ ಆ ನಾರಾಯಣನನ್ನು ಅನೇಕ ರೀತಿ ಯಲ್ಲಿ ಪಾಶುರಗಳಿಂದ ಸ್ತೋತ್ರಗಳಿಂದ ಸ್ತುತಿಸುತ್ತಾ, ಸೇವಿಸುತ್ತಾ, ಭಗವಂತನ ದಿವ್ಯ ವೈಭವಗಳನ್ನು ಭಕ್ತಲೋಕಕ್ಕೆ ಅನುಗ್ರಹಿಸುತ್ತಾ ಲೋಕಕ್ಕೆ ಮಹದುಪಕಾರವನ್ನು ಎಸೆಗುತ್ತಿದ್ದಾರೆ. ಅದೇ ರೀತಿ ಈ ದಿವ್ಯಕ್ಷೇತ್ರವಾದ ಶ್ರೀರಂಗದಲ್ಲಿ ಆಳ್ವಾರುಗಳ ಆಗಮನ, ಅವ ರಿಂದ ಸ್ವಾಮಿಗೆ ನಡೆದ ವೈಭವೋತ್ಸವಗಳು ಅನೇಕಾನೇಕ, ಅನಿರ್ವಚನೀಯವಾದವು. ಅದರಲ್ಲಿ ನಮ್ಮಾಳ್ವಾರುಗಳು, ಪೆರಿ ಯಾಳ್ವಾರು, ತಿರುಮಂಗೈಆಳ್ವಾರುಗಳು, ತಿರುಪ್ಪಾಣಾಳ್ವಾರುಗಳು ಪ್ರಸಿದ್ಧರಾದವರು.

ಈ ಶ್ರೀರಂಗ ಕ್ಷೇತ್ರದಲ್ಲಿ ಪಾಂಚರಾತ್ರ ಆಗಮೋಕ್ತ ಪ್ರಕಾರ ವಾಗಿ ನಿತ್ಯೋತ್ಸವಗಳು-ವಾರೋತ್ಸವಗಳು-ಪಕ್ಷೋತ್ಸವಗಳು-ಮಾಸೋತ್ಸವಗಳು-ಸಂವತ್ಸರೋತ್ಸವಗಳೇ ಮುಂತಾದ ಅನೇಕ ಉತ್ಸವಗಳನ್ನು ದರ್ಶಿಸುವುದಕ್ಕೆ ಎರಡು ಕಣ್ಣುಗಳು ಸಾಲುವು ದಿಲ್ಲ. ಮುಖ್ಯವಾಗಿ ಈ ಕ್ಷೇತ್ರದಲ್ಲಿ ಪ್ರತಿವರ್ಷವೂ ನಾಲಕ್ಕು ಬ್ರಹ್ಮೋ ತ್ಸವಗಳು ಶಾಸ್ತ್ರೋಕ್ತವಾಗಿ ನಡೆಯುತ್ತವೆ. ಇವುಗಳಲ್ಲಿ ಮಕರ ಮಾಸದಲ್ಲಿ ನಡೆಯುವ ಉತ್ಸವಕ್ಕೆ "ಭೂಪತಿ ತಿರುನಾಳ್ಳು" ಎಂದು ಕರೆಯುತ್ತಾರೆ. ಕುಂಭಮಾಸದಲ್ಲಿ ನಡೆಯುವ ಉತ್ಸವಕ್ಕೆ ಎಂಬೆರುಮನಾರ್ಲ ಮೂಲಕ ಏರ್ಪಾಟು ಮಾಡಲಾಗಿದೆ. ಮೀನ ಮಾಸದಲ್ಲಿ ನಡೆಯುವ ಉತ್ಸವವನ್ನು ಅಧ್ಯಕರ್ತರು ಸಾಕ್ಷಾತ್ತು 'ಚತುರ್ಮುಖಬ್ರಹ್ಮ" ಹಾಗೆಯೇ ಮೇಷಮಾಸದಲ್ಲಿ ನಡೆಯುವ ಉತ್ಸವಕ್ಕೆ "ವಿರುಪ್ಪನ್ ತಿರುನಾಳು"ಎಂದು ಕರೆಯುತ್ತಾರೆ. ಇವೇ, ಅಲ್ಲದೇ ಅಧ್ಯಯ ನೋತ್ಸವಗಳು ಸಂಪ್ರದಾಯಬದ್ಧವಾಗಿ ನಡೆಯುತ್ತದೆ. ದಿವ್ಯಕ್ಷೇತ್ರ ಸಪ್ತಪ್ರಾಕಾರಗಳಿಂದ ವಿರಾಜಿಸುತ್ತದೆ. ಒಂದೊಂದು ಪ್ರಾಕಾರಕ್ಕೆ ಒಂದೊಂದು ವಿಶೇಷತೆ ಇದೆ. ರಂಗ ರಂಗ ಎಂದು ಭಕ್ತರು ರಂಗನ ನಾಮಸ್ಮರಣೆ ಮಾಡುತ್ತಾ ಕೀರ್ತಿ ದೇವಸ್ಥಾನದ ಬೀದಿಗಳಲ್ಲಿ ಭಕ್ತಿ ಪರವಶತೆಯಿಂದ ಸಂಚರಿಸು ತ್ತಿರುತ್ತಾರೆ.

"ಪದಿನ್ಮರ್ ಪಾಡುಂ ಪೆರುಮಾಳ್" ಎಂದು ಹತ್ತು ಜನ ಆಳ್ವಾರುಗಳಿಂದ ಸ್ತುತಿಸಲ್ಪಟ್ಟ ದೇವದೇವ ಶ್ರೀರಂಗನಾಥ ಸರಾ ಸರಿ ೨೫೦ ಪಾಶುರಗಳು ಶ್ರೀರಂಗಕ್ಷೇತ್ರ ಮಹಿಮೆಯನ್ನು ವರ್ಣಿ ಸುವ ರೀತಿಯಲ್ಲಿವೆ. ಪರಾಶರಭಟ್ಟರ್ ವೇದಾಂತದೇಶಿಕರು, ಪ್ರಭೃತಿ ಆಚಾರ್ಯರು ಶ್ರೀರಂಗನಾಥನ ಮಹಿಮೆಯನ್ನು ಅತ್ಯಂತ ರಮಣೀಯವಾಗಿ ತಮ್ಮ ಸ್ತೋತ್ರಗಳ ಮೂಲಕ ಪ್ರಶಂಸಿದ್ದಾರೆ. ಭಗವದ್ಧ್ಯಾನ ಸೋಪಾನಂ ಎಂಬ ಸ್ತೋತ್ರದಲ್ಲಿ ಪಾದಾಂ ಭೋಜಂ ಸ್ಪೃಶತಿ ಭಜತೇ" ಎಂಬ ಶ್ಲೋಕ ನಯನ - ಮಧುರಂ, ವದನಂ - ಮಧುರಂ, ಆಧರಂ - ಮಧುರಂ ಎನ್ನುವಂತೆ ಶ್ರೀರಂಗ ನಾಥನ ಅವಯವ ಸೌಂದರ್ಯವನ್ನು ಅತಿ ಸುಂದರವಾಗಿ ವಿವರಿಸುತ್ತಿದೆ.

ಹಾಗೆಯೇ,

"ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದಾ ಕಸ್ತೂರಿ ರಂಗನ ನೋಡದಾ" ಎಂದು ದಾಸವರೇಣ್ಯರು ಹಾಡಿ ಹೋಗಳಿದಂತೆ ನಾವೂ ದಿವ್ಯ ಮಂಗಳಸ್ವರೂಪನಾದ, ಅನಂತ ಕಲ್ಯಾಣ ಪರಿಪೂರ್ಣನಾದ ಶ್ರೀರಂಗಕ್ಷೇತ್ರಾಧಿಪತಿಯಾದ ರಂಗನಾಥನನ್ನು ದರ್ಶಿಸಿ ಕಣ್ತುಂಬಿಕೊಂಡು ಮನತುಂಬಿ ಕೊಂಡು, ಮನಸಾರಾ, ಭಕ್ತಿ ಶ್ರದ್ಧೆಗಳಿಂದ ಸೇವಿಸಿ ಧನ್ಯ ರಾಗೋಣ!

ಕಾವೇರಿ ವರ್ಧತಾಂ ಕಾಲೇ ಕಾಲೇ ವರ್ಷತು ವಾಸವಃ ।
ಶ್ರೀರಂಗನಾಥೋ ಜಯತು ಶ್ರೀರಂಗಶ್ರೀಶ್ಚವರ್ಧತಾಮ್॥



# ಚಕ್ರವರ್ತಿಯ ರಾಜ ಗುರು ಶ್ರೀ ವ್ಯಾಸರಾಜ ಗುರುಸಾರ್ವಭೌಮರು

- ಶ್ರೀಮತಿ.ಆರ್.ಗೀತ

ಬೇಡಿದವರಿಗೆ ಇಷ್ಟಾರ್ಥವನ್ನು ಕಲ್ಪಿಸುವ ಕಲ್ಪವೃಕ್ಷವಾಗಿ ಪ್ರತಿ ಅರ್ಥ ಪಕ್ಷಗಳೆಂಬ ಆಸೆಗಳಿಗೆ ಸಿಂಹ ರೂಪವಾಗಿ,ಚಕ್ರವರ್ತಿಯ ರಾಜಗುರುಗಳಾಗಿ ಅನುಗ್ರಹಿಸಿದ ಶ್ರೀವ್ಯಾಸತೀರ್ಥರು, ನಮ್ಮ ಇಷ್ಟಾರ್ಥಗಳನ್ನು ಸಾಧಿಸಿ ಕೊಡಲಿ ಎಂದು ಪ್ರಥಮವಾಗಿ ಭಕ್ತಿಯಿಂದ ಬೇಡೋಣ.

ವಿಜಯನಗರದ ಕರ್ನಾಟಕ ರಾಜ್ಯ ಸ್ಥಾಪನೆಗೆ ಶ್ರೀವಿದ್ಯಾರಣ್ಯರು ಮೂಲ ಗುರುಗಳಾದರೆ,ವಿಜಯನಗರದ ಉನ್ನತಿಗೆ ಮುಖ್ಯ ಕಾರಣರು ಶ್ರೀವ್ಯಾಸರಾಜರು. ವಿಜಯನಗರದ ಸಿಂಹಾಸನ ಮೂರೇಕ್ಷಣ ಆಳಿದರೂ ಮೂರು ಯುಗಗಳಲ್ಲಿ ಮಾಡಿದಷ್ಟು ಸಾಧನೆ ಯತಿ ಶ್ರೇಷ್ಠರಾದ ಶ್ರೀ ವ್ಯಾಸರಾಜರದು.



ಶ್ರೀವ್ಯಾಸರಾಜರ ಪರಮ ಗುರುಗಳು ಶ್ರೀಪುರುಷೋತ್ತಮತೀರ್ಥರು. ಚೆನ್ನಪಟ್ಟಣದ ಹತ್ತಿರ ಅಬ್ಬೂರಿನ ಗುಹೆಯಲ್ಲಿ ತಪಸ್ಸು ಮಾಡುತ್ತಾ ತಮ್ಮ ಉತ್ತರಾಧಿಕಾರಿಯನ್ನಾಗಿ ಶ್ರೀ ಬ್ರಹ್ಮಣ್ಯತೀರ್ಥರಿಗೆ ಆಶ್ರಮ ನೀಡಿ, ಅಬ್ಬೂರಿನ ಗುಹೆಯಲ್ಲಿ ಅದೃಶ್ಯರಾದರು. !! ಶ್ರೀ ಬ್ರಹ್ಮಣ್ಯತೀರ್ಥರು, ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ತಮ್ಮ ಮಹಿಮೆಯನ್ನು ಪ್ರದರ್ಶಿಸಿ, ಶ್ರೀ ಮಠದ ಜವಾಬ್ದಾರಿಯನ್ನು ಶ್ರೀ ವ್ಯಾಸರಾಜರಿಗೆ ಒಪ್ಪಿಸಿದರು. ಅಬ್ಬೂರಿನಲ್ಲಿ ಬ್ರಹ್ಮಣ್ಯತೀರ್ಥರು ವೈಶಾಖ ಬಹುಳ ಏಕಾದಶಿಯಂದು ವೃಂದಾವನಸ್ಥರಾದರು.

ಮೈಸೂರು ಹತ್ತಿರ ಬನ್ನೂರಿನಲ್ಲಿ ರಾಮಾಚಾರ್ಯ ಮತ್ತು ಸೀತಾಬಾಯಿ ದಂಪತಿಗಳಿಗೆ ವಿಭವ ನಾಮ ಸಂವತ್ಸರ, ವೈಶಾಖ ಶುದ್ಧ ಸಪ್ತಮಿ ಗುರುವಾರ 22-4-1447 ರಂದು ಬನ್ನೂರಿನಲ್ಲಿ ಯತಿರಾಜ ಎಂಬ ಹೆಸರಿನಿಂದ ಅವತರಿಸಿದರು. ಕ್ರಿ.ಶ. 1453 ರಲ್ಲಿ ಇವರಿಗೆ ಆಶ್ರಮ ದೀಕ್ಷೆಯಾಯಿತು. ವ್ಯಾಸರಾಜರೆಂದು ನಾಮಾಂಕಿತರಾಗಿ ಶ್ರೀ ಮಠದ ಉತ್ತರಾಧಿಕಾರಿಯಾದರು. ಪ್ರೌಢ ವ್ಯಾಸಂಗಕ್ಕೆ ದಾಸ ಸಾಹಿತ್ಯಕ್ಕೆ ಪ್ರಕಾರ ಹುಟ್ಟು ಹಾಕಿದ "ರಂಗವಿಠಲ" ಅಂಕಿತ ನಾಮದಿಂದ ಅನೇಕ ದೇವರನಾಮ ರಚಿಸಿದ ಶ್ರೀಪಾದರಾಜರಲ್ಲಿಗೆ ಕಳುಹಿಸಿಕೊಡಲಾಯಿತು. ಹನ್ನೆರಡು ವರ್ಷ ಶ್ರೀಪಾದರಾಜರಲ್ಲಿ ವ್ಯಾಸರಾಜರು ವ್ಯಾಸಂಗ ಮಾಡಿದರು. ಶ್ರೀ ಪಾದರಾಜರಲ್ಲಿ ಅಧ್ಯಯನ ಮಾಡುವ ಸಂದರ್ಭದಲ್ಲಿ, ಎರಡು ಪವಾಡ ಘಟನೆ ಜರುಗಿದವು. ಶ್ರೀ ಪಾದರಾಜರು ಸುಖ ಪ್ರಾರಬ್ದಯೋಗ ನಿಮಿತ್ತ ಅಭ್ಯಂಜನ ಸ್ನಾನಕ್ಕೆ ಹೋಗಿದ್ದರು.ಆಗ ವ್ಯಾಸರಾಜರಿಗೆ ಗೋಪಿನಾಥ,ರಂಗವಿಠಲ ಪೂಜೆ ಮಾಡಲು ಹೇಳಿದ್ದರು. ಎಲ್ಲಾ ಪ್ರತಿಮೆಗಳನ್ನು ಪೂಜಿಸಲು ತೆಗೆದರೂ, ಶ್ರೀಪಾದರಾಜರಿಗೆ ತೆಗೆಯಲು ಬಾರದೆ, ಕೇವಲ ಗಂಧ ಅಕ್ಷತೆಗಳಿಂದ ಪೂಜಿಸಲ್ಪಡುತ್ತಿದ್ದ ಸಂಪುಷ್ಟವನ್ನು ವ್ಯಾಸರಾಜರು ತೆರೆದು, ಗೋಪಾಲಕೃಷ್ಣನ ಪ್ರತಿಮೆ ಪೂಜಿಸಿದ್ದು ಪವಾಡ ಸದೃಶವಾಗಿತ್ತು. ಆನಂದಬಾಷ್ಪ ಸುರಿಸುತ್ತಾ, ಶ್ರೀಕೃಷ್ಣನ ದರ್ಶನ ಕಂಡು ಭಕ್ತಿಯಿಂದ "ಸಿರಿಕೃಷ್ಣ" ಎಂಬ ಅಂಕಿತ



ನಾಮದಿಂದ ಹಾಡಲು ಪ್ರಾರಂಭಿಸಿದರು.ಎದುರುಗಿದ್ದ ಸಾಲಿ ಗ್ರಾಮಗಳ ತಾಳಗಳಾದವು.ಶ್ರೀಕೃಷ್ಣನನ್ನು ಸಾಕ್ಷಾತ್ಕರಿಸಿ ಕೊಂಡು, ಗಾನದೊಂದಿಗೆ ವ್ಯಾಸರಾಜರ ನೃತ್ಯ ಅಪೂರ್ವ ದೃಶ್ಯವಾಗಿತ್ತು।

ಮತ್ತೊಮ್ಮೆ ವ್ಯಾಸರಾಜರು ಗುಹೆಯಲ್ಲಿದ್ದಾಗ ಒಂದು ಹೆಬ್ಬಾವು ನುಂಗುಲು ಬಂದಿತ್ತು ಆಗ ಶ್ರೀ ಪಾದರಾಜರು ಅದನ್ನು ಸರ್ಪಭಾಷೆಯಿಂದ ಮಾತನಾಡಿಸಿದ ದೃಶ್ಯ ರೋಮಾಂಚನ ಘಟನೆಯಾಗಿತ್ತು! ಆ ಹೆಬ್ಬಾವು ಉತ್ತರಿಸುತ್ತಾ ತಾನು ಶೇಷ ದೇವ ರೆಂದು,ಇವರಲ್ಲಿ ತನ್ನ ಆವೇಶವಿರುವುದರಿಂದ,ಅವರನ್ನು ನುಂಗದೆ ಬಿಟ್ಟನೆಂದು ವ್ಯಕ್ತಪಡಿಸಿ, ಹೊರಟು ಹೋದ ಸಂದರ್ಭ ಪವಾಡದ ಪ್ರಸಂಗವಾಯಿತು.

ವ್ಯಾಸರಾಜರಿಗೆ ಚಂದ್ರಗಿರಿ ರಾಜ ಸಾಳುವ ನರಸಿಂಹ ರಾಜ ಸಕಲ ವೈಭವದಿಂದ ಸತ್ಕರಿಸಿ, ಬರಮಾಡಿಕೊಂಡಿದ್ದು ವಿಶೇಷವಾಗಿತ್ತು.ಆ ಕಾಲದಲ್ಲಿ ತಿರುಪತಿ ದೇವಾಲಯದ ಅರ್ಚ ಕರ ವಂಶಜರು ಇಲ್ಲದೇ ಇರಲು ತಿರುಪತಿ ಶ್ರೀನಿವಾಸ ದೇವರ ಪೂಜೆಗೆ ವ್ಯಾಸತೀರ್ಥರನ್ನು ಗೌರವದಿಂದ ಆಹ್ವಾನಿಸಿದರು. ತಿರುಪತಿ ಬೆಟ್ಟ ಸಾಲಿಗ್ರಾಮಗಳಿದ್ದಂತೆ ಕಂಡಂತಾಗಿ ವ್ಯಾಸ ರಾಜರು ಅಂಬೆಗಾಲಿಟ್ಟು ಬೆಟ್ಟ ಏರಿದ್ದು ಇತಿಹಾಸವಾಯಿತು. ನಿರಂತರವಾಗಿ ವ್ಯಾಸರಾಜರು ಕ್ರಿ.ಶ. 1486 ರಿಂದ 1493 ರ ವರೆಗೂ ಶ್ರೀನಿವಾಸನ ಪೂಜೆ ಮಾಡಿ ಧನ್ಯರಾದರು. ನಂತರ ಅರ್ಚಕರಾದ ತಾತಾಚಾರ್ಯರ ವಂಶಜರಿಗೆ ವ್ಯಾಸರಾಜರು ಪೂಜೆಗೆ ಅವಕಾಶ ಮಾಡಿಕೊಟ್ಟರು.ತಿರುಪತಿ ಶ್ರೀನಿವಾಸ ದೇವರ ಎದುರಿಗೆ ಬೇಡಿ ಆಂಜನೇಯನನ್ನು ಪ್ರತಿಷ್ಠಾಪಿಸಿದರು. ಅನೇಕ ಬೆಲೆ ಬಾಳುವ ಒಡವೆ, ವಸ್ತ್ರ, ಭೂಮಿಯನ್ನು ದತ್ತಿ ಹಾಕಿ ಕೊಟ್ಟರು. ದೇವಾಲಯದ ಗರ್ಭಗುಡಿ ಶಿಖರಕ್ಕೆ ಚಿನ್ನದ ರೇಖುನ್ನು ಮಾಡಿಸಿ, ಉತ್ತರ ದಿಕ್ಕಿನಲ್ಲಿ" ವಿಮಾನ ಶ್ರೀನಿವಾಸ ಮೂರ್ತಿ ಯನ್ನು" ನಿರ್ಮಿಸಿದರು. ವಾಸರಾಜರು ಅನೇಕ ಗಡಿ ವಿವಾದ ಗಳನ್ನು ಪರಿಹರಿಸಿ, ಹಲವಾರು ಪಂಗಡಗಳನ್ನು ಒಟ್ಟುಗೂಡಿ ಸಿದರು.ಶ್ರೀರಂಗದಲ್ಲಿ ಎಲ್ಲ ಕಲ್ಲು ಆಂಜನೇಯನ್ನು ಪ್ರತಿಷ್ಠಾಪಿ ಸಿದರು.

ಶ್ರೀರಂಗದಿಂದ ವ್ಯಾಸರಾಜರು ಸೇತು ಮಾಧವ, ರಾಮೇ ಶ್ವರ, ದರ್ಶಿಸಿ, ಉಡುಪಿಗೆ ಆಗಮಿಸಿದರು. ವ್ಯಾಸರಾಜರ ಮಹಿಮೆ ಅರಿತ ಅಷ್ಟಮಠಾಧೀಶರು ಗೌರವದಿಂದ ಉಡುಪಿ ಶ್ರೀ



ಕೃಷ್ಣ ಮಠಕ್ಕೆ ಬರಮಾಡಿಕೊಂಡರು. ಶ್ರೀಕೃಷ್ಣನ ದರ್ಶನ ಮಾಡಿ ವ್ಯಾಸರಾಜರು ಭಕ್ತಿಯಿಂದ ಅನೇಕ ರತ್ನಾಭರಣಗಳನ್ನು ಸಮ ರ್ಪಿಸಿದರು.ತಾವು ರಚಿಸಿದ್ದ ಉತ್ಕೃಷ್ಟ ರತ್ನತ್ರಯ ಗ್ರಂಥ ಗಳಾದ''ತಾತ್ಪರ್ಯ ಚಂದ್ರಿಕಾ, ನ್ಯಾಯಾಮೃತ ತರ್ಕ ತಾಂಡವ" ಶ್ರೀಕೃಷ್ಣನಿಗೆ ಸಮರ್ಪಿಸಿದರು.ಇವರು ರಚಿಸಿದ ಮಂದಾರ ಮಂಜರಿ ಕನ್ನಡ ವ್ಯಾಖ್ಯಾನ, ಹಂಪೆಯ ಶ್ರೀವಿರು ಪಾಕ್ಷನನ್ನು ಕುರಿತು ರಚಿಸಿದ ಶಿವಸ್ತುತಿ ಪ್ರಖ್ಯಾತ ಕೃತಿಗಳಾಗಿವೆ.

ವ್ಯಾಸರಾಜರ ವಿದ್ಯಾಶಿಷ್ಯರಾಗಿದ್ದ ವಿಜಯೀಂದ್ರತೀರ್ಥರು ವ್ಯಾಸರಾಜರನ್ನು ತಾತ್ಪರ್ಯಚಂದ್ರಿಕಾ ಎಂಬ ಬೆಳದಿಂಗಳಿನಲ್ಲಿ ನ್ಯಾಯಾಮೃತವೆಂಬ ಅಮೃತಪಾನ ಮಾಡಿ ಆನಂದದಿಂದ ತರ್ಕ ತಾಂಡವವೆಂಬ ನಾಟ್ಯ ಮಾಡುತ್ತಾ ಸಂತೋಷಪಡುವಂತೆ ಅನುಗ್ರಹಿಸುತ್ತಿದ್ದಾರೆಂದು ಸ್ತೋತ್ರ ಮಾಡಿ,ಉದ್ಗರಿಸಿದ್ದಾರೆ. ವ್ಯಾಸರಾಜರು ಹಂಪೆಯ ಚಕ್ರತೀರ್ಥದ ಹತ್ತಿರ ಯಂತ್ರೋ ದ್ಧಾರಕ ಆಂಜನೇಯನನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ ರಾಮ, ಲಕ್ಷ್ಮಣ ಕುಳಿತ್ತಿದ್ದರೆಂದು ಪ್ರತೀತಿ ಶ್ರೀವ್ಯಾಸರಾಜರು ದಕ್ಷಿಣ ಭಾರತ ದಲ್ಲಿ ಧಾರ್ಮಿಕ ಅನುಷ್ಠಾನದ ಜೊತೆಗೆ, ಹಿಂದೂ ಸಂಘಟನೆ ಗಾಗಿ, 732 ಪ್ರಾಣದೇವರನ್ನು ಪ್ರತಿಷ್ಠಾಪಿಸಿದರು. ಆಂಧ್ರಪ್ರದೇ ಶದ ಅನಂತಪುರ ಜಿಲ್ಲೆಯ ಪೆನುಗೊಂಡೆಯಲ್ಲಿ 108 ಪ್ರಾಣ ದೇವರನ್ನು ಪ್ರತಿಷ್ಠಾಪಿಸಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಆರು ಜನ ಚಕ್ರವರ್ತಿಗಳಿಗೆ, ಶ್ರೀಕೃಷ್ಣ ದೇವರಾಯನ ಸಹಿತ ರಾಜಗುರುಗಳಾಗಿ ಮೆರೆದು ಅನುಗ್ರಹಿಸಿದ ಗುರುಸಾರ್ವಭೌಮರು! ಹಂಪೆಯಲ್ಲಿ ನಳಂದಾ ವಿಶ್ವವಿದ್ಯಾಲಯವನ್ನು ಮೀರಿಸುವ ಲೋಕಪಾವನ ವಿಶ್ವ ವಿದ್ಯಾಲಯ ವ್ಯಾಸರಾಜರು ಸ್ಥಾಪಿಸಿ ಅನೇಕ ದೇಶ, ವಿದೇಶದ ವಿದ್ಯಾರ್ಥಿಗಳು ವೇದ ವಾಸ್ತು, ಶಿಲ್ಪಕಲೆ, ವಾಣಿಜ್ಯ, ಮನಃ ಶಾಸ್ತ್ರ, ಯಂತ್ರ ಕುಶಲತೆ, ಸಂಗೀತ, ಮುಂತಾದವುಗಳನ್ನು ಅಭ್ಯಸಿಸಲು ಅನೂಕೂಲವಾಗುವಂತೆ ಮಾಡಿದ್ದರು. ವಿಶ್ವವಿದ್ಯಾಲಯಕ್ಕೆ ಏಳು ಶಾಖೆಗಳನ್ನು ಮಾಡಿ, ಹರಿದ್ವಾರಕ್ಕೆ ಸತ್ಯನಾಥ ಕಾಶಿಗೆ ಜಯದೇವ, ಬಂಗಾಳಕ್ಕೆ ಈಶ್ವರ ಸೂರಿ, ಗಯಾಕ್ಕೆ ಹರಿಮಿಶ್ರ ಮುಳಬಾಗಿಲಿಗೆ ಪ್ರಜ್ಞನಿಧಿ, ಕಂಚಿಗೆ ಶ್ರೀನಿವಾಸತೀರ್ಥರು,ಉಡುಪಿಗೆ ವಾದಿರಾಜ ರನ್ನು ಉಪಕುಲಪತಿಗಳಾಗಿ ನೇಮಿಸಿದ್ದರು.ಲೋಕಪಾವನ ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಕುಲಪತಿಗಳಾದ ವ್ಯಾಸ ರಾಜರು ಚಿನ್ನದ ರಥದಲ್ಲಿ ಕುಳಿತು ಮಂಗಳವಾದ್ಯಗಳೊಂದಿಗೆ ಶ್ರೀಕೃಷ್ಣದೇವರಾಯನ ಸಮ್ಮುಖದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ದೃಶ್ಯ ಪಾಶ್ಚಾತ್ಯ ಯಾತ್ರಿಕ ನನ್ನೀಸ್ ಕಂಡ ಂತೆ ಅಪೂರ್ವ ದೃಶ್ಯವಾಗಿತ್ತು.

ವ್ಯಾಸರಾಜರ ಸನ್ಯಾಸಿ ಶಿಷ್ಯರಲ್ಲಿ ವಿಜಯೀಂದ್ರರು ವಾದಿ ರಾಜರು,ಶ್ರೀನಿವಾಸತೀರ್ಥರು, ಗೋವಿಂದ ಒಡೆಯರ್, ಶ್ರೀನಾರಾಯಣ ಯೋಗಿಗಳು ಪ್ರಮುಖರು. ಪುರಂದರದಾಸರು, ಕನಕದಾಸರು,ವ್ಯಾಸರಾಜರ ಅಪ್ತ ಶಿಷ್ಯರು.ಪುರಂದರದಾಸ

ರಿಗೆ "ಪುರಂದರ ವಿಠಲ" ಅಂಕಿತ ನೀಡಿ,ಸುಳಾದಿಗಳು, ಕೀರ್ತನೆಗಳು, ಉಗಾಭೋಗಗಳು ಪದಗಳು, ಹಾಡುಗಳು, ರಚಿಸಲು ಪ್ರೇರಣೆ ನೀಡಿದ ಮಹಾನುಭಾವರು ಶ್ರೀವ್ಯಾಸರಾಜರು. ಪುರಂದರದಾಸರ ಕನ್ನಡ ಸಾಹಿತ್ಯದ ಕೃತಿಗಳನ್ನು ವ್ಯಾಸರಾಜರು ವ್ಯಾಸಪೀಠದಲ್ಲಿಟ್ಟು ಪೂಜಿಸಿದ ಯತಿಗಳು. ಪುರಂದರದಾಸರ ಸಾಹಿತ್ಯವನ್ನು "ಪುರಂದರೋಪನಿಷತ್"ಎಂದು ಪ್ರೀತಿಯಿಂದ ಕೊಂಡಾಡಿದ್ದಾರೆ. ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರು ಕನ್ನಡ ಸಾಹಿತ್ಯಕ್ಕೆ ದೂರಕಿದ ಅನರ್ಘ್ಯ ರತ್ನ!

ವ್ಯಾಸರಾಜರು ಕೆರೆ, ಬಾವಿ, ಪುರ, ಅಗ್ರಹಾರ ಕಟ್ಟಿಸಿ ಅನೇಕ ಸಾಮಾಜಿಕ ಸೇವೆ ಮಾಡಿದ ಯತಿಗಳು. ಕಾಶಿ, ಗಯಾ, ಬಂಗಾಳ ಪ್ರಾಂತ್ಯಗಳಲ್ಲಿ ಸಂಚರಿಸಿ, ಚೈತನ್ಯ ಪಂಥದವರನ್ನು ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡರು. ಮಧ್ವಮತ ಸಿದ್ಧಾಂತ ಪ್ರಚಾರ ಮಾಡಿ ವೇದಾಂತ ಸಾಮ್ರಾಜ್ಯದಲ್ಲಿ ಬಹುಕಾಲ ಸರ್ವಜ್ಞ ಪೀಠ ಅಲಂಕರಿಸಿದ್ದರು. ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಶ್ರೀಕೃಷ್ಣ ದೇವರಾಯನ ಕುಹುಯೋಗ ನಿವಾರಿಸಿದ ಮಹಾನುಭಾವರು. ಶ್ರೀವ್ಯಾಸರಾಜರು ತಮ್ಮ ಮೂಲ ದೇವರಾದ ಶ್ರೀಲಕ್ಷ್ಮೀ ನರಸಿಂಹನನ್ನು ಆರಾಧಿಸುತ್ತಾ ಪ್ರಹ್ಲಾದನಾಗಿ ಕೃತಯುಗದಲ್ಲಿ ಅವತರಿಸಿ,ದ್ವಾಪರ ಯುಗದಲ್ಲಿ ಬಾಹ್ಲಿಕ ರಾಜನಾಗಿ ಕಲಿಯುಗದಲ್ಲಿ ವ್ಯಾಸರಾಜರಾಗಿ ತದನಂತರ ಶ್ರೀರಾಘವೇಂದ್ರಸ್ವಾಮಿಗಳಾಗಿ ಅವತರಿಸಿ, ಭಕ್ತರನ್ನು ಸಂರಕ್ಷಿಸುತ್ತಾರೆ.ವ್ಯಾಸರಾಜರ ಕಾಲದಲ್ಲಿ ಅದ್ವೈತ ಕವಿ ಸೋಮನಾಥ ವ್ಯಾಸಯೋಗಿ ಚರಿತೆ ಬರೆದು ವ್ಯಾಸರಾಜರ ಮಹಿಮೆಯನ್ನು ಅನೇಕ ರೀತಿಯಿಂದ ಕೊಂಡಾಡಿದ್ದಾರೆ. ಅದೇ ರೀತಿ ಶ್ರೀನಿವಾಸತೀರ್ಥರು ಸಹ ವ್ಯಾಸ ವಿಜಯ ಕೃತಿ ಬರೆದು ಸ್ತುತಿಸಿದ್ದಾರೆ.

ಶ್ರೀ ವ್ಯಾಸರಾಜರು ಶ್ರೀಕೃಷ್ಣ ದೇವರಾಯ ಚಕ್ರವರ್ತಿಯ ರಾಜಗುರುಗಳಾಗಿ ಅನುಗ್ರಹಿಸಿ, ಮಾರ್ಗದರ್ಶನ ನೀಡಿ, ವಿಜಯನಗರ ಸಾಮ್ರಾಜ್ಯ, ಸ್ವರ್ಣಯುಗ ಮಾಡಿದ ಮಹಿಮಾನ್ವಿತರು.

92 ವರ್ಷ ಸಾರ್ಥಕ ಜೀವನ ನಡೆಸಿ, ಅನೇಕ ಶಿಷ್ಯರನ್ನು ಸಂಪಾದಿಸಿ, ದ್ವೈತ ಸಿದ್ಧಾಂತ ಪ್ರಚಾರ ಮಾಡಿ ಅಮೂಲ್ಯವಾದ ಗ್ರಂಥಗಳನ್ನು, ಕೀರ್ತನೆಗಳನ್ನು, ಸ್ತೋತ್ರಗಳನ್ನು ರಚಿಸಿದ ಯತಿಗಳು. ಕ್ರಿ.ಶ.1539 ವಿಳಂಬಿ ಸಂವತ್ಸರ, ಫಾಲ್ಗುಣ ಬಹುಳ, ಚತುರ್ಥಿ, ರವಿವಾರ, ಕೊಪ್ಪಳ ಜಿಲ್ಲೆ ಆನೆಗುಂದಿ (ನವವೃಂದಾವನ) ತುಂಗಭದ್ರಾ ನದಿಯ ನಡುಗಡ್ಡೆಯಲ್ಲಿ ವೃಂದಾವನಸ್ಥರಾದರು.

ಅರ್ಥ ಕಲ್ಪಿತಕಲ್ಪೋಯಂ ಪ್ರತ್ಯರ್ಥಿಗಜಕೇಸರಿ
ವ್ಯಾಸತೀರ್ಥಗುರು ರ್ಭೂಯಾದಸ್ಮ ದಿಷ್ಟಾರ್ಥಸಿದ್ಧಯೇ ॥

**ಎಡದಿಂದ ಬಲಕ್ಕೆ**

1.ಮುದಲ್ ತಿರುವಂದಾದಿ

2.ಪೆರುಮಾಳ್ ತಿರುಮೊಷಿ

**ಬಲದಿಂದ ಎಡಕ್ಕೆ**

3.ತಿರುಪ್ಪಾವೈ

4. ತಿರುವಿರುತ್ತಂ

**ಮೇಲಿಂದ ಕೆಳಕ್ಕೆ**

5.ತಿರುಪ್ಪಳ್ಳಿ ಎಳುಚ್ಚಿ

6.ಶಿರಿಯ

7.ಪೆರಿಯ

8.ತಿರುಚ್ಚಂದ ವಿರುತ್ತಂ

**ಕೆಳಗಿನಿಂದ ಮೇಲಕ್ಕೆ**

9.ಮುಕುಂದಮಾಲೈ

10.ತಿರುಮಾಲೈ

11.ತಿರುವಾಯ್ ಮೊಷಿ

12.ತಿರುಪ್ಪಲ್ಲಾಂಡು

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಮು | ದ | ಲ್ | ತಿ | ರು | ವಂ | ದಾ | ದಿ |
| 2 | | 5 ತಿ | ವೈ | ಪ್ಪಾ | ರು | 3 8 ತಿ | ಷಿ | |
| 3 | 2 ಪೆ | ರು | ಮಾ | ಳ್ | ತಿ | ರು | ಮೊ | ಷಿ |
| 4 | ಲೈ | ಪ್ಪ | 6 ಶಿ | | 7 ಪೆ | ಚ್ಚಂ | ಯ್ | ಡು |
| 5 | ಮಾ | ಳ್ಳಿ | ರಿ | ಲೈ | ರಿ | ದ | ವಾ | ಲ್ಲಾಂ |
| 6 | ದ | ಎ | ಯ | ಮಾ | ಯ | ವಿ | ರು | ಪ್ಪ |
| 7 | ಕುಂ | ಳು | ತ್ತಂ | ರು | ವಿ | ರು | 4 11 ತಿ | ರು |
| 8 | 9 ಮು | ಚ್ಚಿ | | 10 ತಿ | | ತ್ತಂ | | 12 ತಿ |

# ಸಂಸ್ಕೃತ ಕಲಿಯೋಣ...!!

## त्रयोदशः पाठः

### ಹದಿಮೂರನೆಯ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

1. प्रयाणम् = ಪ್ರಯಾಣವು 2. दिवा= ಹಗಲು 3. दौष्टयम्= ತರಾಟೆ 4. तथाऽपि = ಹಾಗಿದ್ದರೂ

5. भिक्षाटनम् = ಭಿಕ್ಷಾಟನೆಯು 6. सर्वथा = ಸಂಪೂರ್ಣವಾಗಿ 7. अकुर्वन् = ಮಾಡಿದರು

8. अकुरुत = ಮಾಡಿದಿರಿ 9. अकुर्म= ಮಾಡಿದೆವು.

### ಪ್ರಶ್ನೆ

1. त्वं ह्यः नक्तं कुत्र प्रयाणमकरोः?
2. बालकाः दौष्ट्यं कुर्वन्ति।
3. ते कुत्रापि नासन्।
4. तथाऽपि एते पाकं अकुर्वन्।
5. ब्राह्मणाः भिक्षाटनं कुर्वन्ति।
6. अद्य पाकः कथमस्ति?
7. अद्य व्यापारं वयमेव अकुर्म।
8. तथाऽपि ते केऽपि अत्र न सन्ति।
9. अद्य दिवा सर्वथा त्वं अत्र नासीः।
10. अद्य पाकं यूयमेव अकुरुत किम्?

### ಉತ್ತರ

1. ನೀನು ನಿನ್ನೆ ರಾತ್ರಿ ಎಲ್ಲಿಗೆ ಪ್ರಯಾಣ ಮಾಡಿದೆ?
2. ಬಾಲಕರು (ಹುಡುಗರು) ತರಾಟೆ ಮಾಡುತ್ತಿದ್ದಾರೆ.
3. ಅವರು ಎಲ್ಲಿಯೂ ಇರಲಿಲ್ಲ.
4. ಹಾಗಿದ್ದರೂ ಇವರು ಅಡುಗೆ ಮಾಡಿದರು.
5. ಬ್ರಾಹ್ಮಣರು ಭೀಕ್ಷಾಟನೆ ಮಾಡುತ್ತಿದ್ದಾರೆ.
6. ಇವತ್ತು ಅಡುಗೆ ಹೇಗಿದೆ?
7. ಇವತ್ತು ವ್ಯಾಪಾರವನ್ನು ನಾವೇ ಮಾಡಿದೆವು.
8. ಹಾಗಾದರೂ (ಹಾಗಿದ್ದರೂ) ಅವರು ಯಾರೂ ಕೂಡಾ ಇಲ್ಲಿ ಇಲ್ಲ.
9. ಇವತ್ತು ಮುಂಜಾನೆ ಸಂಪೂರ್ಣವಾಗಿ ನೀನು ಇಲ್ಲಿ ಇರಲಿಲ್ಲ.
10. ಇವತ್ತು ಅಡುಗೆ ನೀವೇ ಮಾಡಿದ್ದೀರಾ ಏನು?

### ಪ್ರಶ್ನೆ

1. ನಾನು ಎಲ್ಲಿಗೂ ಪ್ರಯಾಣ ಮಾಡಿಲ್ಲ.
2. ನೀವೇನಾ ಅಡುಗೆ ಮಾಡಿದ್ದು.
3. ನಾವು ಅಲ್ಲ ಯಾರೋ ಮಾಡಿದರು.
4. ಬೇರೆ ಅವರು ಬ್ರಾಹ್ಮಣರಿದ್ದಾರೆ.
5. ಅವರು ಯಾರು? (ಅವರ್‍ಯಾರು)
6. ಇವರೇ.
7. ನಿನ್ನ ಹುಡುಗರು ತರಾಟೆ ಮಾಡಿದರು.
8. ನೀನು ಭಿಕ್ಷಾಟನೆ ಮಾಡಿದ್ದೀಯಾ?
9. ನೀನಿಲ್ಲಿರು (ನೀನು ಹೀಗಿರು)
10. ನಾನು ನಮಸ್ಕಾರವನ್ನು ಮಾಡುತ್ತಿದ್ದೇನೆ.

### ಉತ್ತರ

1. अहं कुत्रापि प्रयाणं न अकरवम्।
2. यूयमेव पाकं अकुरुत किम्?
3. वयं न, ये केऽपि अकुर्वन्।
4. अन्ये ब्राह्मणाः सन्ति।
5. ते के?
6. एते एव।
7. ह्यः बालकाः दौष्ट्यम अकुर्वन्।
8. त्वं भिक्षाटनमकरोः किम्?
9. त्वम् एवं भव।
10. अहं नमस्कारं करोमि।



# ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ "ಕರೆತಾರೆ ಕರೆತಾರ ಶ್ರೀನಿವಾಸನ" ಮಧುರ ಭಾವ ಮತ್ತು ಆತ್ಮನಿವೇದನೆ ಕೀರ್ತನೆಯ ಒಳನೋಟ

– ಡಾ॥ ಸುಭಾಸ ಕಾಖಂಡಕಿ

79754 42458

ಕರೆತಾರೆ ಕರೆತಾರ ಶ್ರೀನಿವಾಸನ

ಸುರರರಸ ಸ್ವಾಮಿ ಶ್ರೀ ವೆಂಕಟೇಶನ॥ಪ॥

ಈ ಕೀರ್ತನೆಯಲ್ಲಿ ದಾಸರು ತಾವೇ ಗೋಪಿಕೆಯಾಗಿ ಭಗವಂತನಲ್ಲಿ ವಿರಹವೇದನೆಯನ್ನು ತೋಡಿಕೊಂಡಿದ್ದಾರೆ.

ಕರೆತಾರೆ ಕರೆತಾರೆ ಶ್ರೀನಿವಾಸನ ಎಂಬಲ್ಲಿ ಗೋಪಿಕೆಯರ ಆರ್ತತೆಯ ಧ್ವನಿ ಇದೆ. ಇನ್ನೂ ಶ್ರೀನಿವಾಸ ಬಂದಿಲ್ಲ, ಕಂಡಿಲ್ಲ ಬೇಗ ಕರೆತಾರೆ ಎಂಬ ಬಲವಾದ ಹಂಬಲವಿದೆ. ಶ್ರೀನಿವಾಸ ಅವನೇ ಸುರರ ಒಡೆಯ ಅವನೇ ಶ್ರೀ ವೆಂಕಟೇಶ. ಶ್ರೀನಿವಾಸ ಅಂದರೆ ಅನುಗಾಲವು ಲಕ್ಷ್ಮೀ ದೇವಿಯನ್ನು ತನ್ನ ಹೃದಯ ಕಮಲದಲ್ಲಿ ಧರಿಸಿ ಸಿರಿದೇವಿಗೆ ನಿವಾಸ ನೀಡಿದವ

ವೆಂಕಟೇಶ ಎಂದರೆ ವೆಂ = ಪಾಪವನ್ನು ಕಟ = ಕತ್ತರಿಸುವವ ಈಶ ದೇವ. ಪಾಪವನ್ನು ಪರಿಹರಿಸುವವನೇ ವೆಂಕಟೇಶ ಎಂದು ದಾಸರು ಈ ಕೀರ್ತನೆಯ ಪಲ್ಲವಿಯಲ್ಲಿ ತಿಳಿಸಿದ್ದಾರೆ.

**ಇನ್ನು ನುಡಿ - ೧ ರಲ್ಲಿ**

ಬರಹೇಳೆ, ಬರಹೇಳೆ ಬೇಗ ಕರಿಗಮನೆ ರಂಗಗೆ
ಸಿರಿರಾಣಿರಮಣ ಘನಾಂಗಗೆ
ಅರಘಳಿಗೆ ಸರಸವಲ್ಲ ಅರಸನಿಲ್ಲದವಳೆ ಸಲ್ಲ
ಸ್ಮರನೆಂಬೂ ಸಿರಿಕಳ್ಳ ಕರುಣ್ಯಲ್ಲ ॥೧॥

ಇಲ್ಲಿ ದಾಸರು ಶ್ರೀಲಕ್ಷ್ಮೀದೇವಿಯನ್ನು 'ಕರಿಗಮನೆ' ಅಂದರೆ ಗಜಗಮನೆಯೆಂದು ಸಂಭೋದಿಸಿ ರಂಗನಿಗೆ ಬರಹೇಳೆ'' ಎಂದು ಬೇಡಿಕೊಳ್ಳುತ್ತಾರೆ.''ಸಿರಿರಮಣ ಘನಾಂಗ''- ಎನ್ನುವಲ್ಲಿ ಭಗವಂತನ ವಿಶ್ವರೂಪದ ಪರಿಕಲ್ಪನೆಯನ್ನು ನೀಡಿದ್ದಾರೆ. "ಅರಘಳಿಗೆ ಸರಸವಲ್ಲ ಅರಸನಿಲ್ಲದವಳಸಲ್ಲ'' ಎನ್ನುವಲ್ಲಿ ದಾಸರು ಶ್ರೀಲಕ್ಷ್ಮೀ - ನಾರಾಯಣರ ಅಭಿನ್ನತೆಯನ್ನು ಕೊಂಡಾಡಿದ್ದಾರೆ. ''ಸ್ಮರನೆಂಬೊ ಸಿರಿಕಳ್ಳ ಕರುಣ್ಯಿಲ್ಲ''- ಎನ್ನು ವಲ್ಲಿ ನಮ್ಮ ಮನೋಕಾಮನೆಗಳನ್ನು ಹೆಚ್ಚಿಸಿ ಮನವನ್ನು ಕದ್ದ ಆ ಸಿರಿಕಳ್ಳ ನಮ್ಮ ಮೇಲೆ ಕರುಣೆ ಇಟ್ಟು ಬರಲಿ ಎಂದು ಲಕ್ಷ್ಮೀದೇವಿಯಲ್ಲಿ ಕೇಳಿ ಕೊಂಡಿ ದ್ದಾರೆ.

**ಇನ್ನು ಮುಂದಿನ ನುಡಿಯಲ್ಲಿ**

ಸುಂದರ ಸುಂದರ ಶುಭಮಂದಿರನ್ನ ದಯಾರಸ
ಸುಂದರನ್ನ ವರಕಂಬುಕಂದರನ್ನ
ಚೆಂದಾವರೆಗಣ್ಣವನ ಸಿಂಧೂರ ವರದನ್ನ - ದೇ -
ವೇಂದ್ರ ಜಿತ ಪಾರಿಜಾತ ತಂದನ್ನ ॥೨॥

ಇಲ್ಲಿ ದಾಸರು ಶ್ರೀನಿವಾಸನ ಸೌಂದರ್ಯವನ್ನು ವರ್ಣಿಸುತ್ತಾರೆ. ನಮ್ಮ ಶ್ರೀನಿವಾಸ ಅತೀ ಸುಂದರ ಶುಭಕೊಡುವವ, ಪರಮದಯಾಳು, ಶ್ರೇಷ್ಠವಾದ ಶಂಖದಂತೆ ಕತ್ತುಳ್ಳವನು, ತಾವರೆ ಕಣ್ಣಿನವನು, ಆನೆ ಮೊರೆ ಕೇಳಿ,ಲಕ್ಷ್ಮೀದೇವಿಗೆ ಹೇಳದೆ ಧಾವಿಸಿ ಬಂದು ತನ್ನ ಭಕ್ತ ಗಜರಾಜನನ್ನು ಹಾಗೂ ಭಕ್ತನ ಕಾಲು ಹಿಡಿದ ಮೊಸಳೆಯನ್ನು ರಕ್ಷಿಸಿದವನು ಅದಕ್ಕೆ ಹೇಳುತ್ತಾರೆ. ನಾವು ಭಗವಂತನ ಭಕ್ತರ ಪಾದ ಹಿಡಿದರೆ ನಮ್ಮ ಉದ್ಧಾರ ಖಂಡಿತ. ಅಲ್ಲದೇ ಮಡದಿಗಾಗಿ ದೇವೇಂದ್ರನೊಡನೆ ಯುದ್ಧ ಮಾಡಿ ಗೆದ್ದು ಪಾರಿಜಾತ ವೃಕ್ಷವನ್ನೇ ತಂದು ಕೊಟ್ಟವನು.

**ಇನ್ನು ಮುಂದಿನ ನುಡಿಯಲ್ಲಿ ಭಗವಂತ ಬಂದ ಪರಿಯನ್ನು ವರ್ಣಿಸುತ್ತಾರೆ ದಾಸರು**

ಹೋಯಿತೆ ಹೋಯಿತೆ ಹೊನ್ನಪ್ರಾಯ ಯದುರಾಯ ಬಾರ
ದಾಯಿತೀ ಅವಸ್ಥೆ ಹುಟ್ಟು ಹೊಂದಿ
ಕಾಯ ಬೇಕೆಂದೋಮ್ಮಿಗೆ ಉದಯವಾದ ಪ್ರಸನ್ನವೆಂಕಟ
ರಾಯ ಬಂದ ಫಲಿಸಿತಾನಂದ ॥3॥

ಇಲ್ಲಿ ದಾಸರು ಹೇಳುತ್ತಾರೆ - ಆ ಶ್ರೀನಿವಾಸನಿಗಾಗಿ ಕಾದು ಕಾದು ಪ್ರಾಯವೆಲ್ಲ ಸಂದು ಹೋಯಿತು. ಆದರೂ ಆತ ಬರಲಿಲ್ಲ. ಇನ್ನು ಯದು ರಾಯನಿಗೆ ಮುಂದಿನ ಜನ್ಮದಲ್ಲೂ ಕಾಯಬೇಕು ಎಂದುಕೊಳ್ಳುವ ಹೊತ್ತಿಗೆ ಪ್ರಸನ್ನ ವೆಂಕಟರಾಯ ಬಂದ.ಇದರಿಂದ ಅತಿ ಆನಂದ ಉಂಟಾಯಿತು ಪ್ರಾಯ ಅಂದರೆ ಯೌವನ ಎಂಬ ಅರ್ಥ ಮಾತ್ರವಲ್ಲ, ವಯಸ್ಸು ಎನ್ನುವ ಅರ್ಥ ಸಹ ಇದೆ. ಬಾಲ್ಯ-ಯೌವನ-ಮುಪ್ಪು ಹೀಗೆ ನಮ್ಮ ಆಯುಸ್ಸನ್ನೆಲ್ಲಾ ಭಗವಂತನ ಸೇವೆಗೇ ಮುಡಿಪಾಗಿಟ್ಟರೂ ಅವನ ಕೃಪೆ ಪಡೆಯುವುದು ಅಸಾಧ್ಯ. ಹಾಗಾಗಿ ಭಗವಂತನ ಸಾಕ್ಷಾತ್ಕಾರವಾಗಲು ಒಂದು ಜನ್ಮಸಾಲದು ಅನೇಕ ಜನ್ಮಗಳ ಸಾಧನೆಯಿಂದ ಮಾತ್ರ ಆತನ ಕೃಪೆ ಪಡೆಯಲು ಸಾಧ್ಯ ಎಂಬ ತತ್ವವನ್ನು ದಾಸರು ಇಲ್ಲಿ ಸೂಕ್ಷ್ಮವಾಗಿ ತಿಳಿಸಿದ್ದಾರೆ.

ಈ ಕೀರ್ತನೆಯಲ್ಲಿ ಜಗತ್ತಿಗೆ ತಾಯಿಯಾದ ಲಕ್ಷ್ಮೀದೇವಿಗೆ ಮೊರೆ ಹೋಗುವ ಭಕ್ತ, ರಂಗನನ್ನು '' ಕರೆತಾಕಿ ಕರೆತಾರೆ'' - ಎಂದು ಹಂಬಲಿಸಿ ಕೇಳುವ ಪರಿಯಲ್ಲಿ ಆತ್ಮನಿವೇದನೆ ಇದೆ. ರಂಗನಿಗಾಗಿ ಹಂಬಲಿಸುವ ಗೋಪಿಕೆಯರ ಹೃದಯದಲ್ಲಿ ತುಂಬಿದ ಮಧುರ ಭಾವನೆಯ ಹಂಬಲಿಕೆಯೂ ಇದೆ. ಇದೊಂದು ಮಧುರಭಾವ ಮತ್ತು ಆತ್ಮನಿವೇದನೆ ಎರಡು ಇರುವ ವಿಶಿಷ್ಟ ಕೃತಿಯಾಗಿದೆ.







# ಆಯುರ್ವೇದ ಮತ್ತು ನಾವು

- ಡಾ ॥ ಪ್ರದೀಪ್ ಕುಮಾರ್ ಹೆಬ್ರಿ
98440 18457

9



ಸಂಪೂರ್ಣ ಆಯುರ್ವೇದವನ್ನು ಪ್ರತಿಯೊಬ್ಬರೂ ಕಲಿತು ಅಭ್ಯಾಸ ಮಾಡುವ ಸಲುವಾಗಿ ಆ ಶಾಸ್ತ್ರವನ್ನು ಎಂಟು ವಿಭಾಗಗಳನ್ನಾಗಿಸಿದ್ದಾರೆ. ಅವು 1) ಕಾಯ ಚಿಕಿತ್ಸೆ 2) ಬಾಲರೋಗ 3) ಗ್ರಹಚಿಕಿತ್ಸಾ 4) ಉರ್ಧ್ವಾಂಗರೋಗ ವಿಜ್ಞಾನ 5) ಶಲ್ಯತಂತ್ರ 6) ವಿಷತಂತ್ರ 7) ರಸಾಯನ ಚಿಕಿತ್ಸೆ 8) ವಾಜೀಕರಣ.

**ಕಾಯಚಿಕಿತ್ಸೆ:** ಇದು ಇಡೀ ಶರೀರ ವ್ಯಾಪಿಯಾಗಿರುವ ಜ್ವರ, ಕ್ಷಯ, ಉದರರೋಗಾದಿಗಳ ವರ್ಣನೆ, ಕಾರಣ, ಲಕ್ಷಣ, ಸಾಧ್ಯಾಸಾಧ್ಯ ವಿಚಾರ, ಚಿಕಿತ್ಸಾಕ್ರಮ, ಉಪದ್ರವಗಳು, ಪಥ್ಯಾಪಥ್ಯ ವಿಚಾರ, ಆಹಾರ, ವಿಹಾರ, ಉಪಯುಕ್ತ ದ್ರವ್ಯಗಳು, ಔಷಧಿಗಳನ್ನು ತಯಾರು ಮಾಡುವ ಕ್ರಮ ಮತ್ತು ಸೇವಿಸುವ ರೀತಿ ಇವನ್ನು ಒಳಗೊಂಡಿದೆ.

**ಬಾಲರೋಗ:** ಇದನ್ನು 'ಕೌಮಾರಭೃತ್ಯ' ವೆಂದೂ ಹೇಳುತ್ತಾರೆ. ಹುಟ್ಟಿದ ದಿನದಿಂದ ಹದಿನಾರು ವರ್ಷಗಳ ತನಕ ಆಯಾ ವಯಸ್ಸಿಗೆ ಬರುವ ರೋಗಗಳ ವರ್ಣನೆ, ಚಿಕಿತ್ಸಾಕ್ರಮ, ರೋಗಗಳು ಬರದಂತೆ ನೋಡಿಕೊಳ್ಳುವ ವಿಧಾನ, ವಯೋನುಗುಣವಾಗಿ ಕೊಡಬೇಕಾದ ಆಹಾರ, ಸ್ತನ್ಯ ಪರೀಕ್ಷೆ, ದುಷ್ಟಸ್ತನ್ಯ ಶುದ್ಧಮಾಡುವ ಔಷಧಿಗಳು, ತಾಯಿ ಹಾಲಿಲ್ಲದಾಗ ಮಾಡಬೇಕಾದ ಇತರ ವ್ಯವಸ್ಥೆ. ರಾತ್ರಿ ಲಕ್ಷಣ, ಮಕ್ಕಳಿಗೆ ಬರುವ ಗ್ರಹಗಳ ಪೀಡೆಗಳ ವಿವರಣೆಯಾದಿ ವಿವರಗಳಿವೆ.

**ಗ್ರಹಚಿಕಿತ್ಸಾ:** ಇದಕ್ಕೆ ಮಾನಸರೋಗ ವಿಜ್ಞಾನ ಭೂತವಿದ್ಯಾ ಎಂಬ ಹೆಸರುಗಳೂ ಇವೆ ಮನಸ್ಸಿಗೆ ರಜೋಗುಣ ಮತ್ತು ತಮೋಗುಣಗಳೆಂಬ ಎರಡು ದೋಷಗಳಿವೆ. ಸತ್ವಗುಣವೇ ಮನಸ್ಸಿನ ಆರೋಗ್ಯ ಸಾಧನೆ ರಜೋ ಹಾಗೂ ತಮೋಗುಣದಿಂದ ಬರುವ ರೋಗಗಳ ಕಾರಣ ಲಕ್ಷಣ, ಚಿಕಿತ್ಸಾ ಕ್ರಮಗಳನ್ನು ವಿವರಿಸುವ ಮತ್ತು ಮಂತ್ರ ಯಂತ್ರಾದಿ ಪ್ರಯೋಗಗಳನ್ನು ಹೇಳುವ ಶಾಸ್ತ್ರವಿದು.

**ಊರ್ಧ್ವಾಂಗರೋಗ ವಿಜ್ಞಾನ:** ಇದು ಶಿರೋಭಾಗಕ್ಕೆ ಬರುವ ರೋಗಗಳನ್ನು ವಿವರಿಸುವ ಭಾಗವಾಗಿದೆ. ಇದರಲ್ಲಿ ತಲೆ, ಕಣ್ಣು, ಕಿವಿ, ಮೂಗು, ಗಂಟಲು, ಹಲ್ಲು ಮೊದಲಾದ ಅವಯವಗಳ ವಿವರಗಳು, ಅವುಗಳಿಗೆ ಸಂಬಂಧಿಸಿದಂತೆ ಹಲವಾರು ಬಗೆಯ ರೋಗ ಹಾಗೂ ನಿವಾರಣಾ ಕ್ರಮಗಳು ವಿವರಿಸಲ್ಪಟ್ಟಿವೆ.

**ಶಲ್ಯತಂತ್ರ:** ಇದನ್ನು ಶಸ್ತ್ರ ಚಿಕಿತ್ಸೆ ಎಂದೂ ಕರೆಯುತ್ತಾರೆ. ಪ್ರಸೂತಿ ತಂತ್ರವೂ ಈ ಭಾಗದಲ್ಲಿಯೇ ಬರುತ್ತದೆ. ಗರ್ಭಿಣಿಗೆ ಮತ್ತು ಗರ್ಭಕ್ಕೆ ಬರುವ ವಿಪತ್ತುಗಳು ಪ್ರಸವ ಕಾಲದಲ್ಲಿ ಆಗುವ ತೊಂದರೆಗಳಿಗೆ ಚಿಕಿತ್ಸೆ, ಶಸ್ತ್ರದಿಂದ ಗರ್ಭಸ್ಥ ಮಗುವನ್ನು ಕತ್ತರಿಸಿ ತೆಗೆದು ತಾಯಿಯನ್ನು ಬದುಕಿಸುವುದು... ಇತ್ಯಾದಿ ವಿವರಗಳಿವೆ.

**ವಿಷತಂತ್ರ :** ವಿಷೋತ್ಪತ್ತಿ ಸ್ಥಾವರ - ಜಂಗಮ ವಿಷಭೇದಗಳು, ವಿಷಸೇವಿಸಿದರೆ ಆಗುವ ಲಕ್ಷಣಗಳು, ಮಾಡಬೇಕಾದ ಚಿಕಿತ್ಸೆ ಇದರೊಡನೆ ವಿಷವನ್ನು ಕೊಟ್ಟವನನ್ನು ಕಂಡು ಹಿಡಿಯುವ ವಿಧಾನಗಳೂ ವರ್ಣಿಸಲ್ಪಟ್ಟಿದೆ.

**ರಸಾಯನ ಚಿಕಿತ್ಸೆ:** ಇದಕ್ಕೆ ಕಾಯಕಲ್ಪ ಎನ್ನುತ್ತಾರೆ. ಮುಪ್ಪನ್ನು ಹೋಗಲಾಡಿಸಿ, ಆಯುಷ್ಯವನ್ನು ಹೆಚ್ಚಿಸಿ, ಬುದ್ಧಿ, ಜ್ಞಾಪಕ, ಮೇಧಾಶಕ್ತಿಗಳನ್ನು ಕೊಟ್ಟು ಶಾರೀರಿಕ ಬಲವನ್ನು ಕುಗ್ಗಿಸದೆ ಅದು ನವ ತಾರುಣ್ಯದಿಂದಲೇ ಇರಲು ಮಾಡುವ ಚಿಕಿತ್ಸಾ ವಿಧಿಯಾಗಿದೆ. ಇದು ಅನೇಕ ನಿಯಮಗಳಿಂದ ಕೂಡಿದ ಆಹಾರ, ವಿಹಾರ ಮತ್ತು ಔಷಧಗಳ ಸೇವನಾಕ್ರಮವಾಗಿದೆ.

**ವಾಜೀಕರಣ ಚಿಕಿತ್ಸೆ:** ಇದು ಸತ್ಸಂತಾನವನ್ನು ಪಡೆಯಲು ದಂಪತಿಗಳು ಅನುಸರಿಸಬೇಕಾದ ವಿಧಿ, ಸೇವಿಸಬೇಕಾದ ಔಷಧಿಗಳನ್ನು ವರ್ಣಿಸುವ ಭಾಗ, ಶುಕ್ರಧಾತುವಿನ ದೋಷಗಳನ್ನು ಹೋಗಲಾಡಿಸಿ, ಶುಕ್ರವೃದ್ಧಿ ಮಾಡಿ ಪ್ರಹರ್ಷಣವಾಗಿ ಕೊಡುವ ವಿಧಾನವನ್ನು ತಿಳಿಯುತ್ತದೆ.

ಅಷ್ಟಾಂಗ ಚಿಕಿತ್ಸೆಯ ಸಂಬಂಧ ನಾವು ವಿವರಗಳನ್ನು ಚರಕ ಸಂಹಿತಾ, ಭೇಲಸಂಹಿತಾ, ಜತೂಕರ್ಣಸಂಹಿತಾ, ಪರಾಶರ ಸಂಹಿತಾ, ಹಾರೀತ ಸಂಹಿತಾ, ಅಗಸ್ತ್ಯ ಸಂಹಿತಾ, ಅತ್ರಿ ಸಂಹಿತಾ .. (ಕಾಯಚಿಕಿತ್ಸೆ), ಜೀವಿತತಂತ್ರ, ಪಾರ್ವತಕ ತಂತ್ರ, ಬಂಧಕತಂತ್ರ, ಬಾಲಗ್ರಹ ತಂತ್ರ (ಬಾಲರೋಗ) ಅಥರ್ವಣ ತಂತ್ರ (ಗ್ರಹಚಿಕಿತ್ಸಾ) ವಿದೇಹ ಸಂಹಿತಾ, ನಿಮಿತಂತ್ರ, ಶೌಕತಂತ್ರ, ಚಕ್ಷುಷ್ಯತಂತ್ರ, ಕೃಪಾತ್ರೇಯ ತಂತ್ರ (ಊರ್ಧ್ವಾಂಗ ರೋಗ ವಿಜ್ಞಾನ) ಸುಶ್ರುತ ಸಂಹಿತೆ, ಪೌಷ್ಕಲಾವತ ಸಂಹಿತೆ, ವತರಣತಂತ್ರ, ಭೋಜನ ಸಂಹಿತಾ, ಕರವೀರ್ಯ ತಂತ್ರ, ಕಪಿಲತಂತ್ರ, ಗೌತಮ ತಂತ್ರ - (ಶಲ್ಯತಂತ್ರ) ಕಾಶ್ಯಪಸಂಹಿತಾ, ಶೌನಕ ಸಂಹಿತಾ (ವಿಷತಂತ್ರ), ಕುಬುಮಾರುತಂತ್ರ. ಶಾಲಿಹೋತ್ರ ಸಂಹಿತಾ, ಗೌತಮ ಸಂಹಿತಾ (ವಾಜೀಕರಣ ಚಿಕಿತ್ಸೆ) ಮೊದಲಾದುವುಗಳಲ್ಲಿ ಕಾಣಬಹುದು.

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ
- ಅನುವಾದ :ಶ್ರೀಮತಿ

(ಕಳೆದ ಸಂಚಿಕೆಯಿಂದ)

ಕಲಿಯುಗಾರಂಭದಲ್ಲಿ ತೊಂಡಮಾನ ಚಕ್ರವರ್ತಿ ಶ್ರೀ ವೇಂಕಟರಮಣನ್ನು ಪಾದಪದ್ಮದಾದ್ಯಂತ್ಯ ಭಕ್ತಿ ಹೊಂದಿದವನಾಗಿ ಸಕಲ ವಿಧ ಪೂಜಾಕೈಂಕರ್ಯಗಳನ್ನು ನೆರವೇರಿಸುವವನಾಗಿರುವ ಸಮಯದಲ್ಲಿ ತಿರುಮಲೆಯ ಈಶಾನ್ಯ ದಿಗ್ಭಾಗದಲ್ಲಿ ಒಂದು ಅಡಿ ದೂರದಲ್ಲಿ "ಕುರುವೈ" ಎಂಬ ಗ್ರಾಮದಲ್ಲಿ ನಿತ್ಯನಿವಾಸಿಯಾದ ಶ್ರೀವೇಂಕಟೇಶ್ವರ ಪಾದಾರವಿಂದಗಳ ಮೇಲೆ ನಿರ್ವಧಿಕ ಭಕ್ತಿಯನ್ನು ಹೊಂದಿದವನಾದ ಒಬ್ಬ ವಿಷ್ಣು ಭಕ್ತಶ್ರೇಷ್ಠನು ಬೆಟ್ಟದ ತಪ್ಪಲಿನಲ್ಲಿ (ಕೆಳಗಿನ ಭಾಗ) ತನ್ನ ಶಕ್ತ್ಯಾನುಸಾರ ಕುಣಿಗಳನ್ನು ತೋಡಿ ನಂತರ ತನ್ನ ಕೈಗಂಟಿ ಕೊಂಡಮಣ್ಣನು ತೆಗೆದು, ಆ ಮಣ್ಣಿನಿಂದ ನಾಲ್ಕು ಹೂಗಳನ್ನು ಮಾಡಿ ಆ ಹೂವುಗಳನ್ನು ಶ್ರೀವೆಂಕಟೇಶ್ವರನ ಚರಣಕಮಲಗಳಿಗೆ ಭಕ್ತಿಯಿಂದ ಪ್ರತಿನಿತ್ಯ ಸಮರ್ಪಿಸುತ್ತಿದ್ದನು. ಆತನು ಚರಮಶರೀರಿ (ಮೋಕ್ಷಗಾಮಿಯಾದುದರಿಂದ ಈ ಶರೀರವನ್ನು ಕರೆದೊಯ್ಯಬಹುದು) ಯಾದ್ದರಿಂದ ಆತನು ಸಮರ್ಪಿಸಿದ ಪುಷ್ಪಗಳು ಚಕ್ರವರ್ತಿಯು ಸಮರ್ಪಿಸಿದ ಬಂಗಾರದ ಕುಸುಮಗಳ ಮೇಲಿರಲು ಆ ಸಂಗತಿಯು ಚಕ್ರವರ್ತಿಗೆ ಒಂದು ದಿನ ಅರ್ಚಕರ ಮೂಲಕ ತಿಳಿಯಲು, ತಾನು ಸ್ವತಃ ಕಂಡು ಅಂತಹ ಪರಮ ಭಕ್ತನು ಯಾರೆಂದು ನನಗೆ ತಿಳಿಸಬೇಕೆನ್ನಲು ಸ್ವಾಮಿಯು ಅದು ಸಾಧ್ಯವಿಲ್ಲ ಎಂದಿದ್ದಾನೆ. ಚಕ್ರವರ್ತಿಯು ಹೇಳಿಯೇ ತೀರಬೇಕೆಂದು ಕೇಳಿದ್ದಾನೆ.ಆ ಭಕ್ತನು ತನ್ನ ಕುರಿತು ಯಾರಿಗೂ ಹೇಳಬೇಡ.ಹೇಳಿದ್ದೇ ಆದರೆ ನಾನು ಮರಣಿಸುತ್ತೇನೆ ಎಂದು ಮುಂಚಿತವಾಗಿಯೇ ಆ ಭಕ್ತನು (ಕುರುವೈ ನಂಬಿಯ ಆ ಭಕ್ತನು) ಹೇಳಿದ್ದನಂತೆ.ಆದ್ದರಿಂದ ಸ್ವಾಮಿಯು ಅದನ್ನು ಪ್ರಚುರಪಡಿಸಲಿಲ್ಲ.ಚಕ್ರವರ್ತಿಯು ಸ್ವಾಮಿಯ ಮೇಲೆ ನಿರ್ಬಂಧ ಹೇರಲು, ಶ್ರೀನಿವಾಸನು ತನ್ನ ಭಕ್ತನಿಗೆ ಅವಸಾನವುಂಟಾಗಬಾರದೆಂದು ತನ್ನ ಭಕ್ತನು ಇಂತಹವನು ಎಂದೂ, ಇಂತಹ ಊರಿನಲ್ಲಿರುವನೆಂದು ತಿಳಿಸಿದ್ದಾನೆ. ಆ ಭಕ್ತನ ನಿವೇಶನವು ತಿಳಿದ ಕೂಡಲೇ ಚಕ್ರವರ್ತಿಯು ಹೊರಟೇ ಬಿಟ್ಟನು. ಆ ಭಕ್ತಿಯನ್ನು ಪರೀಕ್ಷಿಸಲೆಂದೇ ಚಕ್ರವರ್ತಿ ಹೊರಟ್ಟಿದ್ದನು.ಆಗ ನೀನೊಬ್ಬನೇ ಆತನನ್ನು ಕಾಣಲಾಗುವುದಿಲ್ಲ ಎಂದು ಎಚ್ಚರಿಸಿದನು ಸ್ವಾಮಿ ಹಾಗೆಯೇ ಚಕ್ರವರ್ತಿ ಹೊರಟು ಆತನ ಊರನ್ನು ಸೇರಿ ಆತನ ಮುಂದೆ ನಿಲ್ಲಲು, ದಿವ್ಯ ಜ್ಞಾನಿಯಾದ ಆ ಭಕ್ತನಿಗೆ ಎದುರು ನಿಂತವರು ಚಕ್ರವರ್ತಿಯೇ ಎಂದು ತಿಳಿದು ಶ್ರೀವೆಂಕಟೇಶ್ವರನು ತನ್ನ



ಕುರಿತು ಪ್ರಕಟಿಸಿದ್ದಾನೆ ಇನ್ನೂ ಈ ಶರೀರ ನನಗೆ ಬಲ್ಲದು ಎಂದರಿತು ತನ್ನ ಕೈಯಲಿದ್ದ ಕುಡಿಕೆಗಳನ್ನು ಮಾಡುವ ಸಾಧನವಾದ ಗುದ್ದಲಿಯಿಂದ ತಲೆಯ ಮೇಲೆ ಹೊಡೆದು ಕೊಂಡಿದ್ದಾನೆ. ಅಂದು ಶುಕ್ರವಾರವಾದ್ದರಿಂದ ಆಗ ಶ್ರೀನಿವಾಸನಿಗೆ ಅಭಿಷೇಕದ ಸಮಯವಾಗಿದ್ದು ಕಿರೀಟವೇ ಮೊದಲಾದ ಆಭರಣಗಳನ್ನು ತೆಗೆದು ಹಾಕುವ ಸಮಯದಲ್ಲಿ ಯಥಾರೂಪದಿಂದಲೇ ಆ ಭಾಗವತನಿಗೆ ದರ್ಶನವನ್ನು ಅನುಗ್ರಹಿಸಿ ಆತನನ್ನು ಸ್ವೀಕರಿಸಿದುದರಿಂದ ವೆಂಕಟಾಚಲಪತಿಯು ಆಶ್ರಿತ ಪರತಂತ್ರನೆಂದೂ ಆಪದ್ಬಾಂಧವನೆಂದು ಇತರ ಪಾಮರರು ತಿಳಿದು ಧನ್ಯರಾಗಬೇಕೆಂದು ಶ್ರೀಭಗವದ್ರಾಮಾನುಜರು ತಮ್ಮ ಪವಿತ್ರ ಹೃದಯದಲ್ಲಿ ನೆನೆದು ಆ ಕುರುವೈ ಗ್ರಾಮದಲ್ಲಿ ಆಭರಣಗಳಿಲ್ಲದ ಶಿರದೊಂದಿಗೆ ಸ್ವಾಮಿ ಸನ್ನಿಧಿಯಲ್ಲಿ ಉಟ್ಟ ಬಟ್ಟೆಯಲ್ಲೇ ಆ ಭಕ್ತನಿಗೆ ಸಹಾ ವಿಗ್ರಹವನ್ನು ನಿರ್ಮಿಸಿ ಗುಡಿಯನ್ನು ಕಟ್ಟಿಸಿ, ಅಂದಿನ ದಿನವೇ ಪ್ರತಿಷ್ಠಾಪನೆ ಮಾಡಿ ನಿತ್ಯಾರಾಧನೆ ಜರುಗುವಂತೆ ಏರ್ಪಾಟು ಮಾಡಿದ್ದಾರೆ.

ದೊಡ್ಡ ತಿರುಮಲನಂಬಿ ತಿರುಮಲೆಯಲ್ಲಿ ಶ್ರೀವೆಂಕಟೇಶ್ವರನಿಗೆ ಅನುದಿನವೂ ಪಾಪವಿನಾಶ ತೀರ್ಥದಿಂದ "ಪೆರಿಯ ತಿರುಮುಳಿ"ಪದ್ಯವನ್ನು ಅನುಮೋದಿಸುತ್ತಾ ಅಭಿಷೇಕ ತೀರ್ಥವನ್ನು ತರುವ ಕಾಯಕವನ್ನು ನೆರವೇರಿಸಲಾಗುತ್ತಿತ್ತು. ಹಾಗೆ ಹೊತ್ತು ತರುವ ಉದಕದ ಕೈಂಕರ್ಯವು ತನಗೆ ಅದೆಷ್ಟೋ ಪ್ರೀತಿಕಾರಕವೆಂದು ಎಲ್ಲರಿಗೂ ತಿಳಿಯಪಡಿಸಬೇಕೆಂದೆಣಿಸಿ ಶ್ರೀವೆಂಟೇಶ್ವರನೊಂದು ದಿನ ತಿರುಮಲನಂಬಿ ಅಭಿಷೇಕೋದಕವನ್ನು ತರುವ ಹಾದಿಯಲ್ಲಿ ಒಂದು ವೃಧ್ಧಾ ಕೃತಿಯನ್ನು ಧರಿಸಿ ಬಾಗಿದ ಭಂಗಿಯಲ್ಲಿ ಶ್ರೀಶೈಲಪೂರ್ಣರ ಮುಂದೆ ಬಂದು ನಿಂತಿದ್ದಾನೆ."ತಾತಾ ಮನುಷ್ಯಾಕೃತಿಯವನಲ್ಲ" ಎಂದು ಮಾರುತ್ತರ ನೀಡಿ ತಲೆಯ ಮೇಲೆ ತೀರ್ಥವನ್ನಿಟ್ಟುಕೊಂಡು "ತಿರುಮುಳಿ" ಯನ್ನು ಪಠಿಸುತ್ತಾ ಮುಂದೆ ಹೊರಟು ಹೋಗಿದ್ದಾರೆ.ವೃದ್ಧರು ತಿರುಮಲನಂಬಿಗೆ ತಿಳಿಯದಂತೆ ಅವರ ಹಿಂದೆಯೇ ಹೋಗುತ್ತಾ ಅವರ ಕೈಯಲ್ಲಿದ್ದ ನೀರಿನ ಮಡಿಕೆಗೆ ರಂಧ್ರವನ್ನು ಮಾಡಿ,ಆ ರಂಧ್ರದಿಂದ ಧಾರಾಕಾರವಾಗಿ ಸ್ರವಿಸುವ ತೀರ್ಥವನ್ನು ಬೊಗಸೆ ಮಾಡಿ ಕುಡಿದಿದ್ದಾರೆ. ಶ್ರೀಶೈಲಪೂರ್ಣರು ಮಡಿಕೆಯಲ್ಲಿ ಜಲವೆಲ್ಲಾ ಸೋರಿ ಹೋಗುತ್ತಿರಲು ಆ ಮಡಿಕೆಯು ಮುರಿದಿರುವುದನ್ನು ತಿಳಿದು ಹಿಂದಿರುಗಿ ನೋಡಿದ್ದಾರೆ.

ಪಾಮರನ ದುಷ್ಟತನವನ್ನು ನೋಡಿ "ಓಯ್! ಅಧಮನೇ! ಶ್ರೀವೇಂಕಟೇಶ್ವರನಿಗಾಗಿ ತೆಗೆದುಕೊಂಡು ಹೋಗುತ್ತಿದ್ದ ವಿಷಯದಲ್ಲಿ ನೀನು ಅಪರಾಧವೆಸಗಿದೆ" ಎಂದು ನುಡಿದರು. ಆತನು ತಿರುಮಲನಂಬಿಯನ್ನು ನೋಡಿ ನೀವು ವಿಚಾರಿಸುವ ಅಗತ್ಯವಿಲ್ಲ ಸಮೀಪವಿರುವ ಪುಷ್ಕರಿಣಿಯನ್ನು ತೋರಿಸುವೆ ಬನ್ನಿ" ಎಂದು ಆಕಾಶಗಂಗತೀರ್ಥದ ಕಡೆಗೆ ಕರೆದೊಯ್ಯದನು ಆದರೆ ಆ ಮಡುವಿನಲ್ಲಿ ನೀರಿಲ್ಲದಿರುವುದನ್ನು ಕಂಡು ಬಾಣವನ್ನು ಹೂಡಿ, ಒಂದು ಗುಂಡು ಕಲ್ಲು ನೆಲದೊಳಗೆ ಹೋಗುವಂತೆ ಮಾಡಿ,ಹಿಂದಿರುಗಿ ಮೇಲೆತ್ತಿದನು ಕೂಡಲೇ ಬಾಣವು ತಗಲಿದ ಗುಂಡಕಲ್ಲಿನ ಕೆಳಗಡೆಯಿಂದ ಜಲಧಾರೆಯಾಗಿ ಹೊರಚಿಮ್ಮಿತು. ನಂತರ ವ್ಯಾಧಿರೂಪದಲ್ಲಿದ್ದ ಶ್ರೀವೇಂಕಟಾಚಲಪತಿ "ತಾತಾ" ಈ ತೀರ್ಥದಿಂದ ನಮಗೆ ಅನುದಿನವೂ ನೀರನ್ನು ತಂದು ಕೊಡು ಎಂದು ಹೇಳಿ ತನ್ನ ಈಶ್ವರತ್ವವನ್ನು (ಪರಮಾತ್ಮ ತತ್ವವನ್ನು) ಸ್ಮರಣೆಗೆ ತಂದುಕೊಂಡು ಹಿಂದಿರುಗಿ ಹೋದನು.

ಆನಂತರ ತಿರುಮಲನಂಬಿಯ ಆ ಅದ್ಭುತವನ್ನು ನೆನೆದು ಶ್ರೀವೇಂಕಟಾಚಲಪತಿಯನ್ನು ಕಣ್ಣಾರೆ ಕಂಡ ಕ್ರೀಡಾರಸವು ಪರಮಾದ್ಭುತವು' ಎಂದು ಹಿಗ್ಗಿದ ಮನಸಿಂದ ಸಂತಸಗೊಂಡು ಆ ತೀರ್ಥಶಿಲೆಯಿಂದ ಹೊರಬಂದ ಅಭಿಷೇಕ ತೀರ್ಥವು ಹೊರಹೊಮ್ಮಿ ಸ್ವಾಮಿ ಸನ್ನಿಧಿಯಲ್ಲಿ ಮಜ್ಜನಕ್ಕೇಂದೇ ಸಮರ್ಪಿಸಲಾಯಿತು. ಶ್ರೀನಿವಾಸ ಭಗವಂತನು ಅರ್ಚನ ರೂಪವನ್ನು ಶ್ಲಾಘಿಸಿ'ತಿರುಮಲನಂಬಿ! ನೀವು ತೆಗೆದುಕೊಂಡು ತೀರ್ಥದಿಂದಾಗಿ ದಾರಿ ಮಧ್ಯದಲ್ಲೇ ದಾಹವು ತೀರಿ ಹೋಗಿದೆ. ಎಂದು ಕರುಣೆಯಿಂದ ನುಡಿಯಲು ಶ್ರೀಶೈಲಪೂರ್ಣರು ಇದೆಂಥ ಅನುಗ್ರಹವಿಧಾನವು? ಆಶ್ಚರ್ಯಚಕಿತವು ಎಂದು ಸಂತುಷ್ಟರಾಗಿ ಅಂದಿನಿಂದ ಪ್ರತಿದಿನವೂ ಆಕಾಶಗಂಗಾ ತೀರ್ಥದಿಂದ ತಿರುವಂಜನ ಕೈಂಕರ್ಯವನ್ನು ನೆರವೇರಿಸನುವಾದರು. ಹಲವು ದಿನಗಳು ಕಳೆದ ಬಳಿಕ ತಿರುಮಲನಂಬಿ ಅತಾಸಮಾಪ್ತಿ, (ಮೃತರಾಗಲು) ಶ್ರೀ ಭಗವದ್ರಾಮಾನುಜರು ಈ ಸಂಗತಿಯನ್ನು ಕೇಳಿ ಅವರ ಚರಣಾರವಿಂದಗಳ ಮೇಲೆ ಪ್ರೇಮಾತಿಶಯದಿಂದ ಆ ದಿನ ತಿರುಮಲನಂಬಿಯನ್ನು ಮಾರ್ಗಮಧ್ಯದಲ್ಲಿ ಅನುಗ್ರಹಿಸಿದ ದಿನದ ಅಧ್ಯಯನೋತ್ಸವಕ್ಕಾಗಿ ಮಾರನೇ ದಿನವೇ ಆ ತಿರುಮಜ್ಜನ ಕೈಂಕರ್ಯ ಮಹೋತ್ಸವವನ್ನು ಶ್ರೀನಿವಾಸನು ಪ್ರತಿಸಂವಜದಂತೆ ಅಧ್ಯಯನೋತ್ಸವವನ್ನು ಮರುದಿನ ಮುಗಿಸುವಂತೆ ಕಟ್ಟಳೆಯನ್ನು ಮಾಡಿದ್ದಾರೆ.

(-ಮುಂದುವರೆಯುತ್ತದೆ.)



**ಧಾರಾವಾಹಿ**

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

## ಹಿಂದಿನ ಸಂಚಿಕೆಯಿಂದ

"ಬೆಟ್ಟವಾಗಲಿ, ಬೆಟ್ಟದ ನದಿಯಾಗಲೀ, ಎಡೆಯಾಗಲೀ, ಅಷ್ಟಾಗಿ ಈ ಆಳ್ವಾರರ ಮನಸೆಳೆಯಲಿಲ್ಲ ಅವರ ಒಲುಮೆ ಹೀರಿಕೊಂಡಿದ್ದು ಬೆಟ್ಟದ ಮೇಲೆ ನಿಂತ ದೈವ. ಈ ದೈವ ತನ್ನ ನೆಲೆಗೆ ಆರಿಸಿಕೊಂಡ ಬೆಟ್ಟ ಇದೆಂದು ಬೆಟ್ಟದ ಹಿರಿಮೆ ಅಷ್ಟೇ" ಎಂದು ರಾಮಚಂದ್ರರಾಯರು ೨೪ ನೇ ಪುಟದಲ್ಲಿ (ತಿರುಪತಿ ತಿಮ್ಮಪ್ಪ) ವಿವರಿಸಿರುವುದು ಜಿಜ್ಞಾಸಾರ್ಹವಾದ ಹೇಳಿಕೆ. " ಆ ಆಳ್ವಾರರ ಕಾಲದಲ್ಲಿ ಕ್ಷೇತ್ರ ಮಾಹಾತ್ಮ್ಯೆಯ ಗೀಳು ಇನ್ನೂ ಬೆಳೆದಿರಲಿಲ್ಲವೇನೋ?" ಎಂದು ರಾಯರು ಪ್ರಶ್ನಿಸುತ್ತಾರೆ.

ಆದರೆ ನಮಗೆ ಕಂಡು ಬರುವುದು ಈ ಆಳ್ವಾರುಗಳೆಲ್ಲಾ ಈ ಮಲೆಯನ್ನೇ ವರ್ಣಿಸಿದ್ದಾರೆ. ಅದರ ಮೇಲಿನ ಬಿದುರುಕಾಡು, ಆಡುವ ಮೋಡ, ಹರಿಯುವ ಝರಿ, ಓಡುವ ನದಿ, ಬೀಳುವ ಜಲಪಾತ, ಕಾಲುವೆಗಳು ವಾಸಿಸುವ ಹುಲಿ, ಹೆಬ್ಬಾವು, ಆನೆ - ಇವುಗಳ ವಿಹಾರಗಳು, ಕಪಿಗಳು, ಹಂದಿಗಳು, ಕುರವರು, ಬೇಡರು ಮುಂತಾದ, ಸಾಮಾಜಿಕ ಪ್ರಾಕೃತಿಕ ಚಿತ್ರಗಳನ್ನು ಮನರಂಜಿಸುವಂತೆ ವರ್ಣಿಸಿ ಅಂತಹ ವೇಂಗಡದ ಮೇಲೆ ನಮ್ಮ ಸ್ವಾಮಿ ನೆಲಸಿದ್ದಾನೆ. ಅಂತಹ ಸುಂದರ ಪರ್ವತವನ್ನು , ವೈಕುಂಠವನ್ನು ಕೂಡಾ ತ್ಯಜಿಸಿ ವಾಸಸ್ಥಾನ ಮಾಡಿಕೊಂಡಿದ್ದಾನೆ ಎಂದು ವರ್ಣಿಸಿದ್ದಾರೆ. ಅವರ ಪಾಶುರಗಳನ್ನೆಲ್ಲಾ ಪ್ರಕೃತಿ ವರ್ಣನೆಯೇ ಶೇಕಡಾ ಎಪ್ಪತ್ತೈದು ಭಾಗ ಆಕ್ರಮಿಸಿವೆ. ಇನ್ನು ಈ ಪರ್ವತವೇ ಪಾಪನಾಶ ಮಾಡುತ್ತದೆ. ವರಪ್ರಸಾದಿ ಹಾಡಿದರೆ ಪರ್ವತವನ್ನೇ ಹಾಡುತ್ತೇನೆ ಎಂಬುದಾಗಿ ಅರ್ಥ ಬರುವ ಪಾಶುರಗಳನ್ನು ರಚಿಸಿದ್ದಾರೆ. ಇವುಗಳಿಂದ ಆಳ್ವಾರುಗಳ ಪ್ರಕೃತಿಪ್ರಿಯತೆ, ವರ್ಣನಾ ಕೌಶಲ್ಯ ಇವುಗಳು ನಮ್ಮ ಮನಸ್ಸನ್ನು ಸೆರೆಹಿಡಿಯುತ್ತದೆ ಸೂರೆಗೊಳ್ಳುತ್ತದೆ. ಆಳ್ವಾರುಗಳು ಈ ಬೆಟ್ಟವನ್ನೇ ಪರಮಾತ್ಮನ

ರೂಪದಂತೆ, ಅವನು ವೈಕುಂಠವನ್ನು ತ್ಯಜಿಸಿ ಅಲ್ಲಿ ನೆಲಸಿರುವುದರಿಂದ ಭೂವೈಕುಂಠವೆನ್ನುವಂತೆ ಭಾವಿಸಿ ಸ್ತುತಿಸಿದ್ದಾರೆ. ಈ ರೀತಿಯ ಕ್ಷೇತ್ರ ಮಹಾತ್ಮ್ಯೆ ತುಂಬಿ ತುಳುಕಾಡುವುದನ್ನು ಈ ಪಾಶುರಗಳ ಮನನದಿಂದ ಅರಿಯಬಹುದಾಗಿದೆ. ಈ ದೃಷ್ಟಿಯಿಂದ ರಾಮಚಂದ್ರರಾಯರ ವಿವರಣೆ ತಪ್ಪಾಗುತ್ತದೆ ಎನ್ನಿಸುತ್ತದೆ.

ಮಾಯಾವೀ ಪರಮಾನಂದಂ ತ್ಯಕ್ತ್ವಾ ವೈಕುಂಠ ಮುತ್ತಮಂ
ಸ್ವಾಮಿ ಪುಷ್ಕರಿಣೀ ತೀರೇ ರಮಯಾ ಸಹ ಮೋದತೇ

ಎಂದು ಒಬ್ಬ ಪ್ರಾಚೀನ ಕವಿ ವರ್ಣಿಸಿದರೆ,

ಶ್ರೀ ವೈಕುಂಠ ವಿರಕ್ತಾಯ ಸ್ವಾಮಿ ಪುಷ್ಕರಿಣೀ ತಟೇ
ರಮಯಾ ರಮಮಾಣಾಯ ವೇಂಕಟೇಶಾಯ ಮಂಗಳಂ

ಎಂಬುದಾಗಿ ಆಚಾರ್ಯರೊಬ್ಬರು ಕೀರ್ತಿಸುತ್ತಾರೆ. ಮೇಲಿನ ಶ್ಲೋಕದ ಅರ್ಥವನ್ನೇ ಬೇರೊಂದು ರೀತಿ ಈ ಶ್ಲೋಕ ವಿವರಿಸುತ್ತದೆ. ಇದನ್ನು ಪರಿಶೀಲಿಸಿದಾಗ ಈ ಪರ್ವತದ ಸೊಬಗೇ ನಮ್ಮ ಕಣ್ಣು ಮುಂದೆ ನಿಲ್ಲುತ್ತದೆಯಲ್ಲವೆ? ವೆಂಕಟಾಚಲ ಮಹಾತ್ಮ್ಯದಲ್ಲಿ ಬರುವ ವಿಷ್ಣು ಲಕ್ಷ್ಮೀಯರ ವಿರಸ, ಭೃಗುಋಷಿಯ ಶಾಪ, ಲಕ್ಷ್ಮೀಯು ವೈಕುಂಠವನ್ನು ತೊರೆದು ಗಂಡನ ಮೇಲಿನ ಕೋಪದಿಂದ ಕೊಲ್ಹಾಪುರವನ್ನು ಸೇರಿದ್ದು, ವಿಷ್ಣು ಅವಳ ಮೇಲಿನ ವಿರಹದಿಂದ ಅನ್ನಪಾನಗಳಿಲ್ಲದೆ ಹುತ್ತವನ್ನು ಸೇರಿದ್ದು , ವಕುಳಮಾಲಿಕೆಯ ಆಶ್ರಯ ದೊರೆತಿದ್ದು ಪದ್ಮಾವತಿ ದೇವಿಯೊಡನೆ ಪ್ರಣಯ,ವಕುಳ ಮಾಲಿಕೆಯ ಸಂಧಾನದಿಂದ ಮದುವೆಯಾದದ್ದು, ಮದುವೆಗೆ ಕುಬೇರನಲ್ಲಿ ಸಾಲ,ಮದುವೆಗೆ ದೇವಾದಿ ದೇವತೆಗಳ ಆಗಮನ, ವರಾಹ ದೇವರೊಡನೆ ಭೂಮಿಯನ್ನು ಪಡೆಯಲು ಒಪ್ಪಂದ, ಲಕ್ಷ್ಮಿ ಕೋಪ ಶಾಂತವಾದ ನಂತರ ಬಂದು ತನ್ನ ಗಂಡ ಬೇರೊಬ್ಬಳನ್ನು ಮದುವೆ ಆಗಿರುವುದನ್ನು ಕಂಡು ಕಾಡುವುದು, ಇಬ್ಬರ ಹೆಂಡಿರ ಜಗಳದಿಂದ ಬೇಸತ್ತ ಶ್ರೀನಿವಾಸನು ಕಲ್ಲಾಗಿ ನಿಂತಿದ್ದು ಈ ಎಲ್ಲಾ ಪುರಾಣ ನಿರ್ಮಿತ ಕತೆಗಳೂ ಕಲ್ಪಿತವೆಂಬುದಾಗಿ ಸ್ಪಷ್ಟಪಡುತ್ತಿದೆ. ಏತಕ್ಕೆಂದರೆ ಇಲ್ಲಿ ದೇವನು ಲಕ್ಷ್ಮಿಯೊಡನೆ ವಿಹಾರ ನಡೆಸಲು ವೈಕುಂಠದಲ್ಲೂ ವಿರಕ್ತಿ ಹೊಂದಿ ಬಂದು ಸಂತೋಷದಿಂದ ನಲಿಯುತ್ತಿರುವ ಚಿತ್ರಣ ದೊರಕುತ್ತದೆ. ಇಂತಹ ಸೊಬಗಿನ ತಾಣ ತಿರುವೇಂಗಡವೆಂಬುದಾಗಿ ವಿಷಯ ಸಿದ್ಧವಾಗುತ್ತದೆ.

ಈ ದೃಷ್ಟಿಯಿಂದಲೇ "ವೇಂಗಡಗಳ್ ಮೈಮೇಲ್ ವಿನೈಮುತ್ತಮಂ"ಎಂಬುದಾಗಿ ನಮ್ಮಾಳ್ವಾರ್ ಹಾಡುತ್ತಾರೆ. ಕಡಂ ಎಂದರೆ ಸಕಲ ವಿಧವಾದ ಋಣಗಳು ಎಂದು ಅರ್ಥ. ಭಗವತ್ಕೈಂಕರ್ಯಕ್ಕೆ ಪ್ರತಿಬಂಧಕವಾಗಿರುವ ಜನ್ಮ ಸಂಬಂಧವಾದ ಕರ್ಮಗಳು (ಕಡಂ) ಈ ಲೋಕ ವ್ಯಾಪಾರ ಸಂಚಿತವಾಗಿರ ತಕ್ಕ ಕರ್ಮ. ಮೇಲ್ವಿನೈ ಎಂದರೆ ಮುಂದೆ ಸಂಚಿತವಾಗ ತಕ್ಕ ಕರ್ಮಗಳೂ ಸೇರಿ "ಮುತ್ತವುಂ ವೇಂ" ಎಂದರೆ ನಿಶ್ಶೇಷವಾಗಿ ಸಕಲವೂ ನಾಶವಾಗುವ ಅರ್ಥ ಈ ಪರ್ವತವನ್ನು ಸೇವಿಸುವುದರಿಂದ ಲಭಿಸುತ್ತಿದೆ ಎನ್ನುತ್ತಾರೆ. ಈ ವ್ಯಾಖ್ಯಾನ ಬಹಳ ಸೊಗಸಾಗಿದೆ. ಯಾರೂ ಇಷ್ಟೊಂದು ಸುಂದರವಾದ ಅರ್ಥ ವಿವರಣೆ ಮಾಡಿಲ್ಲ ಎಂದೇ ಹೇಳಬೇಕು.

'ವೇಂಗಡ' ಎನ್ನುವ ತಮಿಳು ಪದದಿಂದಲೇ 'ವೇಂಕಟ' ಎನ್ನುವ ಸಂಸ್ಕೃತ ರೂಪ ಆವಿರ್ಭವಿಸಿರಬಹುದಾದ ಸಾಧ್ಯತೆಯನ್ನು ಶ್ರೀರಾಮಚಂದ್ರರಾಯರು ವಿವರಿಸಿದ್ದಾರೆ. ವೇಂಗಡವೇ ಪ್ರಾಚೀನರೂಪ. ಅದರಿಂದ ಸಂಸ್ಕೃತದ ಸಮಾನ ಪದವಾದ ವೇಂಕಟ ನಂತರ ಹೊಂದಿಸಲ್ಪಟ್ಟಿದೆ ಎನ್ನುವ ವಾದದಲ್ಲಿ ತಥ್ಯವನ್ನು ನಾವು ಕಂಡುಕೊಳ್ಳಬಹುದು. ಏತಕ್ಕೆಂದರೆ 'ವೇಂಕಟ' ಎನ್ನುವ ಪದಕ್ಕೆ ಒಂದು ಸರಿಯಾದ ವ್ಯಾಖ್ಯಾನವನ್ನು ನಾವು ಪುರಾಣಗಳಲ್ಲಿ ಕಾಣಲಾರೆವು.

**ವರಾಹಾ ಪುರಾಣವು**

ಸರ್ವ ಪಾಪಾನಿ ವೇಂ ಪ್ರಾಹುಃ ಕಟಸ್ತದ್ದಾಹ ಉಚ್ಯತೇ
ಸರ್ವ ಪಾಪಾಪಹಾರಿತ್ವಾತ್ ವೇಂಕಟಾದ್ರಿರಿತಿಸ್ಮೃತಃ

ಎನ್ನುವುದಂತೆ.

'ವೇಂ' ಎಂದರೆ ಸರ್ವಪಾಪ ಎಂಬುದಾಗಿಯೂ, 'ಕಟ' ವೆಂದರೆ ದಹಿಸಲ್ಪಡುತ್ತದೆ ಎಂಬುದಾಗಿಯೂ ಅರ್ಥ. 'ವೇಂಕಟ' ವೆಂದಾಗ ಸರ್ವಪಾಪಗಳನ್ನೂ ದಹಿಸುವ ಜಾಗ ಎಂದೂ ಅರ್ಥ ಮಾಡಬಹುದು. (-ಮುಂದುವರೆಯುತ್ತದೆ.)



# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



ಕಾಶೀರಾಜ ಮತ್ತು ವಿದೇಹ ವಂಶಗಳು ವೀರ ವಂಶಗಳೆಂದೇ ಹೆಸರು ವಾಸಿಯಾಗಿದ್ದವು. ಈ ಎರಡೂ ವಂಶಗಳಲ್ಲಿ ಸದಾ ವೀರರೇ ಹುಟ್ಟುತ್ತಿದ್ದರು. ಇದು ಉಪನಿಷತ್‌ಕಾಲದಿಂದಲೂ ನಡೆದುಕೊಂಡು ಬರುತ್ತಿತ್ತು. ಉಪನಿಷತ್‌ಕಾಲದಲ್ಲಿ ಮಹಾವೀರರು ಯಾರೆಂದು ಕೇಳಿದರೆ ಕಣ್ಮುಚ್ಚಿಕೊಂಡು ಎಲ್ಲರೂ ಕಾಶೀರಾಜ ಮತ್ತು ವಿದೇಹ ರಾಜ ಎಂದು ಹೇಳುತ್ತಿದ್ದರು . ಬೃಹದಾರಣ್ಯ ಕೋಪನಿಷತ್‌ನಲ್ಲಿ ಒಂದೆಡೆ ಯಥಾ ಕಾಶ್ಯೋವಾ ವೈದೇಹೋವಾ ಉಗ್ರಂ ಧನುರಧಿತ್ಯುಂ ಕೃತ್ವಾ' ಎಂದು ಹೇಳಿದ್ದಾರೆ. ಆದ್ದರಿಂದ ಅಂತಹಾ ವೀರರವಂಶದಲ್ಲಿ ಹುಟ್ಟಿದ ಕಾಶೀರಾಜ ಅವರ ಪಕ್ಷದಲ್ಲಿ ಸೇರುವುದೆಂದರೇನು? ನನ್ನಕಡೆ ಇರಬೇಕಲ್ಲವೇ? ಇದು ದುರ್ಯೋಧನನ ಅಸೂಯೆಗೆ ಕಾರಣವಾಗಿತ್ತು ಇಲ್ಲಿ ಕಾಶಿರಾಜಃ ಎಂದು ಇದೆಯಲ್ಲಾ ಇದು ಸ್ವಾರಸ್ಯಕರವಾಗಿ ಮತ್ತೊಂದು ರೀತಿಯಲ್ಲಿ ಅರ್ಥವಾಗುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ ಕಾಶೀರಾಜಃ ಎಂದು ಹೇಳೀ ಇಲ್ಲೂ ಕಾಶಿರಾಜಃ ಎಂದು ಇದೆಯಾದ್ದರಿಂದ ಇವೆರಡಕ್ಕೂ ಯಾವುದೋ ಒಂದು ರೀತಿಯ ಸಂಬಂಧ ಇದ್ದೇ ಇರುತ್ತದೆ. ಆ ಉಪನಿಷತ್ತುಗಳ ಸಾರವೇ ಶ್ರೀಮದ್ಭಗವದ್ಗೀತೆ . ಆ ವಿಷಯವನ್ನು ಇಲ್ಲಿ ಸೂಚಿಸುವುದಕ್ಕಾಗಿ ಕಾಶಿರಾಜ ಶ್ರೀ ಎಂದು ತಿಳಿಸಿದ್ದಾರೆಂದು ಅರ್ಥಮಾಡಿಕೊಳ್ಳಬಹುದು 'ಕಾಶಿರಾಜಶ್ಚ ವೀರ್ಯವಾನ್ ಹಾಗೇ ಪುರಜಿತ್ ಕುಂತಿಭೋಜಃ ಎಂಬ ಹೆಸರು ಕುಂತಿದೇವಿಯ ತಂದೆಯನ್ನು ಕುರಿತಾಗಿ ಹೇಳುತ್ತಾರೆ. ಕುಂತಿದೇವಿಯನ್ನು ಸಾಕಿದ ತಂದೆ ಆ ವಂಶದಲ್ಲಿ ಇರುವ ರಾಜರ ಹೆಸರು ಕುಂತಿಭೋಜಃ ಎಂದೇ ಇರುತ್ತವೆ. ಆದ್ದರಿಂದ ಆ ವಂಶದ ಮೂಲಕ ಬಂದಿರುವ ಪಾಂಡವರ ಸಮಾನ ಕಾಲದಲ್ಲಿನ ವೀರ ಹಾಗೇ ಶೈಬ್ಯಾಶ್ಚ ಈತ ಶಿಬಿ ದೇಶದ ರಾಜ. ಈತ "ನರ್‍ರ ಪುಂಗವಃ" ಮಹಾವೀರ. ವೀರರನ್ನು ಲೆಕ್ಕಿಸಬೇಕೆಂದರೆ ಶೈಬಶ್ಚ ಶಿಬಿ ದೇಶದ ರಾಜನೂ ಇರುತ್ತಾನಾದ್ದರಿದ ಅಂತಹಾ ರಾಜನೂ ಪಾಂಡವರ ಪಕ್ಷದಲ್ಲಿ ಸೇರಿದ್ದಾನೆ ಎಂದು ಅಸೂಯೆಯನ್ನು ಪ್ರದರ್ಶಿಸುತ್ತಿದ್ದ ಇನ್ನೂ ಕೆಲವೂ ವೀರರ ಹೆಸರುಗಳನ್ನು ಈ ಶ್ಲೋಕದ ಮುಖಾಂತರ ತಿಳಿದುಕೊಳ್ಳಬಹುದು.

'ಯಥಾಮನ್ಯುಶ್ಚ ವಿಕ್ರಾಂತ ಉತ್ತಮೌಶ್ಚ ವೀರ್ಯವಾನ್
ವ್ಯಾಭದ್ರೋ ದ್ರೌಪದೇಯಾಶ್ಚ ಸರ್ವ ಏವ ಮಹಾರಾಥಾ॥1-6

ಎಂದು ಯಥಾಮನ್ಯುವು ವರಸೆಯಲ್ಲಿ ನೋಡಿದರೆ ದೃಷ್ಟದ್ಯುಮ್ನನಿಗೆ ತಮ್ಮನಾಗುತ್ತಾನೆ. ಇವರನ್ನು ವಿಕ್ರಾಂತಃ ಎಂದು ಕರೆಯುತ್ತಾನೆ. ಅಂದರೆ ಇವರು ಮಹಾನ್ ಪರಾಕ್ರಮಶಾಲಿಗಳು ಎಂದರ್ಥ. ಅಲಾಗೆ ಉತ್ತಮೌಜಾಃ ಇನ್ನೊಬ್ಬ ವೀರ. ಯುಧಾಮನ್ಯುವಿಗೆ ತಮ್ಮನ ವರಸೆಯಲ್ಲಿ ಬರುವ ಉತ್ತಮೌಶ್ಚ ವಿರ್ಯವಾನ್ ಬಹಳ ಪರಾಕ್ರಮಶಾಲಿ ಹಾಗೇ ಸೌಭದ್ರಃ ಸುಭದ್ರೆಯ ಮಗನಾದ ಅಭಿಮನ್ಯುವು ಅವನಿಗೆ ಕೇವಲ ಹದಿನಾರು ವರ್ಷ ವಯಸ್ಸು, ಇನ್ನೂ ವಿದ್ಯಾಭ್ಯಾಸವನ್ನೂ ಪೂರ್ತಿ ಮಾಡಿಲ್ಲ. ಸಂಪೂರ್ಣವಾಗಿ ವ್ಯೂಹಗಳನ್ನು ಭೇದಿಸಿಕೊಂಡು ಒಳಗೇ ಬರುವುದು ಹೇಗೆಂದು ತಿಳಿದಿಲ್ಲ ಶಸ್ತ್ರಾಸ್ತ್ರಗಳ ಉಪದೇಶ ಸರಿಯಾಗಿ ಆಗಿರುವುದಿಲ್ಲ ಆದರೆ ಅವನು ಮಹಾವೀರ ಎಂದು ಎಲ್ಲರೂ ಹಾಡಿ ಹೊಗಳುತ್ತಿದ್ದಾರೆ. ಆ ಹದಿಹರೆಯದವನ ಎದೆಯಲ್ಲಿ ವೀರತ್ವ ಮನೆ ಮಾಡಿದೆ. ನಮ್ಮ ಅಪ್ಪ, ದೊಡ್ಡಪ್ಪಂದಿರು, ಚಿಕ್ಕಪ್ಪಂದಿರಿಗೆ ಕೌರವರು ಅನ್ಯಾಯ ಮಾಡುತ್ತಿದ್ದಾರಲ್ಲಾ ಎಂಬ ಕ್ರೋಧವಿದೆ. ಅದಕ್ಕೆ ಕೌರವರ ಮೇಲೆ ಪ್ರತೀಕಾರ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿ ಬಂದಿದ್ದೇನೆಂದು ಗರ್ವದಿಂದ ಜಂಭದಿಂದ ಹೇಳುತ್ತಿದ್ದಾನೆ. ಅಂತಹಾ "ಸೌಭದ್ರಃ ಸುಭದ್ರೆಯ ಕುಮಾರನ ಬಗೆಗೆ ಈಗಲೇ ಒಳ್ಳೆಯ ಸಮಾಚಾರ ಬಂದಿದೆ. ಮಹಾವೀರನಾದ ಅವನು ಎದಿರಾದರೆ ಅವನಿಗೆ ಮೋಸ ಮಾಡುವುದಕ್ಕೆ ಸಿದ್ಧವಾಗಿದ್ದರು. ಈ ಅಭಿಮನ್ಯುವನ್ನು ಯಾರೂ ಮುಂದೆಯಿಂದ ಸೋಲಿಸಲಾಗುವುದಿಲ್ಲ. ಅಂತಹಾ ಮಹಾವೀರ ದ್ರೌಪದೇಯಾಶ್ಚಣ ದ್ರಾಪದಿಯ ಕುಮಾರರು ಐದು ಮಂದಿ. ಐದು ಜನ ಪತಿಗಳು ಇವೆಲ್ಲಾ ನಮಗೆ ಗೊತ್ತಿರುವುದೇ ಆಗಿದೆ. ಒಬ್ಬೊಬ್ಬ ಪಾಂಡವನ ಬಳಿ ಒಬ್ಬೊಬ್ಬ ಕುಮಾರನಿದ್ದಾನೆ. ಭೀಮನ ಮಗ ಶೃತಸೋಮ. ಅರ್ಜುನನ ಮಗ ಶೃತಕೀರ್ತಿ ನಕುಲ ಮಗ ಶತಾನಿಕ. ಸಹದೇವನ ಮಗ ಶ್ರುತಸೇನ ಹೀಗೆ ಎಲ್ಲರೂ ರಣರಂಗದಲ್ಲಿ ಸಿದ್ಧರಾಗಿ ನಿಂತಿದ್ದಾರೆ. ಇವರೆಲ್ಲಾ ಆಗಲೇ ಮಹಾವೀರರೆಂದು ಕರೆಯಿಸಿಕೊಳ್ಳುತ್ತಿ ದ್ದಾರೆ. ಇವರೆಲ್ಲರನ್ನೂ ಒಬ್ಬೊಬ್ಬರನ್ನಾಗಿ ನೆನೆಪಿಸಿಕೊಳ್ಳುತ್ತಿದ್ದಾನೆ. ಎರಡು ವಿಷಯಗಳನ್ನು ಗಮನಿಸಿದರೆ ಯಾರನ್ನಾದರೂ ತನ್ನ ಬಂಧುಗಳ ವರಸೆಯಲ್ಲಿ ಮಾತನಾಡಿದನೇ? ನನ್ನ ತಮ್ಮ, ನನ್ನ ಅಣ್ಣ, ನನ್ನ ಭಾವ ಅಥವಾ ಅವರ ಹೆಸರನ್ನಾದರೂ ಹೇಳಿದನೇ? ಸೌಭದ್ರಃ ಎಂದು ಸುಭದ್ರೆಯ ಹೆಸರು ಹೇಳಿದ. ದ್ರೌಪದೇ ಯಾಶ್ಚ ಎಂದು ದ್ರೌಪದಿಯ ಹೆಸರು ಹೇಳಿದನಾಗಲೀ ನನ್ನ ತಮ್ಮನ ಮಕ್ಕಳು ಎಂದು ಹೇಳಲಿಲ್ಲ. ದುರ್ಯೋಧನನಲ್ಲಿ ಮಾನವತೆಯೇ ನಶಿಸಿ ಹೋಗಿತ್ತು ಮಾನವ ಸಂಬಂಧಗಳಿಗೆ ಬೆಲೆ ಇಲ್ಲ. ಕೇವಲ ಯುದ್ಧದಲ್ಲಿ ನಾನು ಗೆಲ್ಲಬೇಕು ರಾಜನಾಗಬೇಕು ಎಂಬ ಆಸೆ. ಅತಿಯಾದ ಆಸೆ ಇರುವವನಿಗೆ ಮತಿ ನಾಶ ಖಂಡಿತ ಎಂಬುದಕ್ಕೆ ಇದೇ ಉದಾಹರಣೆ ಮನುಷ್ಯರಿಗೆ ಬೆಲೆ ಕೊಡದೆ ಕೇವಲ ನಮಗೆ ಕಣ್ಣಿಗೆ ಕಾಣಿಸುವ ನಶ್ವರವಾದ ಪದಾರ್ಥಗಳ ಮೇಲೆ ವ್ಯಾಮೋಹ ಇರುವವರಿಗೆ ದುರ್ಯೋಧನನಿಗೆ ಎಂತಹಾ ಗತಿ ಬಂತೋ ಅದೇ ಗತಿ ಬರುತ್ತದೆ ಎಂದು ಹೇಳುವುದಕ್ಕೆ ಈ ಮಾತುಗಳೇ ಪ್ರತ್ಯಕ್ಷವಾದ ಉದಾಹರಣೆ ಸರ್ವ ಏವ ಮಹಾರಥಾಃ ಎನ್ನುತ್ತಿದ್ದಾನೆ. ಎಲ್ಲರೂ ಮಹಾವೀರರೇ ಇದ್ದಾರೆ ಎನ್ನುತ್ತಿದ್ದಾನೆ. ರಥಿ ಮಹಾರಥಿ ಅತಿರಥ ಮಹಾರಥ ಹೀಗೆ ನಾಲ್ಕು ವಿಧಗಳಿವೆ. ನಾಲ್ಕು ವರಸೆಗಳಿವೆ ಇವರನ್ನು ನಾಲ್ಕು ವಿಭಾಗವಾಗಿ ವಿಭಜಿಸಬೇಕು. ಆದರೆ "ಸರ್ವ ಏವ ಮಹಾರಥಃ" ಎಂದು ಎಲ್ಲರನ್ನೂ ಸಮಾನದೃಷ್ಟಿ ಯಿಂದ ಹೇಳುತ್ತಿದ್ದಾನೆ . ಹಾಗಾದರೆ ರಥಿ ಯಾರು? ಮಹಾರಥ ಯಾರು? ಅತಿ ರಥ ಯಾರು? ಇವೆಲ್ಲವನ್ನೂ ಮುನ್ಮುಂದೆ ತಿಳಿದುಕೊಳ್ಳೋಣ.

(-ಮುಂದುವರೆಯುತ್ತದೆ.)



# ಸನಾತನ ಧರ್ಮದಲ್ಲಿ ಜ್ಯೋತಿಷ್ಯ ಶಾಸ್ತ್ರದ ಮಹತ್ವ

## ಗುರು ಗ್ರಹದ ಪರಿಚಯ

1. ಗುರುಗ್ರಹವು ಎಲ್ಲಾ ಗ್ರಹಗಳಿಗಿಂತ ಭಾರವಾದ ಗ್ರಹ.

2. ಗುರುಗ್ರಹವು ಎಲ್ಲಾ ಗ್ರಹಗಳಿಗಿಂತ ವಿಶಾಲವಾದ ಗ್ರಹ

3. ಗುರುಗ್ರಹವು ಸೂರ್ಯನಿಂದ 76,97, 73,940 ಕಿ.ಮಿ. ದೂರದಲ್ಲಿದೆ.

4. ಗುರುಗ್ರಹದ ವ್ಯಾಸ 142700 ಕಿ.ಮಿ. (Maximum)

5. ಗುರುಗ್ರಹದಲ್ಲಿ 12 ಉಪಗ್ರಹಗಳಿವೆ.

6.ಲೋ,.ಯುರೋಪ, ಗನಿಮಡೆ ಮತ್ತು ಕಾಲಿಸ್ಟೋವೆಂಬ ಗುರು ಗ್ರಹದ ಮುಖ್ಯ ಉಪಗ್ರಹಗಳು.

7. ಗುರುಗ್ರಹವು ವಿಕಸಿಸುವ ಗ್ರಹ.

8. ಗುರುಗ್ರಹವನ್ನು ದೇವಗುರು ಎಂದು ಕರೆಯಲಾಗಿದೆ.

9. ಗುರುಗ್ರಹವನ್ನು ಅಂಧಕಾರ ಹಾಗೂ ಅಜ್ಞಾನವನ್ನು ಹೋಗಲಾಡಿಸುವ ಗುರು ವೆಂದು ಪರಿಗಣಿಸಲಾಗಿದೆ.

10. ಹಿಂದುಗಳ ಸತ್ವಗುಣವನ್ನು ಗುರುಗ್ರಹವು ಪ್ರತಿನಿಧಿಸುತ್ತದೆ.

11. ಗುರುಗ್ರಹವು ಹಣದ ಅಧಿಕಾರವನ್ನು ನಿರ್ವಹಿಸಿ ಕಾಲಪುರುಷನಿಗೆ ಬೇಕಾದ ಎಲ್ಲಾ ಸುಖಸಂತೋಷವನ್ನು ಕಲ್ಪಿಸುವುದೆಂದು ಪರಿಗಣಿಸಲಾಗಿದೆ.

12. ಸಾಮಾಜಿಕ ನ್ಯಾಯ, ಧರ್ಮ, ಶುದ್ಧಭಾವಗಳನ್ನು ಪ್ರತಿನಿಧಿಸುತ್ತದೆ.

13. ಹಿಂದೆ ಗುರುಗ್ರಹದ ಕಾಲವಿರುವಾಗ ಔಷಧಿಯನ್ನು ವೈದ್ಯರು ರೋಗಿಗೆ ಕೊಡುತ್ತಿದ್ದರು.

14. ವೈದ್ಯರು ಔಷಧ ಸೂಚಿ ಚೀಟಿಯ ಮೇಲೆ ಮೊದಲು (Rx)ಬರೆಯುವುದು ಗುರುಗ್ರಹವನ್ನು ಪ್ರಾರ್ಥಿಸುವ ರೀತಿಯೆಂದು ಪರಿಗಣಿಸಲಾಗಿದೆ.

15. ಗುರುಗ್ರಹವು ಅಗ್ನಿಮಯದಿಂದ ಕೂಡಿದೆ.

16. ಗುರುಗ್ರಹವು ಉತ್ತಮ ಶೀಲ ಸ್ವಭಾವದ ಪರೋಪಕಾರಗುಣವುಳ್ಳ, ಪೌರುಷವುಳ್ಳ, ಫಲವತ್ತಾದ, ಉಲ್ಲಾಸವುಳ್ಳ ಗ್ರಹ.

17. ಗುರುಗ್ರಹವು ಈಶಾನ್ಯ ದಿಕ್ಕಿನ ಅಧಿಪತಿ ಮತ್ತು ಹೇಮಂತ ಋತುವಿನ ಕಾರುಬಾರ ಮಾಡುವುದೆಂದು ಪರಿಗಣಿಸಲಾಗಿದೆ.

18. ಗುರುಗ್ರಹದ ಬಣ್ಣ ಹಳದಿ ನೇರಳೆ.

19. ತವರ, ಚಿನ್ನ, ಪುಷ್ಪರಾಗ, ಪ್ಲಾಟಿನಮ್, ಲೋಹ ಮತ್ತು ರತ್ನಗಳನ್ನು ಪ್ರತಿನಿಧಿಸುತ್ತದೆ.

20. ಗುರುಗ್ರಹವು ಅರ್ಥಿಕಸಂಪನ್ಮೂಲ ಹಾಗೂ ಮಕ್ಕಳ ಅಧಿಪತಿ.



- ಆರ್. ಶ್ರೀನಿಧಿ
99705 65978



21. ವಿದ್ಯಾಭ್ಯಾಸ, ಸಂತೋಷ, ಆರೋಗ್ಯ, ಪ್ರೀತಿ, ಹಿರಿಯರಿಗೆ ಮಾರ್ಯದೆ ಕೊಡುವ ನಡುವಳಿಕೆ ಐಶ್ಚರ್ಯ, ಮರ್ಯಾದೆ, ಖ್ಯಾತಿಗಳ ಮೇಲೆ ಗುರುಗ್ರಹವು ಕಾರು ಬಾರ ಮಾಡುತ್ತದೆ.

22.ಗುರುಗ್ರಹವು ಕಾಲ ಪುರುಷನಿಗೆ ಹಳದಿ ಬಣ್ಣಗಳ್ಳುಳ್ಳ ಚರ್ಮ, ಕಂದು ಬಣ್ಣದ ಕಣ್ಣು ಮತ್ತು ಕೂದಲು, ತಾರುಣ್ಯದಲ್ಲಿ ಒಳ್ಳೆಯ ಬೆಳವಣಿಗೆ, ಬುದ್ಧಿವಂತಿಕೆಯನ್ನು ಕೊಡುತ್ತದೆ.

23. ಗುರುಗ್ರಹ ಪಿತ್ತ ಜನಕಾಂಗ, ರಕ್ತ ನಾಳಗಳಲ್ಲಿ ರಕ್ತ ಚಲಿಸುವುದಕ್ಕೆ, ಕೊಬ್ಬು, ಮೂತ್ರಜನಕಾಂಗ, ತೊಡೆ, ಅಂಗಾಲು ಬಲಗಡೆಯ ಕಿವಿ, ಬೆಳವಣಿಗೆ, ಶ್ವಾಸಕೋಶದ ಮೇಲೆ ಅಧಿಕಾರ ಮಾಡುವುದೆಂದು ಪರಿಗಣಿಸಲಾಗಿದೆ.

24.ಗುರುಗ್ರಹವು ನೀಚತ್ವದಲ್ಲಿರುವಾಗ ಕಾಲ ಪುರುಷನನ್ನು ದೇಶದ್ರೋಹಿಯನ್ನಾಗಿ, ಅಜಾಗರೂಕ, ಜೂಜುಗಾರನನ್ನಾಗಿ, ಬಡವನನ್ನಾಗಿ, ಜನಪ್ರಿಯವಿಲ್ಲದವನಾಗಿ, ಅತಿವ್ಯಯ ಮಾಡುವವನಾಗಿ ಮಾಡುತ್ತದೆ.

25.ಗುರುಗ್ರಹವು ಉಚಿತ್ವದಲ್ಲಿರುವಾಗ ಕಾಲಪುರುಷನಿಗೆ ಒಳ್ಳೆಯ ಆರೋಗ್ಯ, ಸಂತೋಷ, ದೀರ್ಘಾಯುಷ್ಯ, ಧಾರಾಳಮನಸ್ಸು, ಒಳ್ಳೆಯ ಅದೃಷ್ಟ, ಮರ್ಯಾದೆ ಸಮಾಜದಲ್ಲಿ ಒಳ್ಳೆಯ ಸ್ಥಾನ, ವಿವೇಕ, ಜೀವನದಲ್ಲಿ ಪ್ರಗತಿ, ಒಳ್ಳೆಯ ಯೋಚನಾಶಕ್ತಿ, ನ್ಯಾಯವಾದ ದುಡಿಮೆ ಬೆಲೆಯನ್ನು ಕಲ್ಪಿಸುತ್ತದೆ.

26. ಗುರುಗ್ರಹ ತೋರುವ ಕಾಯಿಲೆಗಳು ವಿಷಮ ರಕ್ತದ ಕಾಯಿಲೆ, ಪಿತ್ತಜನಕಾಂಗದ ಕಾಯಿಲೆ, ವಾಯುಸಂಬಂಧ ಪಟ್ಟ ಕಾಯಿಲೆ, ಅಂಡವಾಯು, ಚರ್ಮದ ಕಾಯಿಲೆ, ಶೀತ, ಮುಂತಾದವನ್ನು ತೋರುತ್ತದೆ.

27. ಕೊಬ್ಬಿರುವ ಆಹಾರ ಕಿತ್ತಳೆ, ಬಾಳೆಹಣ್ಣು, ಅರಳಿಮರ, ರಬ್ಬರ್ ಮರ, ಹಳದಿ ಬಣ್ಣದ ಹೂಗಳು, ಮತ್ತು ತರಕಾರಿಗಳು, ಕೆಂಪು ಗುಲಾಬಿ, ಬೇಳೆಗಳು, ಓಕ್‌ಮರ, ಅತ್ತಿ ಹಣ್ಣುಗಳನ್ನು ಗುರುಗ್ರಹವು ಪ್ರತಿನಿಧಿಸುತ್ತದೆ.

28.ಕುದುರೆ, ಎತ್ತು, ಆನೆ, ಗಂಡು ಸಾರಂಗ, ನಾಯಿ, ಬೆಕ್ಕು, ಗರುಡ ಪಕ್ಷಿ, ನವಿಲು, ತಿಮಿಂಗಲ,ಹಂದಿ, ಮೀನುಗಳನ್ನು ಗುರುಗ್ರಹವು ಪ್ರತಿನಿಧಿಸುತ್ತದೆ.

## ರಸಪ್ರಶ್ನೆ

**ಕ್ವಿಜ್**

ಅ) ಸರಸ್ವತೀದೇವಿ ಗಿಡವನ್ನು ಏನೆಂದು ಕರೆಯುತ್ತಾರೆ?
1. ಒಂದೆಲಗ 2. ದೊಡ್ಡಿಪತ್ರಿ
3. ಮಲ್ಲಿಗೆ 4. ಸಂಪಿಗೆ

ಆ) ಸರಸ್ವತೀದೇವಿ ಧರಿಸಿರುವ ವೀಣೆಯ ಹೆಸರೇನು?
1. ಮಹತಿ 2. ಕಚ್ಚಪಿ
3. ಪಿಂಗಳ 4.ಕಳಾವತಿ

ಇ) ಲಕ್ಷ್ಮೀದೇವಿ ಸಾಮಾನ್ಯವಾಗಿ ಯಾವುದರ ಮೇಲೆ ಕುಳಿತಿರುತ್ತಾಳೆ?
1.ಸಿಂಹ 2.ಹುಲಿ
3.ಕಮಲ 4.ಕುದುರೆ

ಈ) ದುರ್ಗಾದೇವಿಯನ್ನು ಯಾವ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ?
1.ಸಿಂಹವಾಹಿನಿ 2.ಹಂಸವಾಹಿನಿ
3.ಕಮಲಾಸನೆ 4.ಗರುಡವಾಹಿನಿ

ಉ) ಸಾಮವೇದಕ್ಕೆ ಅಧಿಕಾರಿಣಿಯಾದ ಮಾನಸಾ ದೇವಿ ಯಾರ ಮಗಳು?
1.ಕಶ್ಯಪ 2. ಗಾರ್ಗೇಯ
3.ಗೌತಮ 4. ವಸಿಷ್ಠ

ಊ) ಸರಸ್ವತೀದೇವಿಯನ್ನು ಯಾವ ಮತ್ತೊಂದು ಹೆಸರಿನಿಂದ ಕರೆಯುತ್ತಾರೆ?
1. ಪದ್ಮಾವತಿ 2. ಶಕ್ತಿ
3. ದುರ್ಗಾ 4. ಬ್ರಹ್ಮಾಣಿ

ಋ) ಸರಸ್ವತೀದೇವಿ ಯಾರ ಮಗಳು ?
1. ಪ್ರದ್ಯುಮ್ನ 2. ಕೃಷ್ಣ
3.ಶಿವ 4.ಬ್ರಹ್ಮ

ಉತ್ತರಗಳು:
ಅ) 1 ಆ) 2 ಇ) 3 ಈ) 1 ಉ) 1 ಊ) 4 ಋ) 1

ನೀತಿ ಕಥೆ

# ಪರಮ ಭಕ್ತ ಪರೀಕ್ಷಿತ್ ರಾಜ

-ಶ್ರೀಮತಿ. ಎ. ಗೀತಾ ವೀರ ರಾಘವನ್



ಉತ್ತರೆಯ ಗರ್ಭದಲ್ಲಿದ್ದ ಪರೀಕ್ಷಿತ್ ಅಶ್ವತ್ಥಾಮನ ಬ್ರಹ್ಮಾಸ್ತ್ರದ ತೇಜಸ್ಸಿನಿಂದ ಸುಡುತ್ತಿರುವಾಗ ಪರಮ ಪುರುಷ ಶ್ರೀಕೃಷ್ಣ ಉತ್ತರೆಯ ಗರ್ಭವನ್ನು ಪ್ರವೇಶಿಸಿ ಆ ಶಿಶುವನ್ನು ರಕ್ಷಿಸಿದನು. ಆಗ ಮಗು ಪರೀಕ್ಷಿತ್ ಶಂಖ ಚಕ್ರ, ಗಧಾಪಾಣಿಯಾಗಿದ್ದ ಶ್ರೀ ಕೃಷ್ಣನ ದಿವ್ಯದರ್ಶನ ಪಡೆದಿದ್ದನು. ಮುಂದೆ ಪರೀಕ್ಷಿತನು ಅತ್ಯಂತ ಧರ್ಮಿಷ್ಠನಾದ ರಾಜನಾದನು. ಒಮ್ಮೆ ಅವನು ದಿಗ್ವಿಜಯ ಮಾಡುತ್ತಿದ್ದಾಗ ಒಂದೆಡೆ ಶೂದ್ರನ ರೂಪದಲ್ಲಿ ಕಲಿ ಪುರುಷನು ರಾಜವೇಷವನ್ನು ತೊಟ್ಟು ಒಂದು ಗೋವು ಮತ್ತು ಒಂದು ಎತ್ತು ಈ ಜೋಡಿಯನ್ನು ಕಾಲಿನಿಂದ ಒದೆಯುತ್ತಿರುವುದನ್ನು ನೋಡಿದನು. ಆಗ ಪರೀಕ್ಷಿತನು ಅವನನ್ನು ಪರಾಕ್ರಮದಿಂದ ನಿಗ್ರಹಿಸಿದನು.

ಮುಂದೆ ಪರೀಕ್ಷಿತನು ಕುರುಜಾಪ, ಗುಲ ದೇಶದಲ್ಲಿ ಚಕ್ರವರ್ತಿಯಾಗಿದ್ದಾಗ ತನ್ನ ಚಕ್ರಾಧಿಪತ್ಯಕ್ಕೆ ಒಳಪಟ್ಟ ದೇಶದಲ್ಲಿ ಕಲಿಪುರುಷನು ಪ್ರವೇಶಿಸಿರುವನೆಂದು ಕೇಳಿದನು. ಅಪ್ರಿಯ ಸಮಾಚಾರವನ್ನು ಕೇಳಿ ಆತನಿಗೆ ದುಃಖವಾಯಿತಾದರೂ ಆ ದುಷ್ಟನಾದ ಕಲಿ ಪುರುಷನನ್ನು ಸಂಹಾರ ಮಾಡದೇ ಬಿಟ್ಟು ಬಿಟ್ಟನು. ಪರೀಕ್ಷಿತನು ದಿಗ್ವಿಜಯಕ್ಕೆ ಹೋದಲ್ಲೆಲ್ಲಾ ತನ್ನ ತಾತಂದಿರ ಪರಾಕ್ರಮ, ಧರ್ಮನಿಷ್ಠೆ ಕೇಳಿ ಬರುತ್ತಿತ್ತು ಅದರೊಂದಿಗೆ ಶ್ರೀಕೃಷ್ಣ ಪರಮಾತ್ಮನ ಮಹಾತ್ಮೆ, ಅವನು ಭಕ್ತರ ಬಗ್ಗೆ ತೋರಿಸುತ್ತಿದ್ದ ವಾತ್ಸಲ್ಯ,ಶ್ರೀಕೃಷ್ಣನು ಪ್ರೇಮ ಪರವಶನಾಗಿ ಪಾಂಡವರಿಗೆ ಸಾರಥ್ಯ ಮಾಡಿದುದು ಎಲ್ಲಾ ಕೇಳಿ ಶ್ರೀಕೃಷ್ಣನ ಚರಣಕಮಲಗಳಲ್ಲಿ ಭಕ್ತಿಯು ಇನ್ನೂ ಹಚ್ಚುತ್ತಿತ್ತು. ಅವನು ತಾಯಿಯ ಗರ್ಭದಲ್ಲಿದ್ದಾಗ ಶ್ರೀ ಕೃಷ್ಣ ಶಂಖ, ಚಕ್ರಪೀತಾಂಬರಧಾರಿಯಾಗಿ ಒಳಗೆ ದಿವ್ಯ ದರ್ಶನ ಕೊಟ್ಟಿದ್ದನ್ನು ನೆನೆದು ಪರವಶನಾಗುತ್ತಿದ್ದನು.

ಹೀಗಿದ್ದಾಗ ಒಂದು ದಿನ ಪರೀಕ್ಷಿತ್ ಬೇಟೆಗೆಂದು ಕಾಡಿಗೆ ಹೋದನು. ಅಲ್ಲಿ ಅವನಿಗೆ ಬಹಳ ಬಾಯಾರಿಕೆಯಾಯಿತು.ಅಲ್ಲಿ ಋಷಿಯೊಬ್ಬರು ಧ್ಯಾನಾಸಕ್ತರಾಗಿದ್ದರು. ಹತ್ತಿರದಲ್ಲಿ ಎಲ್ಲಾದರೂ ನೀರು ಸಿಗುವುದೇ ಎಂದು ಆ ಋಷಿಯನ್ನು ಕೇಳಿದನು.ಇವನು ಹೇಳಿದ್ದು ಅವರಿಗೆ ಕೇಳಿಸಲಿಲ್ಲ. ಅವರು ಜವಾಬು ಕೊಡಲಿಲ್ಲ. ದುರದೃಷ್ಟವಶಾತ್ ಪರೀಕ್ಷಿತ್ ರಾಜನಿಗೆ ಬಹಳ ಕೋಪ ಬಂದು ಹತ್ತಿರದಲ್ಲಿ ಸತ್ತು ಬಿದ್ದಿದ್ದ ಒಂದು ಹಾವನ್ನು ತೆಗೆದು ಆ ಋಷಿಗಳ ಕುತ್ತಿಗೆಗೆ ಹಾಕಿಬಿಟ್ಟನು. ಅಷ್ಟರಲ್ಲಿ ಅಲ್ಲಿ ಬಂದು ನೋಡಿದ ಋಷಿ ಕುಮಾರನಿಗೆ ಬಹಳ ಕೋಪ ಬಂದು ಇಂದಿಗೆ ಒಂದು ವಾರಕ್ಕೆ ಆ ತಕ್ಷಕ ಬಂದು ಪರೀಕ್ಷಿತ್ ರಾಜನನ್ನು ಕಚ್ಚಲಿ ಎಂದು ಹತ್ತಿರದಲ್ಲಿದ್ದ ನದಿಯ ತೀರ್ಥವನ್ನು ಪ್ರೋಕ್ಷಿಸಿ ಶಪಿಸಿಬಿಟ್ಟನು.ಆ ಶಾಪದಿಂದ ಋಷಿಗೆ ಸಂತೋಷವಾಗಲಿಲ್ಲ. ನಮ್ಮನ್ನು ಧರ್ಮದಿಂದ ರಕ್ಷಿಸುತ್ತಿರುವ ರಾಜನಿಗೆ ನೀನು ಈ ರೀತಿ ಶಪಿಸಬಾರದಿತ್ತು ಎಂದು ಪಶ್ಚಾತ್ತಾಪಪಟ್ಟರು.

ಇತ್ತ ಪರೀಕ್ಷಿತನು ತಿಂಡಿ ತೀರ್ಥಗಳನ್ನು ಬಿಟ್ಟು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟು ಪ್ರಾಯೋಪವೇಶ ಮಾಡಲು ಸಿದ್ಧನಾಗುತ್ತಿದ್ದನು. ತನ್ನ ತಪ್ಪಿಗೆ ದುಃಖಿಸಿ ಮೋಕ್ಷಸಾಧನೆ ಮಾಡಿಕೊಳ್ಳಬೇಕೆಂದು ಪರಿತಪಿಸುತ್ತಿದ್ದನು.ಅವನು ಶುಕ ಮುನಿಗಳನ್ನು ಆಶ್ರಯಿಸಿ ಕೇವಲ ಒಂದು ವಾರದಲ್ಲಿ ಮೋಕ್ಷಸಾಧಿಸಿಕೊಳ್ಳಲು ಸಾಧ್ಯವೇ ಎಂದು ಕೇಳಿದನು. ಆಗ ಅವರು ಖಟ್ವಾಂಗನ ವೃತ್ತಾಂತವನ್ನು ತಿಳಿಸಿದರು. ಖಟ್ವಾಂಗನೆಂಬ ರಾಜನು ಒಮ್ಮೆ ದೇವ ದಾನವರ ಯುದ್ಧವು ಸಂಭವಿಸಿದಾಗ ದೇವತೆಗಳು ಖಟ್ವಾಂಗನ ಸಹಾಯವನ್ನು ಅಕ್ಷೇಪಿದರು. ಆ ರಾಜನು ದೇವತೆಗಳ ಪ್ರಾರ್ಥನೆ ಮೇರೆಗೆ ಅವರ ಸಹಾಯಕ್ಕಾಗಿ ನಿಂತು ದಾನವರ ಮೇಲೆ ಯುದ್ಧ ಮಾಡಿ ಜಯಿಸಿದನು. ದೇವತೆಗಳು ಸಂತೋಷದಿಂದ ಅವನು ಕೇಳಿದ ವರವನ್ನು ಕೊಡುವುದಾಗಿ ಹೇಳಿದರು. ಅವನು ಅವರು ತನ್ನ ಆಯುಃಪ್ರಮಾಣವನ್ನು ತಿಳಿಸಬೇಕೆಂದು ಕೇಳಿದನು.


ದೇವತೆಗಳು ಖಟ್ವಾಂಗನಿಗೆ ಅವನ ಆಯುಃಪ್ರಮಾಣವು ಇನ್ನು ಮುಹೂರ್ತ ಮಾತ್ರವೇ ಉಳಿದಿರುವುದೆಂದು ತಿಳಿಸಿದರು.ಆ ಮಾತನ್ನು ಕೇಳಿದೊಡನೆ ಖಟ್ವಾಂಗನು ವಿಮಾನವೇರಿ ತನ್ನ ಅಂತಃಪುರಕ್ಕೆ ಬಂದು ತನ್ನ ರಾಜ್ಯ ಕೋಶಾಧಿಗಳನ್ನು ತೊರೆದು ದೃಢವಾದ ವೈರಾಗ್ಯವನ್ನು ವಹಿಸಿ, ಶ್ರೀಹರಿಯ ಪಾದಾರವಿಂದವೊಂದರಲ್ಲೇ ನೆಟ್ಟ ಮನಸ್ಸುಳ್ಳವನಾಗಿ ಆ ಪರಮಾತ್ಮನ ನಾಮಸ್ಮರಣೆ ಮಾಡುತ್ತಾ ಎರುಡು ಗಳಿಗೆಗಳ ಕಾಲದೊಳಗೆ ಮೋಕ್ಷವನ್ನು ಹೊಂದಿದವನು. ನಿನಗಾದರೋ ಒಂದು ವಾರದ ಸಮಯವಿದೆ. ಎಲೈ ರಾಜನೇ, ಜೀವಾತ್ಮನನ್ನು ಒಬ್ಬ ರಥಿಕನಾಗಿ ತಿಳಿ. ಅವನಿಗೆ ಶರೀರವೇ ರಥವು ಬುದ್ಧಿಯೇ ಸಾರಥಿಯು. ಇಂದ್ರಿಯಗಳು ರಥವನ್ನೆಳೆಯ ತಕ್ಕ ಕುದುರೆಗಳಂತಿರುವುವು. ಮನಸ್ಸೆಂಬುದು ಆ ಕುದುರೆಗಳಿಗೆ ಕಟ್ಟಿದ ಹಗ್ಗದಂತಿರುವುದು.ಸ್ರಕ್ಚಂದನಾದಿ ವಿಷಯಗಳೇ ಅದರ ಸಂಚಾರ ಮಾರ್ಗಗಳೆನಿಸಿರುವುವು. ಆದ್ದರಿಂದ ಬುದ್ಧಿಯೆಂಬ ಸಾರಥಿಯ ಕೈಯಲ್ಲಿ ಮನಸ್ಸೆಂಬ ಹಗ್ಗದಿಂದ ಹಿಡಿಯಲ್ಪಟ್ಟಿರುವ ಇಂದ್ರಿಯಗಳೆಂಬ ಕುದುರೆಗಳು. ದೇಹವೆಂಬ ರಥವನ್ನು ವಿಷಯಗಳೆಂಬ ಬೀದಿಗಳಲ್ಲಿ ಸಿಕ್ಕದ ಕಡೆಗೆ ಎಳೆದುಕೊಂಡು ಹೋಗದ ಹಾಗೆ ತಡೆದಿಡಬೇಕಾದುದು ರಥಿಕನಾಗಿರುವ ಜೀವನ ಕರ್ತವ್ಯ.


ಮನುಷ್ಯನು ಅಂತ್ಯಕಾಲದಲ್ಲಿ ನಡೆಸಬೇಕಾದ ಕಾರ್ಯವೇನೆಂಬುದು ಕೇಳು. ಮನಸ್ಸಿನಲ್ಲಿ ಮರಣ ಭಯವನ್ನು ಬಿಟ್ಟು ಸರ್ವಸಂಗ ಪರಿತ್ಯಾಗ ಮಾಡಿ ಮನೆ ಮೊದಲಾದ ಸ್ವತ್ತುಗಳಲ್ಲಿ ಮಮತೆಯನ್ನು ತೊರೆಯಬೇಕು. ದೃಢಚಿತ್ತನಾಗಿ ಸರ್ವಲೋಕ ಪಾವನವಾಗಿ ಇರುವ 'ಓಂಕಾರ' ವೆಂಬ ಪ್ರಣವಾಕ್ಷರವನ್ನು ಎಡೆಬಿಡದೆ ಮನನ ಮಾಡಬೇಕು. ಆ ಶ್ರೀಹರಿಯಲ್ಲಿ ದೃಢಚಿತ್ತನಾಗಿ ಅವನನ್ನೇ ಧ್ಯಾನ ಮಾಡಿದರೆ ಅವನ ಪಾದಾರವಿಂದಗಳನ್ನು ಪಡೆಯುವುದು ಏನೂ ಕಷ್ಟವಿಲ್ಲ. ನಿನಗೆ ನಮ್ಮ ತಂದೆ ವ್ಯಾಸರು ನನಗೆ ಉಪದೇಶಿಸಿರುವ ಶ್ರೀಭಾಗವತ ಪುರಾಣ ತತ್ವವನ್ನು ಉಪದೇಶಿಸುತ್ತೇನೆ. ಅದನ್ನು ಕೇಳು ಎಂದು ಶ್ರೀ ಭಾಗವತ ತತ್ವವನ್ನು ಉಪದೇಶಿಸಿದರು.ಕೇಳುತ್ತಾ ಕೇಳುತ್ತಾ ಪರೀಕ್ಷಿತ್ ರಾಜನಿಗೆ ಶ್ರೀಕೃಷ್ಣನ ಪಾದಾರವಿಂದಗಳಲ್ಲಿ ಭಕ್ತಿ ಹೆಚ್ಚುತ್ತಾ. ಶ್ರೀಶುಕಮುನಿಗಳಿಗೆ ಸಂತೋಷವಾಗುವಂತಹ ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಆನಂದಿಸಿದನು. ಕೇಳಿದಷ್ಟೂ ಇನ್ನೂ ಕೇಳಬೇಕೆಂಬ ಲಾಲಸೆ. ಏಳನೇ ದಿನಪರೀಕ್ಷಿತ್ ರಾಜನಿಗೆ ಭಕ್ತಿ ಭಾವ ಅತ್ಯಂತ ಹೆಚ್ಚುತ್ತಾ. ಶ್ರೀಕೃಷ್ಣನನ್ನು ಭಜಿಸಲು ಹೊರಟರೆ ಅವನ ಕಣ್ಣ ಮುಂದೆ ಶ್ರೀ ಕೃಷ್ಣನ ಸಾಕ್ಷಾತ್ಕಾರವಾಗಿ ಶ್ರೀಕೃಷ್ಣನ ಅನೇಕ ಲೀಲೆಗಳನ್ನು ನೋಡುತ್ತಾ ಭಕ್ತಿ ಭಾವ ಉಕ್ಕಿ ಹರಿದು ಶ್ರೀಕೃಷ್ಣನ ಪಾದಾರವಿಂದಗಳನ್ನು ಪಡೆದು ಮೋಕ್ಷವನ್ನು ಸಾಧಿಸಿಕೊಂಡನು. ಅಂತಹ ಪರಮಭಕ್ತ ಪರೀಕ್ಷಿತ್ ರಾಜ.

## ಚಿತ್ರಕಥೆ

# ಶಿವನಿಂದ ಮುಕ್ತಿ ಪಡೆದ ಮೂಕ ಪ್ರಾಣಿಗಳು


ಕಥೆ : ತೆಲುಗು ಮೂಲ : ಶ್ರೀನಿವಾಸ ದೀಕ್ಷಿಕರು
ಅನುವಾದ : ಆರ್.ಕೆ.
ಚಿತ್ರಗಳು : ತುಲಸೀ ಪ್ರಸಾದ್




ಮುಂಚೆ ಸರ್ಪವೂ ನದಿಯಲ್ಲಿ ಸ್ನಾನವಾಚರಿಸಿ ಬಿಲ್ವಪತ್ರಗಳನ್ನು ತೆಗೆದುಕೊಂಡು ಬಂದು ಶಿವಲಿಂಗದ ಮೇಲೆ ಹಾಕಿ ಪೂಜಿಸುತ್ತಿತ್ತು. ನಂತರ ಆನೆಯು ತನ್ನ ಸೊಂಡಿಲಿನಲ್ಲಿ ನೀರು ಮತ್ತು ಹೂಗಳನ್ನು ತರುತ್ತಿತ್ತು.
ನನಗಿಂತ ಮುಂಚೆ ಯಾರೋ ಬಂದು ಶಿವಪೂಜೆ ಮಾಡುತ್ತಿದ್ದಾರೆ. ಅದನ್ನು ತೆಗೆದು ಹಾಕಿ ನಾನು ಅಭಿಷೇಕವನ್ನು ಮಾಡುತ್ತೇನೆ...
ಪ್ರತಿದಿನವೂ ಪೂಜೆ ಮಾಡುತ್ತಾ ಆ ಮೂಕ ಪ್ರಾಣಿಗಳು ಪರಸ್ಪರ ಶತ್ರುಗಳಾದವು ಒಮ್ಮೆ ಹಾವು ನಿರ್ಧರಿಸಿತು....
ನನ್ನ ನಂತರ ಆ ಆನೆಯು ಬಂದು ಪೂಜೆಯನ್ನು ಮಾಡುತ್ತಿದೆ. ಹೇಗಾದರೂ ಮಾಡಿ ಸೇಡನ್ನು ತೀರಿಸಿಕೊಳ್ಳಬೇಕು..
ನಂತರ ಹಾವನ್ನು ಕಂಡು ಆನೆಯು ಹೀಗೆ ನಿರ್ಧರಿಸಿತು.......
ನನಗಿಂತ ಮುಂಚೆ ಆ ಹಾವು ಬಂದು ಪೂಜೆಯನ್ನು ಮಾಡುತ್ತಿದೆ.ಹೇಗಾದರೂ ಮಾಡಿ ನಾನು ಸೇಡನ್ನು ತೀರಿಸಿಕೊಳ್ಳಬೇಕು.
ಮಾರನೆಯ ದಿನ ಆನೆಯು ಶಿವಲಿಂಗಕ್ಕೆ ಅಭಿಷೇಕವನ್ನು ಮಾಡುವಾಗ ಹಾವು ಆನೆಯ ಸೊಂಡಿಲನ್ನು ಸೀಳಿ ವಿಷವನ್ನು ಚುಚ್ಚಿತು. ಸಂಕಟದಿಂದ ಆನೆಯು ಹಾವನ್ನು ಕೊಲ್ಲುವ ಪ್ರಯತ್ನದಲ್ಲಿ ಕಲ್ಲಿನ ಬಲಿಪೀಠದ ಮೇಲೆ ತನ್ನ ತಲೆಯನ್ನು ಹೊಡೆಯಿತು.
ಸಾಯಿ... ಸಾಯಿ.... ನನ್ನ ಪೂಜೆಯನ್ನು ಭಗ್ನಗೊಳಿಸುವೆಯಾ!
ಆನೆಯ ಸೊಂಡಿಲಿನಿಂದ ಹೊರ ಬಿದ್ದ ಹಾವು ತನ್ನ ಗಾಯಗಳಿಂದ ಸಾವನ್ನಪ್ಪಿದೆ.
ಅಬ್ಬಾ..ಅಮ್ಮಾ..ಅಬ್ಬಾ..ಅಮ್ಮಾ..
ಶಿವನ ಪೂಜೆಗಾಗಿ ಹಾವು ಮತ್ತು ಆನೆ ಎರಡು ತಮ್ಮ ಜೀವವನ್ನು ಪ್ರಾಣ ತ್ಯಾಗ ಮಾಡಿವೆ. ಆಗ ಶಿವ ಪಾರ್ವತಿಯರು ಪ್ರತ್ಯಕ್ಷವಾಗಿ....
ನಿಮಗೆ ಮುಕ್ತಿಯನ್ನು ಅನುಗ್ರಹಿಸುತ್ತೇನೆ. ಇನ್ನು ಮುಂದೆ ಈ ಪವಿತ್ರ ಕ್ಷೇತ್ರವು ಶ್ರೀಕಾಳಹಸ್ತಿ ಎಂಬ ಹೆಸರಿನಿಂದ ಪ್ರಖ್ಯಾತಗೊಳ್ಳುತ್ತದೆ.
ಸರ್ವೇ ಜನಾಃ ಸುಖಿನೋ ಭವನ್ತು !

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಆ ತ್ತಿ ದ ನೇ ಪ್ತ

ಪ ಗಾ ಆ ವ

ಉತ್ತರಗಳು: ಆಪತ್ತಿಗಾದವನೇ ಆಪ್ತ

## ಮಕ್ಕಳೇ ಇದನ್ನು ಹೊಂದಿಸಿ ಬರೆಯಿರಿ :

| | |
|---|---|
| 1. ಶ್ರೀವೆಂಕಟೇಶ್ವರಸ್ವಾಮಿ | ಅ) ಶ್ರೀನಿವಾಸಮಂಗಾಪುರಂ |
| 2.ಶ್ರೀಸಿದ್ಧೇಶ್ವರಸ್ವಾಮಿ | ಆ) ತಿರುಪತಿ |
| 3.ಶ್ರೀಕಪಿಲೇಶ್ವರಸ್ವಾಮಿ | ಇ) ತಿರುಮಲೆ |
| 4.ಶ್ರೀಗೋವಿಂದರಾಜಸ್ವಾಮಿ | ಈ) ಕಪಿಲತೀರ್ಥ |
| 5.ಶ್ರೀಕಲ್ಯಾಣವೆಂಕಟೇಶ್ವರಸ್ವಾಮಿ | ಉ) ತಾಳ್ಳಪಾಕ |

ಉತ್ತರಗಳು : 1) ಇ 2) ಉ 3) ಈ 4) ಆ 5) ಅ

## ನಿಮಗಿದು ಗೊತ್ತಾ ಮಕ್ಕಳೇ ?

1.ಮಹಾಭಾರತದಲ್ಲಿ ದೇವವ್ರತ ಅಲ್ಲದೆ ಮತ್ತೊಂದು ಹೆಸರೇನು?

2.ದಶಾವತಾರದಿಂದ ಸತ್ಯ ಅಥವಾ ಕೃತಯುಗದಲ್ಲಿ ವಿಷ್ಣುವಿನ ಎಷ್ಟು ಅವತಾರಗಳು ಕಾಣಿಸಿಕೊಂಡವು?

3.ವಿಷ್ಣುವಿನ ದಶಾವತಾರದ ಮೊದಲ ಅವತಾರ ಯಾವುದು?

4.ನರಸಿಂಹ ಅವತಾರದಲ್ಲಿ ವಿಷ್ಣುವು ಯಾರನ್ನು ಕೊಲ್ಲುತ್ತಾನೆ.?

5.ಯಾವ ಯುಗದಲ್ಲಿ ಶ್ರೀರಾಮನು ಅಯೋಧ್ಯೆಯಲ್ಲಿ ಜನಿಸಿದನು?

6.ಪಾರ್ವತಿದೇವಿ ಯಾರ ಮಗಳು ?

7. ಗಂಗಾ ನದಿಯನ್ನು ಸ್ವರ್ಗದಿಂದ ಭೂಮಿಗೆ ತಂದವರು ಯಾರು?

ಉತ್ತರಗಳು: 1) ಭೀಷ್ಮ 2) ನಾಲ್ಕು 3) ಮತ್ಸ್ಯ 4) ಹಿರಣ್ಯಕಶಿಪು 5) ತ್ರೇತಾಯುಗ 6) ದಕ್ಷಪ್ರಜಾಪತಿ 7) ಭಗೀರಥ



Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಪತಿ ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 2022 ಮಾರ್ಚ್ 30 ರಿಂದ ಏಪ್ರಿಲ್ 07 ರ ವರೆಗೆ

**30-03-2022**
ಬುಧವಾರ
ಹಗಲು : ಧ್ವಜಾರೋಹಣ
ರಾತ್ರಿ :ದೊಡ್ಡಶೇಷವಾಹನ

**31-03-2022**
ಗುರುವಾರ
ಹಗಲು : ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**01-04-2022**
ಶುಕ್ರವಾರ
ಹಗಲು : ಸಿಂಹವಾಹನ
ರಾತ್ರಿ :
ಮುತ್ತಿನಚಪ್ಪರ ವಾಹನ

**02-04-2022**
ಶನಿವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ :ಸರ್ವಭೂಪಾಲವಾಹನ

**03-04-2022**
ಭಾನುವಾರ
ಹಗಲು : ಪಲ್ಲಕಿಯಲ್ಲಿ
ಮೋಹಿನಿ ಅವತಾರೋತ್ಸವ
ರಾತ್ರಿ :ಗರುಡವಾಹನ

**04-04-2022**
ಸೋಮವಾರ
ಹಗಲು : ಹನುಮದ್ವಾಹನ
ರಾತ್ರಿ :ಗಜವಾಹನ

**05-04-2022**
ಮಂಗಳವಾರ
ಹಗಲು : ಸೂರ್ಯಪ್ರಭವಾಹನ
ರಾತ್ರಿ :ಚಂದ್ರಪ್ರಭವಾಹನ

**06-04-2022**
ಬುಧವಾರ
ಹಗಲು : ರಥೋತ್ಸವ
ರಾತ್ರಿ :ಅಶ್ವವಾಹನ

**07-04-2022**
ಗುರುವಾರ
ಹಗಲು : ಚಕ್ರಸ್ನಾನ
ರಾತ್ರಿ :ಧ್ವಜಾವರೋಹಣ

SAPTHAGIRI (KANNADA) ILLUSTRATED MONTHLY Published by
Tirumala Tirupati Devasthanams Printing on 20-02-2022 and Posting at Tirupati
RMS.Regd. with the Registrar of Newspapers for India under RNI. No. APKAN/2021/80589.
Postal Regd.No.TRP/156/2021-2023 "Licenced to Post Without Prepayment
No. PMGK/RNP/WPP-04(6)/2021-2023" Posting on 20th of Every Month

